# ಕರ್ನಾಟಕ ವಿಧಾನ ಪರಿಷತ್

1. ಮಾನ್ಯ ಸದಸ್ಯರ ಹೆಸರು : ಶ್ರೀ ಶರಣಪ್ಪ ಮಟ್ಟೂರ
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1825
3. ಉತ್ತರಿಸುವ ದಿನಾಂಕ : 24.03.2020
4. ಉತ್ತರಿಸುವ ಸಚಿವರು : ಮಾನ್ಯ ಸಹಕಾರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್‌ನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಒಟ್ಟು ಎಷ್ಟು ತನಿಖೆಗಳು ನಡೆದಿವೆ: ಯಾರ್‍ಯಾರು ತನಿಖೆ ನಡೆಸಿದ್ದಾರೆ: (ವಿವರ ನೀಡುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್, ಬೆಂಗಳೂರು ಈ ಸಂಘದಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 25 ರಡಿ ಒಟ್ಟು 04 ಬಾರಿ ವಿಚಾರಣೆ ನಡೆದಿರುತ್ತದೆ. (ಅನುಬಂಧ-01 ರಂತೆ ವಿವರ ನೀಡಿದೆ) |
| ಆ | ಸಂಘಗಳ ನೋಂದಣಿ ಕಾಯ್ದೆ 1960 ಕಂದಾಯ ಇಲಾಖೆಯ ಅಧೀನದಲ್ಲಿದ್ದ ಕಂದಾಯ ಇಲಾಖೆ ಅಧಿಕಾರಿಗಳು ಸಂಘದ ಅಧ್ಯಕ್ಷರೊಡನೆ ಶಾಮೀಲಾಗಿ ಪ್ರಾಧಿಕಾರದಲ್ಲಿನ ಸಂಘದ ವಿರುದ್ಧ ತನಿಖೆ ನಡೆಸಲು ಪ್ರಾಧಿಕಾರದಲ್ಲಿಯೇ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅಧಿಕಾರಿಯನ್ನು ನೇಮಿಸಿರುವುದು ನಿಜವೇ: ಇದ್ದಲ್ಲಿ. ಅಲ್ಲಿನ ಅಧಿಕಾರಿಯನ್ನೇ ತನಿಖೆ ನೇಮಿಸಿರುವುದು ಕಾನೂನು ನಿಯಮಗಳಿಗೆ ವಿರುದ್ಧವಲ್ಲವೇ: | ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 25 ರಡಿ ವಿಚಾರಣೆ ನಡೆಸಲು ಸರ್ಕಾರವು ಆದೇಶ ಸಂಖ್ಯೆ: ಕಂಇ 102 ಮುನೋಸೋ 2015 ಬೆಂಗಳೂರು ದಿನಾಂಕ: 20-4-2016 ರನ್ವಯ ಶ್ರೀ ಎಸ್.ಇಂದುಧರ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತದೆ. ಆದರೆ ವಿಚಾರಣೆ ಸಮಯದಲ್ಲಿ ಶ್ರೀ ಎಸ್.ಇಂದುಧರ್ ಇವರು ಬಿಡಿಎನಲ್ಲಿ ಗುತ್ತಿಗೆ ಆಧಾರದ ಮೇಲೆ ಕಾನೂನು ಸಲಹೆಗಾರರಾಗಿ ಕರ್ತವ್ಯ ನಿರ್ವಹಿಸಿತ್ತಿದ್ದು, ವಿಚಾರಣಾಧಿಕಾರಿಯವರಾದ ಶ್ರೀ ಎಸ್.ಇಂದುಧರ್ ಇವರು ನಿಸ್ಪಕ್ಷಪಾತ ವರದಿಯನ್ನು ನೀಡಲು ಸಾಧ್ಯವಿಲ್ಲವೆಂದು ಈ ಕುರಿತು ಹೊಸದಾಗಿ ವಿಚಾರಣಾಧಿಕಾರಿಯನ್ನು ನೇಮಿಸಿ ಮರು ತನಿಖೆ ನಡೆಸುವಂತೆ ಶ್ರೀ ಬಿ.ಎಂ.ಚಿಕ್ಕಯ್ಯ ಹಾಗೂ ಇತರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೃತ್ತ ನೌಕರರ ಸಂಘ ಇವರ ಮನವಿಯಂತೆ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಅರ್ಜಿ ಸಮಿತಿಯು ಮರು ವಿಚಾರಣೆ ನಡೆಸಬೇಕೆಂದು ನಿರ್ದೇಶನ ನೀಡಿರುವಂತೆ ಸರ್ಕಾರದಿಂದ ಆದೇಶ ಸಂಖ್ಯೆ: ಸಇ 26 ಸಸಂನೋ 2016 ಬೆಂಗಳೂರು, ದಿನಾಂಕ:19.05.2017 ರಲ್ಲಿ ಶ್ರೀ ಎಸ್.ಸಿ.ಇಂಗಳಗಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಬೆಂಗಳೂರು ಇವರನ್ನು ತನಿಖಾಧಿಕಾರಿ /ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ. |
| ಇ | ನಿವೃತ್ತ ನ್ಯಾಯಾಧೀಶರವರು ಸಂಘದ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಿರುವುದು ನಿಜವೇ: ಇದ್ದಲ್ಲಿ ತನಿಖಾ ವರದಿಯ ಪ್ರತಿ ನೀಡುವುದು: | ಇಬ್ಬರು ನಿವೃತ್ತ ನ್ಯಾಯಾಧೀಶರುಗಳು ಸಂಘದ ಅವ್ಯವಹಾರ ಗಳ ಬಗ್ಗೆ ಪ್ರತ್ಯೇಕವಾಗಿ ತನಿಖೆ ನಡೆಸಿ ವರದಿ ಸಲ್ಲಿಸಿರುವುದು ನಿಜವಿರುತ್ತದೆ.<br>1. ಶ್ರೀ.ಎಸ್. ಇಂದುದರ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಧೀಶರು, (ನಿವೃತ್ತ) ಇವರನ್ನು ದಿನಾಂಕ: 20-04-2016ರಂದು ಸರ್ಕಾರವು ವಿಚಾರಣಾಧಿಕಾರಿ ಯಾಗಿ ನೇಮಿಸಿರುತ್ತದೆ. ಸದರಿಯವರು ದಿನಾಂಕ:18-05-2016ರಂದು ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | 2. ಶ್ರೀ.ಎ.ಸಿ.ಇಂಗಳಗಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ದಿನಾಂಕ:19-5-2017ರಲ್ಲಿ ನೇಮಕ ಮಾಡಿದ್ದು ಸದರಿ ವಿಚಾರಣಾಧಿ ಕಾರಿಯವರು ದಿನಾಂಕ:18-07-2017 ರಂದು ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ಅನುಬಂಧ-3 ರಲ್ಲಿ ನೀಡಲಾಗಿದೆ. |
| ಈ | ಸದರಿ ಸಂಘವು ನೋಂದಣಿ ಅಧಿನಿಯಮ 1960 ರಡಿ ನೋಂದಾಯಿಸಿದ್ದರೂ ಸಂಘ ನೋಂದಾಯಿಸಿರುವ ನಿವೇಶನಗಳ ಕ್ರಯ ಪತ್ರಗಳಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಸಂಘದ ಕಾಯ್ದೆ 1959 ರಡಿ ನೋಂದಾಯಿಸಿರುವ ಸಂಘ ಎಂದು ಸುಳ್ಳು ಮಾಹಿತಿ ದಾಖಲಿಸಿರುವುದು ನಿಜವೇ: ಇದ್ದಲ್ಲಿ ಸಂಘದ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು: | ಸದರಿ ಸಂಘವು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿ ನೋಂದಾಯಿಸಿದ್ದರೂ ಸಂಘ ನೋಂದಾಯಿಸಿರುವ ನಿವೇಶನಗಳ ಕ್ರಯ ಪತ್ರಗಳಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಸಂಘದ ಕಾಯ್ದೆ 1959 ರಡಿ ನೋಂದಾಯಿಸಿರುವ ಸಂಘ ಎಂದು ಕ್ರಯ ಪತ್ರಗಳಲ್ಲಿ ನಮೂದಾಗಿರುವುದು ನಿಜವಿರುತ್ತದೆ.<br>ಸಂಘದಲ್ಲಿನ ಅವ್ಯವಹಾರಗಳ ಕುರಿತು ಪದಾಧಿಕಾರಿಗಳ ವಿರುದ್ಧ ಮೊದ್ದಮೆಯನ್ನು ದಾಖಲಿಸಲು ಸಹಕಾರ ಸಂಘಗಳ ಉಪನಿಬಂದಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ, ರವರು ದಿನಾಂಕ:24-02-2020ರಂದು ಶ್ರೀ.ಮದಕರಿನಾಯಕ-ಅಧೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂದಕರ ಕಛೇರಿ, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ, ರವರಿಗೆ ಆದೇಶಿಸಿದ್ದು, ಅದರಂತೆ ಸದರಿ ಅಧಿಕಾರಿಯು ಪೋಲೀಸ್ ಇನ್‌ಸ್ಪೆಕ್ಟರ್, ಶೇಷಾದ್ರಿಪುರಂ, ಬೆಂಗಳೂರು ನಗರ, ರವರನ್ನು ದಿನಾಂಕ:04-03-2020ರಲ್ಲಿ ಮೊಕದ್ದಮೆಯನ್ನು ದಾಖಲಿಸಲು ಕೋರಿರುತ್ತಾರೆ.<br>ಈ ಕುರಿತು ಪೋಲೀಸ್ ಇನ್‌ಸ್ಪೆಕ್ಟರ್, ಶೇಷಾದ್ರಿಪುರಂ, ಬೆಂಗಳೂರು ನಗರ, ರವರು "**ತಾವು ಈಗ ದೂರಿನಲ್ಲಿ ತಿಳಿಸಿರುವ ಅಂಶಗಳು ಮತ್ತು ಈಗಾಗಲೇ ಶೇಷಾದ್ರಿಪುರಂ ಪೋಲೀಸ್ ಠಾಣೆಯಲ್ಲಿ (ಮೊ.ಸಂ.69/ 2016) ದಾಖಲಾಗಿ ಮಾನ್ಯ ನ್ಯಾಯಾಲಯದಲ್ಲಿ ಸಿ.ಸಿ.ನಂ-3681/2018ರಲ್ಲಿ ವಿಚಾರಣೆಯಲ್ಲಿರುವ ಪ್ರಕರಣದಲ್ಲಿನ ಅಂಶಗಳು ಹಾಗೂ ಆರೋಪಿತರು ಒಬ್ಬರೇ ಆಗಿದ್ದು, ಒಂದೇ ವಿಷಯ ಮತ್ತು ಎರಡು ಪ್ರಕರಣಗಳಿಗೆ ಒಬ್ಬರೇ ಆರೋಪಿತರಿರುವುದರಿಂದ ಮತ್ತೊಂದು ಎಫ್.ಐ.ಆರ್.ನ್ನು ದಾಖಲಿಸಲು ಕಾನೂನಿನಲ್ಲಿ ಅವಕಾಶ ಇಲ್ಲದೇ ಇರುವ ಪ್ರಯುಕ್ತ, ತಾವು ನೀಡುತ್ತಿರುವ ದೂರು ಮತ್ತು ದೂರಿನೊಂದಿಗೆ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಸ್ವೀಕರಿಸಿಕೊಂಡು ಈಗಾಗಲೇ ಶೇಷಾದ್ರಿಪುರಂ ಪೋಲೀಸ್ ಠಾಣೆ ಮೊ.ಸಂ.69/2016 ಪ್ರಕರಣಕ್ಕೆ ಅಡಕಗೊಳಿಸಿಕೊಂಡು (ಮಾನ್ಯ ನ್ಯಾಯಾಲಯದಲ್ಲಿ ಸಿ.ಸಿ.ನಂ-3681/2018) ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದ ಅನುಮತಿ ಪಡೆದು ತನಿಖೆಯನ್ನು ಮುಂದುವರೆಸಿ ಕಲಂ 173(8) ಸಿ.ಆರ್.ಪಿ.ಸಿ ಅಡಿಯಲ್ಲಿ ಹೆಚ್ಚುವರಿ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು**" ಎಂದು ದಿನಾಂಕ:09-03-2020ರ ಹಿಂಬರಹದಲ್ಲಿ ತಿಳಿಸಿರುತ್ತಾರೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಮುಂದುವರೆದು, ಕ್ರಯ ಪತ್ರಗಳಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಕಾಯ್ದೆ 1959ರನ್ವಯ ರಚಿಸಲಾದ ಸಂಘವೆಂದು ನಮೂದಿಸಿರುವ ಬಗ್ಗೆ ಈ ಅಂಶಗಳನ್ನೊಳಗೊಂಡಂತೆ ತನಿಖೆಗೆ ಒಳಪಡಿಸಿ ಕ್ರಿಮಿನಲ್ ದಾವೆ ಹೂಡಲು ಶೇಷಾದ್ರಿಪುರಂ ಪೊಲೀಸ್ ಠಾಣೆಗೆ ದಿನಾಂಕ:18-3-2020 ರಂದು ದೂರು ನೀಡಲಾಗಿದೆ. |
| ಉ | ಸಂಘಕ್ಕೆ ಆಡಳಿತಾಧಿಕಾರಿ ನೇಮಿಸದಿರಲು ಶಿಪಾರಸ್ಸು ಮಾಡಿರುವುದು ನಿಜವೆ: ಇದ್ದಲ್ಲಿ ಇಲ್ಲಿಯವರೆಗೂ ನೇಮಿಸದಿರಲು ಕಾರಣಗಳೇನು: ಯಾವ ನಿರ್ದಿಷ್ಟ ದಿನಾಂಕದಿಂದ ಆಡಳಿತಾಧಿಕಾರಿಯನ್ನು ನೇಮಿಸಿ ನಿವೇಶನಕ್ಕೆ ಹಣ ಪಾವತಿಸಿರುವ ಪ್ರಾಧಿಕಾರದ ನಿವೃತ್ತ ನೌಕರರಿಗೆ ನಿವೇಶನ ಹಂಚಿಕೆ ಮಾಡಿ ನ್ಯಾಯ ಒದಗಿಸಲಾಗುವುದು? | ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರವು ಶಿಫಾರಸ್ಸು ಮಾಡಿದ್ದು, ಇಬ್ಬರು ವಿಚಾರಣಾಧಿಕಾರಿಗಳು ನೀಡಿರುವ ವರದಿಯಲ್ಲಿ ವಿಭಿನ್ನ ಅಭಿಪ್ರಾಯ ಇರುವುದರಿಂದ ಈ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಕೋರಿದ್ದು, ಆಡಳಿತಾಧಿಕಾರಿ ನೇಮಕಾತಿಯು ಸರ್ಕಾರದ ಪರಿಶೀಲನೆಯಲ್ಲಿದೆ. |

**ಸಿಒ 25 ಸಿಎಸ್ಆರ್ 2020**

ಎಸ್. ಟಿ. ಸೋಮಶೇಖರ್

**(ಎಸ್.ಟಿ.ಸೋಮಶೇಖರ್)**

ಸಹಕಾರ ಸಚಿವರು

# ಅನುಬಂಧ -01.

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯಿಸ್ ವೆಲ್‌ಫೇರ್ ಅಸೋಸಿಯೇಷನ್ ಬೆಂಗಳೂರು ಈ ಸಂಘದಲ್ಲಿನ ಅವ್ಯವಹಾರಗಳು/ಕಾನೂನುಬಾಹಿರ ನಿವೇಶನಗಳ ಹಂಚಿಕೆ ಕುರಿತು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 25 ರನ್ವಯ ಕೈಗೊಂಡ ವಿಚಾರಣೆಗಳು ;-**

ವಿಚಾರಣೆ-1

1. ಸಂಘಗಳ ನೋಂದಣಾಧಿಕಾರಿಗಳು, ಗಾಂಧಿನಗರ ನೋಂದಣಿ ಜಿಲ್ಲೆ, ಬೆಂಗಳೂರು ರವರ ಆದೇಶ ಸಂಖ್ಯೆ:ಸಂನೋಅ/ಗಾನೋಜಿ/450/2015-16 ದಿನಾಂಕ:23-07-2015 ರಲ್ಲಿ ಶ್ರೀ **ಹೆಚ್.ಟಿ. ಶಿವನಂಜಯ್ಯ ಅಧಿಕ ಜಿಲ್ಲಾ ನೋಂದಣಾಧಿಕಾರಿ, ಬಿಡಿಎ ಬೆಂಗಳೂರು ರವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿರುತ್ತಾರೆ** ಸದರಿ ವಿಚಾರಣಾಧಿಕಾರಿಗಳು ದಿನಾಂಕ:30-09-2015 ರಂದು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿದ ವಿಚಾರಣಾ ವರದಿಯನ್ನು ಸಕ್ಷಮ ಪ್ರಾಧಿಕಾರವು ಪತ್ರ ಸಂಖ್ಯೆ:ಜಿ.ನೋ/ಗಾನೋಜಿ/1025/2015-16 ದಿನಾಂಕ:20-10-2015 ರಲ್ಲಿ ಸರ್ಕಾರಕ್ಕೆ ಸಲ್ಲಿಸಿ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಶಿಫಾರಸ್ಸು ಮಾಡಿರುತ್ತದೆ.

ವಿಚಾರಣೆ-2

2. ಜಿಲ್ಲಾ ನೋಂದಣಾಧಿಕಾರಿಗಳು ಗಾಂಧಿನಗರ ನೋಂದಣಿ ಜಿಲ್ಲೆ ಬೆಂಗಳೂರು ಇವರ ಆದೇಶ ಸಂಖ್ಯೆ: ಜಿ.ನೋ/ಗಾ.ನೋ.ಜಿ/698/2015-16 ದಿನಾಂಕ:14-8-2015 ರಲ್ಲಿ ಶ್ರೀ **ನಾರಾಯಣಪ್ಪ, ಉಪ ನೊಂದಣಾಧಿಕಾರಿ, ಹೆಸರಘಟ್ಟ, ಬೆಂಗಳೂರು ರವರನ್ನು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 25 ರಂತೆ ವಿಚಾರಣಾಧಿಕಾರಿಯಾಗಿ ನೇಮಕ ಮಾಡಿರುತ್ತಾರೆ** (02 ನೇ ವಿಚಾರಣೆ). ಸದರಿ ವಿಚಾರಣಾಧಿಕಾರಿಗಳು ದಿನಾಂಕ:22-11-2015 ರಂದು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿದ ವಿಚಾರಣಾ ವರದಿಯನ್ನು ಸಕ್ಷಮ ಪ್ರಾಧಿಕಾರವು ಪತ್ರ ಸಂಖ್ಯೆ:ಜಿ.ನೋ/ಗಾನೋಜಿ/1254/2015-16 ದಿನಾಂಕ:9-12-2015ರಲ್ಲಿ ಸರ್ಕಾರಕ್ಕೆ ಸಲ್ಲಿಸಿ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಶಿಫಾರಸ್ಸು ಮಾಡಿರುತ್ತದೆ.

ವಿಚಾರಣೆ-3

3. ಸರ್ಕಾರವು ಆದೇಶ ಸಂಖ್ಯೆ: ಕಂಇ 102 ಮುಸೋಸ 2015 ಬೆಂಗಳೂರು ದಿನಾಂಕ:20-4-2016 ರನ್ವಯ ಶ್ರೀ **ಎಸ್. ಇಂದುದರ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಧೀಶರನ್ನು ವಿಚಾರಣಾಧಿಕಾರಿಯಾಗಿ** (3ನೇ ವಿಚಾರಣೆ). **ನೇಮಕ ಮಾಡಿರುತ್ತದೆ.** ವಿಚಾರಣಾಧಿಕಾರಿಗಳಿಂದ ದಿನಾಂಕ:18-05-2016 ರಂದು ವರದಿಯನ್ನು ಪಡೆದಿರುತ್ತದೆ. ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಸಂಘದ ವಿರುದ್ಧ ಮಾಡಲಾದ ಆಪಾದನೆಗಳಲ್ಲಿ ಹುರುಳಿಲ್ಲವೆಂದು ಹಾಗೂ ಈ ಪ್ರಕರಣದಲ್ಲಿ ಆಡಳಿತಾಧಿಕಾರಿಯನ್ನು ನೇಮಿಸುವ ಸಂದರ್ಭ ಉದ್ಭವಿಸಿರುವುದಿಲ್ಲವೆಂದು

ಅಭಿಪ್ರಾಯಪಟ್ಟಿರುತ್ತಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು, ಗಾಂಧಿನಗರ ನೋಂದಣಿ ಜಿಲ್ಲೆ, ಇವರು ಸರ್ಕಾರಕ್ಕೆ ಬರೆದ ಪತ್ರ ಸಂಖ್ಯೆ:ಕಂಇ:102:ಮುನೋಸೋ:2015 ದಿನಾಂಕ:28-05-2016 ರಂತೆ ರಿಟ್ ಅರ್ಜಿ ಸಂಖ್ಯೆ:40081/2013 ರಲ್ಲಿ ನೀಡುವ ಅಂತಿಮ ಆದೇಶಕ್ಕೆ ಒಳಪಟ್ಟು ವಿಚಾರಣಾಧಿಕಾರಿಯವರ ಅಭಿಪ್ರಾಯವನ್ನು ಸರ್ಕಾರವು ಅನುಮೋದಿಸಿರುತ್ತದೆ.

ವಿಚಾರಣೆ-4

4. ಆದರೆ, ಜಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಬೆಂಗಳೂರು ಈ ಸಂಘದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಸರ್ಕಾರವು **ಶ್ರೀ.ಎ.ಸಿ.ಇಂಗಳಗಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು** ಇವರನ್ನು **ವಿಚಾರಣಾಧಿಕಾರಿಯನ್ನಾಗಿ** ಸರ್ಕಾರವು ದಿನಾಂಕ:19-5-2017 ರಲ್ಲಿ ನೇಮಕ ಮಾಡಿದ ಮೇರೆಗೆ ಸದರಿ ವಿಚಾರಣಾಧಿಕಾರಿಯವರು ವಿಚಾರಣೆ ನಡೆಸಿ ಕೆಲವೊಂದು ಆರೋಪಗಳು ಸಾಭೀತಾಗಿರುವ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ದಿನಾಂಕ:14-07-2017 ರಂದು ಸಲ್ಲಿಸಿರುತ್ತಾರೆ.

(ಎನ್.ಎಸ್.ಪ್ರಸನ್ನಕುಮಾರ್)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

95

151

Annexure - R4

ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂ: ಅಜಿನೋ/ಬಿಡಿಎ/114/2015-16

ಅಧಿಕ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ,
ಬಿಡಿಎ ಕಛೇರಿ ಆವರಣ,
ಕುಮಾರ ಪಾರ್ಕ್, ಬೆಂಗಳೂರು
ದಿನಾಂಕ:30/09/2015.

ಇವರಿಗೆ,
ಮಾನ್ಯ ಜಿಲ್ಲಾ ನೋಂದಣಾಧಿಕಾರಿಗಳು,
ಗಾಂಧಿನಗರ ನೋಂದಣಿ ಜಿಲ್ಲೆ
ನಂ.17, ಮಾರುತಿ ಪ್ಲಾಜಾ, 2ನೇ ಮಹಡಿ,
2ನೇ ಮುಖ್ಯರಸ್ತೆ, ವೈಯಾಲಿಕಾವಲ್ ಎಕ್ಸ್‌ಟೆನ್‌ಷನ್,
ಬೆಂಗಳೂರು-560 003.

ಮಾನ್ಯರೇ,

ವಿಷಯ:- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಂಪ್ಲಾಯಿಸ್ ವೆಲ್‌ಫೇರ್ ಅಸೋಸಿಯೇಷನ್ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಹಾಗೂ ಕಾರ್ಯದರ್ಶಿ ಶ್ರೀ.ನಾಗರಾಜು.ಹೆಚ್ ಇವರ ವಿರುದ್ಧ ಶ್ರೀ.ಡಿ.ಟಿ. ಕೃಷ್ಣೇಗೌಡ ಇವರ ದೂರು ಅರ್ಜಿಯ ಬಗ್ಗೆ ಸಂಘಗಳ ನೋಂದಣಿ ಕಾಯ್ದೆ 1960 ಕಲಂ 25 ರಡಿ ವಿಚಾರಣೆ ವರದಿ ಸಲ್ಲಿಸುವ ಬಗ್ಗೆ.

ಉಲ್ಲೇಖ:-
1. ಶ್ರೀ.ಡಿ.ಟಿ.ಕೃಷ್ಣೇಗೌಡ ಇವರು ಮಾನ್ಯ ಲೋಕಾಯುಕ್ತ ರವರಿಗೆ ನೀಡಿರುವ ದೂರು ಅರ್ಜಿ ದಿನಾಂಕ:01/01/2009.
2. ತಮ್ಮ ವಿಚಾರಣಾ ಆದೇಶ ಸಂಖ್ಯೆ ಸಂ.ನೋ.ಅ/ಗಾನೋಜಿ/450/2015-16 ದಿನಾಂಕ: 23/07/2015.
3. ಕರ್ನಾಟಕ ಸಂಘಗಳ ನೋಂದಣಿ ನಿಯಮ 8 ರಂತೆ ವಿಚಾರಣಾಧಿಕಾರಿಯ ನೋಟೀಸ್, ದಿನಾಂಕ: 06/08/2015 ಮತ್ತು ದಿನಾಂಕ: 19/08/2015.

—o—

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಹಾಗೂ ಕಾರ್ಯದರ್ಶಿ ಶ್ರೀ.ನಾಗರಾಜು.ಹೆಚ್. ಇವರ ವಿರುದ್ಧ ಶ್ರೀ.ಡಿ.ಟಿ. ಕೃಷ್ಣೇಗೌಡ ಇವರು ಮಾನ್ಯ ಲೋಕಾಯುಕ್ತ ರವರಿಗೆ ನೀಡಿರುವ ದೂರು ಅರ್ಜಿಯ ಬಗ್ಗೆ ವಿಚಾರಣೆ ನಡೆಸಿ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಈ ಮೇಲಿನ ಉಲ್ಲೇಖ (2) ರ ತಮ್ಮ ಪತ್ರದಲ್ಲಿ ಆದೇಶಿಸಿದ್ದು ಅದರಂತೆ ಕರ್ನಾಟಕ ಸಂಘಗಳ ನೋಂದಣಿ ನಿಯಮ 8 ರಂತೆ ವಿಚಾರಣಾಧಿಕಾರಿಗಳ ನೋಟೀಸ್ ಜಾರಿ ಮಾಡಿ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್. ಬೆಟ್ಟೇಗೌಡ ಹಾಗೂ ದೂರು ಅರ್ಜಿದಾರರಾದ ಶ್ರೀ.ಡಿ.ಟಿ. ಕೃಷ್ಣೇಗೌಡ ಇವರುಗಳ ಹೇಳಿಕೆ ಹಾಗೂ ಪ್ರತಿ ಹೇಳಿಕೆಯನ್ನು ದಾಖಲು ಮಾಡಿಕೊಂಡು ನಿಯಮಾನುಸಾರ ಸದರಿ ಸಂಘದ ವಿಚಾರಣೆಯನ್ನು ಪೂರ್ಣಗೊಳಿಸಿ ವಿಚಾರಣಾ ವರದಿಯನ್ನು ಸ್ಪಷ್ಟ ಅಭಿಪ್ರಾಯದೊಂದಿಗೆ ಪೂರಕ ದಾಖಲೆಗಳ ಅಡಕಗಳೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ತಮಗೆ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ಜಿಲ್ಲಾ ನೋಂದಣಾಧಿಕಾರಿ ಕಛೇರಿ
ಸ್ವೀ ಸಂ: 2044/15-16
1/10/15

1/10/15

ಇಂತಿ ತಮ್ಮ ವಿಶ್ವಾಸಿ,

30/9/15
(ಜೋ.ಟಿ. ಶಿವಮಾಜಯ್ಯ)
ಅಧಿಕ ಜಿಲ್ಲಾ ನೋಂದಣಾಧಿಕಾರಿ

## ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ.) ಬೆಂಗಳೂರು ಇವರ ವಿಚಾರಣಾ ವರದಿ

ವಿಷಯ:- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್. ಬೆಟ್ಟೇಗೌಡ ಹಾಗೂ ಕಾರ್ಯದರ್ಶಿ ಶ್ರೀ.ನಾಗರಾಜು.ಹೆಚ್. ಇವರ ವಿರುದ್ಧ ಶ್ರೀ.ಡಿ.ಟಿ.ಕೃಷ್ಣೇಗೌಡ ಇವರ ದೂರು ಅರ್ಜಿಯ ಬಗ್ಗೆ ಸಂಘಗಳ ನೋಂದಣಿ ಕಾಯ್ದೆ 1960 ಕಲಂ 25 ರಡಿ ವಿಚಾರಣೆ ನಡೆಸುವ ಕುರಿತು.

ಉಲ್ಲೇಖ:- 1) ಶ್ರೀ.ಡಿ.ಟಿ.ಕೃಷ್ಣೇಗೌಡ ಇವರ ಮಾನ್ಯ ಲೋಕಾಯುಕ್ತರವರಿಗೆ ನೀಡಿದ ದೂರು ಅರ್ಜಿ ದಿನಾಂಕ 01/01/2009

2) ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಸಂಘ ಸಂಸ್ಥೆಗಳ ನೋಂದಣಾಧಿಕಾರಿ ಗಾಂಧಿನಗರ ನೋಂದಣಿ ಜಿಲ್ಲೆ ಬೆಂಗಳೂರು ಇವರ ವಿಚಾರಣಾ ಆದೇಶ ಸಂಖ್ಯೆ: ಸಂ.ನೋ.ಅ/ಗಾನೋಜಿ/450/2015-16 ದಿನಾಂಕ 23/07/2015.

3) ಕರ್ನಾಟಕ ಸಂಘಗಳ ನೋಂದಣಿ ನಿಯಮ 8ರಂತೆ ವಿಚಾರಣಾಧಿಕಾರಿಗಳ ನೋಟೀಸ್ ದಿನಾಂಕ (1) 06/08/2015 (2) 19/08/2015

**ಪೀಠಿಕೆ**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್, ಕುಮಾರ ಪಾರ್ಕ್ ವೆಸ್ಟ್, ಬೆಂಗಳೂರು ಈ ಸಂಘದ ಅಧ್ಯಕ್ಷರಾದ ಶ್ರೀ. ಡಿ.ಎನ್.ಬೆಟ್ಟೇಗೌಡ ಹಾಗೂ ಕಾರ್ಯದರ್ಶಿಯವರಾದ ಶ್ರೀ.ನಾಗರಾಜು ಹೆಚ್ ಇವರ ವಿರುದ್ಧ ಶ್ರೀ.ಡಿ.ಟಿ.ಕೃಷ್ಣೇಗೌಡ ಎಂಬುವವರು ದಿನಾಂಕ 01/01/2009 ರಂದು ಗೌರವಾನ್ವಿತ ಲೋಕಾಯುಕ್ತರವರಿಗೆ ದೂರು ನೀಡಿದ್ದು ಸದರಿ ದೂರು ಅರ್ಜಿಯಲ್ಲಿ ನಮೂದಿಸಿರುವ ಅಂಶಗಳಿಗೆ ಸಂಬಂಧಿಸಿದಂತೆ ಅಂದರೆ ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ.) ಬೆಂಗಳೂರು ಇದರ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಹಾಗೂ ಕಾರ್ಯದರ್ಶಿ ಶ್ರೀ.ನಾಗರಾಜು.ಎಚ್ ಇವರುಗಳು ಸಂಘದ ಸದಸ್ಯರುಗಳಿಗೆ ನಿವೇಶನ ನೀಡುವುದಾಗಿ ಹೇಳಿ ಹಣ ಪಡೆದು ನಿವೇಶನ ನೀಡದೇ ಮೋಸ ಮಾಡಿರುವುದು ಹಾಗೂ ಸದಸ್ಯರಲ್ಲದ ಹೊರಗಿನ ವ್ಯಕ್ತಿಗಳಿಗೆ ನಿವೇಶನಗಳನ್ನು ಮಾರಾಟ ಮಾಡಲಾಗಿದೆ ಎಂದು ಆರೋಪಿಸಿ ಮಾನ್ಯ ಲೋಕಾಯುಕ್ತ ಸಂಸ್ಥೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ. (ಅನುಬಂಧ-1) ಪ್ರತಿಯನ್ನು ಈ ವರದಿಯೊಂದಿಗೆ ಲಗತ್ತಿಸಿದೆ.

ನಂತರ ಮಾನ್ಯ ಲೋಕಾಯುಕ್ತ ಕಛೇರಿಯ ಅಪರ ನಿಬಂಧಕರು, ಕರ್ನಾಟಕ ಲೋಕಾಯುಕ್ತ ವಿಚಾರಣೆ-8 ರವರು ದಿನಾಂಕ: 14/07/2015 ರ ತಮ್ಮ ಪತ್ರದಲ್ಲಿ ಸದರಿ ದೂರಿನ ಬಗ್ಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 25 (1) ಸೂಮೋಟೊ (Summoto) ರಡಿ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಮಾನ್ಯ ಜಿಲ್ಲಾ ನೋಂದಣಾಧಿಕಾರಿಗಳು, ಗಾಂಧಿನಗರ ನೋಂದಣಿ ಜಿಲ್ಲೆ, ಬೆಂಗಳೂರು ರವರಿಗೆ ಸೂಚಿಸಿರುತ್ತಾರೆ. (ಅನುಬಂಧ-2) ಪ್ರತಿಯನ್ನು ಈ ವರದಿಯೊಂದಿಗೆ ಲಗತ್ತಿಸಿದೆ.

ಅದರಂತೆ ಮಾನ್ಯ ಜಿಲ್ಲಾನೋಂದಣಾಧಿಕಾರಿಗಳು ಗಾಂಧಿನಗರ ಬೆಂಗಳೂರು ಇವರು ಈ ಸಂಘದ ಬಗ್ಗೆ ಬಂದಿರುವ ದೂರು ಅರ್ಜಿಯಲ್ಲಿನ ಅಂಶಗಳ ಬಗ್ಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಕಲಂ 25 ರಡಿ ವಿಚಾರಣೆ ನಡೆಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ನೀಡಲು ಈ ಕೆಳಗೆ ಸಹಿ ಮಾಡಿರುವ ನನ್ನನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತಾರೆ ಆದೇಶದ ಪ್ರತಿಯನ್ನು (ಅನುಬಂಧ-3) ಈ ವರದಿಯೊಂದಿಗೆ ಲಗತ್ತಿಸಿದೆ.

ಈ ಸಂಬಂಧ ಸದರಿ ವಿಚಾರಣೆಯನ್ನು ಕಡತದ ಮೇಲೆ ತೆಗೆದುಕೊಂಡು ಈ ಮೇಲಿನ ಉಲ್ಲೇಖ (3) ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ನಿಯಮ (8) ರಂತೆ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಚೆಟ್ಟೀಗೌಡ ಇವರಿಗೆ ನೋಟೀಸ್ ಜಾರಿ ಮಾಡಿ ವಿಚಾರಣೆಗೆ ಹಾಜರಾಗಿ ದೂರು ಅರ್ಜಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಗೂ ಲಿಖಿತ ಹೇಳಿಕೆಯನ್ನು ನೀಡುವಂತೆ ಸೂಚಿಸಲಾಗಿತ್ತು ಪ್ರತಿಯನ್ನು (ಅನುಬಂಧ-4) ಈ ವರದಿಯೊಂದಿಗೆ ಲಗತ್ತಿಸಿದೆ.

ದಿನಾಂಕ : 06/08/2015 ರಂದು ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್. ಚೆಟ್ಟೀಗೌಡ ಇವರು ವಿಚಾರಣೆಗೆ ಹಾಜರಾಗಿ ದೂರು ಅರ್ಜಿಯ ಬಗ್ಗೆ ದಾಖಲೆಗಳನ್ನು ಸಲ್ಲಿಸಲು ಸಮಯಾವಕಾಶವನ್ನು ಕೋರಿದ್ದರ ಮೇರೆಗೆ ವಿಚಾರಣೆಯನ್ನು ದಿನಾಂಕ: 19/08/2015 ಕ್ಕೆ ಮುಂದೂಡಲಾಯಿತು.

ಮುಂದುವರೆದಂತೆ ದಿನಾಂಕ: 19/08/2016 ರಂದು ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್. ಚೆಟ್ಟೀಗೌಡ ಇವರು ವಿಚಾರಣೆಗೆ ಹಾಜರಾಗಿ ದೂರು ಅರ್ಜಿಗೆ ಸಂಬಂಧಿಸಿದಂತೆ ತಮ್ಮ ಲಿಖಿತ ಹೇಳಿಕೆಯನ್ನು ದಾಖಲಿಸಿರುತ್ತಾರೆ. ಸಂಘದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ

ನಾಗರಾಜ್. ಹೆಚ್ ಇವರು ದೈವಾಧೀನರಾಗಿರುವುದಾಗಿ ತಿಳಿಸಿರುತ್ತಾರೆ. ದಾಖಲೆಗಳನ್ನು (ಅನುಬಂಧ-5 ಪುಟ 1 ರಿಂದ 4 ರವರೆಗೆ) ಈ ವರದಿಯೊಂದಿಗೆ ಲಗತ್ತಿಸಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕುರಿತು ದೂರು ಅರ್ಜಿದಾರರು ನೀಡಿರುವ ದೂರಿನಲ್ಲಿಯ ಮುಖ್ಯವಾಗಿ 03 ಪ್ರಶ್ನೆಗಳ ಪಟ್ಟಿ ಮಾಡಲಾಗಿದ್ದು, ಈ 3 ಅಂಶಗಳನ್ನು ಕುರಿತು ಬಿಡಿಎ ನೌಕರರ ಸಂಘದ ಅಧ್ಯಕ್ಷರಿಂದ ಮತ್ತು ದೂರು ಅರ್ಜಿದಾರರಿಂದ ಹೇಳಿಕೆ ಮತ್ತು ಪ್ರತಿ ಹೇಳಿಕೆ ಹಾಗೂ ವಿಚಾರಣಾಧಿಕಾರಿಗಳ ವಿಶ್ಲೇಷಣೆ ಮತ್ತು ಅಭಿಪ್ರಾಯ ಈ ಕೆಳಕಂಡತಿರುತ್ತವೆ.

ಆರೋಪ ನಂಬರ್ -1

ದೂರು ಅರ್ಜಿದಾರರು ಮೂರು ವರ್ಷಗಳಿಂದ ಅವರ ಕಾನೂನು ಅಧಿಕಾರಿಯಾಗಿ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಿದ್ದು ಬಿಡಿಎ ನೌಕರರ ಸಂಘದ ಅಧ್ಯಕ್ಷ ಹಾಗೂ ಕಾರ್ಯದರ್ಶಿಗಳಾದ ಶ್ರೀ.ಡಿ.ಎಸ್. ಚಿಕ್ಕೇಗೌಡ ಮತ್ತು ನಾಗರಾಜು.ಹೆಚ್. ರವರು ಸಂಘಕ್ಕೆ ಬಿಡಿಎ ಯಿಂದ ಸುಮಾರು 40 ಎಕರೆ ಜಮೀನನ್ನು ಪಡೆದಿದ್ದು ನೌಕರರ ಮತ್ತು ಅಧಿಕಾರಿಗಳ ವರ್ಗಕ್ಕೆ ಗೃಹ ನಿವೇಶನಗಳನ್ನು ರಚಿಸಲಾಗುತ್ತಿದೆ ಎಂದು ಅನೇಕ ಆಹ್ವಾನಗಳನ್ನು ನೀಡಿ ಸದಸ್ಯತ್ವದ ಅರ್ಜಿ ಪಡೆದು ಅದರ ಬಾಬ್ತು ಶುಲ್ಕ 1050 ರೂಪಾಯಿ ಮತ್ತು ನಿವೇಶನದ ಬಾಬ್ತು 1,50,000/- ಗಳನ್ನು ಪಡೆದು ನಿವೇಶನವನ್ನು ಹಂಚಿಕೆ ಮಾಡದೇ ಇರುವುದು?

ಆರೋಪ ನಂಬರ್-2

ಬೆಂಗಳೂರು ದಕ್ಷಿಣ ತಾಲ್ಲೂಕು ದೊಡ್ಡ ಕಲ್ಲಸಂದ್ರ ಮತ್ತು ಲಿಂಗಧೀರನಹಳ್ಳಿಯಲ್ಲಿ ಸಾವಿರಾರು ನಿವೇಶನಗಳನ್ನು ರಚಿಸಿ ಕೆಲವೇ ಜನ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಿ ಅರ್ಧದಷ್ಟು ಸದಸ್ಯರಿಗೆ ನಿವೇಶನಗಳನ್ನು ನೀಡದೇ ಅವರಿಗೆ ಬೇಕಾದ ಸ್ನೇಹಿತರುಗಳಿಗೆ ಸಂಬಂಧಿಕರಿಗೆ ಮತ್ತು ಅವರಿಗೆ ಅನುಕೂಲಕರವಾಗಿ ನಡೆದುಕೊಂಡಿರುವ ಅಧಿಕಾರಿಗಳಿಗೆ ಹಂಚಿದ್ದಾರೆ. ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಮತ್ತು ಬ್ಯಾಂಕ್ ನೌಕರರುಗಳಿಗೆ ಮಾತ್ರ ಖುಷಿ ಬಂದ ಅಳತೆಯ ನಿವೇಶನಗಳನ್ನು ಹಂಚಿದ್ದು ಸುಮಾರು 1/4 ಭಾಗದಷ್ಟು ಸದಸ್ಯರುಗಳಿಗೆ ನಿವೇಶನಗಳನ್ನು ಕೊಡದೆ ಅವರಿಗೆ ತಿಳಿದಿರುವ ಕಾರಣಗಳಿಂದ ವಂಚಿಸಿರುತ್ತಾರೆ. ಅಲ್ಲದೆ

ಸದಸ್ಯರಲ್ಲದ ಅನೇಕ ಖಾಸಗಿ ವ್ಯಕ್ತಿಗಳಿಗೆ ಸಹ ಕಾಳ ಸಂತೆಯಲ್ಲಿ ನಿವೇಶನಗಳನ್ನು ಮಾರಾಟ ಮಾಡಿ ಕೊಂಡಿರುತ್ತಾರೆ ಬಿಡಿಎ ನೌಕರರಾದ ಇವರು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಶಾಮೀಲಾಗಿದ್ದು ಸರ್ಕಾರದಿಂದ ಪಡೆದ ಭೂಮಿಯನ್ನು ಸಂಘದ ಸದಸ್ಯರುಗಳ ಅನುಕೂಲಕ್ಕೆ ವಿನಿಯೋಗಿಸದೆ ತಮ್ಮ ಸ್ವಂತಕ್ಕೆ ಬಳಸಿಕೊಂಡು ವಂಚಿಸಿ ಕೋಟ್ಯಾಂತರ ರೂಪಾಯಿಗಳ ಸಂಪತ್ತು ರೂಢಿಸಿಕೊಂಡಿರುತ್ತಾರೆ ಇಬ್ಬರು ವ್ಯಕ್ತಿಗಳು ಸಾರ್ವಜನಿಕ ನೌಕರರಾಗಿದ್ದು ಈ ರೀತಿ ದುರ್ವರ್ತನೆ (misconduct) ಎಸಗಿರುತ್ತಾರೆ?

<u>ಆರೋಪ ಸಂ.3</u>

ಈಗ ಹಂಚಿಕೆಯಾಗಿರುವ ನಿವೇಶನದಾರರಲ್ಲಿ ಕೆಲವರಿಗೆ ಈಗಾಗಲೇ ಎರಡು-ಮೂರು ಮನೆಗಳು ಮತ್ತು ಎರಡು-ಮೂರು ನಿವೇಶನಗಳಿರುತ್ತವೆ?

ಈ ಆರೋಪಗಳ ಬಗ್ಗೆ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಚನ್ನೇಗೌಡ ಇವರು ದಿನಾಂಕ 19/08/2015ರಂದು ವಿಚಾರಣೆಯ ಸಂದರ್ಭದಲ್ಲಿ ತಮ್ಮ ಲಿಖಿತ ಹೇಳಿಕೆಯನ್ನು ಈ ಕೆಳಕಂಡಂತೆ ದಾಖಲಿಸಿರುತ್ತಾರೆ.

ಶ್ರೀ.ಡಿ.ಟಿ.ಕೃಷ್ಣೇಗೌಡ ಇವರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾನೂನು ವಿಭಾಗದಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರು ತಮ್ಮದೆ ಆದ ಬಡಾವಣೆ ರಚಿಸಿಕೊಂಡು ನೌಕರರಿಗೆ ಹಾಗೂ ಅಧಿಕಾರಿಗಳಿಗೆ ನಿವೇಶನ ಹಂಚಿಕೆ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು, ದಿನಾಂಕ 12/01/2006 ರಂದು ಕರ್ನಾಟಕ ಸುವರ್ಣ ರಾಜ್ಯೋತ್ಸವದ ಪ್ರಯುಕ್ತ ಹಂಚಿಕೆ ನಿಯಮಾವಳಿಗಳನ್ನು ಸಡಿಲಿಸಿ, ರಿಯಾಯಿತಿ ದರದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿಕೊಳ್ಳಲು ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು.

ಪ್ರಾಧಿಕಾರವು ಬರೆದ ಪತ್ರಕ್ಕೆ ಅನುಸಾರವಾಗಿ ಪ್ರಧಾನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಇವರು ದಿನಾಂಕ: 19/04/2006 ರಂದು ಮಾನ್ಯ ಆಯುಕ್ತರು, ಬಿಡಿಎ ಇವರಿಗೆ ಪತ್ರ ಬರೆದು ಜಮೀನಿನ ಲಭ್ಯತೆ ನೋಡಿಕೊಂಡು ಪ್ರಾಧಿಕಾರದ ನೌಕರರ ಸಂಘಕ್ಕೆ ಜಮೀನನ್ನು ಹಂಚಿಕೆ ಮಾಡಬಹುದೆಂದು ನಿರ್ದೇಶನವಿತ್ತಿದ್ದಾರೆ.

ಮಾನ್ಯ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ದಿನಾಂಕ: 04/09/2006 ರಂದು ನೌಕರರ ಸಂಘಕ್ಕೆ ಪತ್ರ ಬರೆದು ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.15, 16 ಮತ್ತು 17 ರಲ್ಲಿ ಒಟ್ಟು 33 ಎಕರೆ 02 ಗುಂಟೆ ಜಮೀನನ್ನು ನೌಕರರ ಸಂಘಕ್ಕೆ ಹಂಚಿಕೆ ಮಾಡಿರುವುದಾಗಿ ಕೆಲವು ಷರತ್ತುಗಳನ್ನು ವಿಧಿಸಿ ಪತ್ರವನ್ನು ನೀಡಿರುತ್ತಾರೆ. ಈ ಪತ್ರದ ಷರತ್ತಿನಲ್ಲಿ ಕ್ರಮ ಸಂಖ್ಯೆ 5 ರಲ್ಲಿ ನಿವೇಶನಗಳನ್ನು ಹಾಲಿ ಸೇವೆಯಲ್ಲಿರುವ ಪ್ರಾಧಿಕಾರದ ಅಧಿಕಾರಿ ನೌಕರರುಗಳಿಗೆ ಮಾತ್ರ ನಿವೇಶನಗಳನ್ನು ಹಂಚತಕ್ಕದೆಂದು ಷರತ್ತಿಗೆ ಒಳಪಡಿಸಿರುತ್ತಾರೆ. ಸದರಿ ಬಡಾವಣೆಯನ್ನು ರಚನೆ ಮಾಡುವ ಸಂದರ್ಭದಲ್ಲಿ ಲಭ್ಯವಿರುವ ನಿವೇಶನಗಳನ್ನು ಮೊದಲು ಪ್ರಾಧಿಕಾರದ ಅಧಿಕಾರಿ ನೌಕರರಿಗೆ ಮಾತ್ರ ಹಂಚಿಕೆ ಮಾಡಲಾಗಿರುತ್ತದೆ ಸರ್ಕಾರಿ ಆದೇಶದಂತೆ ನೌಕರರ ಸಂಘವು ಪೂರ್ಣ 45 ಎಕರೆ ಜಮೀನಿಗೆ ಹಣ ಸಂದಾಯ ಮಾಡಿದ್ದು ಜಮೀನು ಲಭ್ಯವಿಲ್ಲದ ಕಾರಣ ಹಂತ ಹಂತವಾಗಿ ನಾಲ್ಕು ಬಾರಿ ನೌಕರರ ಸಂಘಕ್ಕೆ 42 ಎಕರೆ ಜಮೀನನ್ನು ಹಸ್ತಾಂತರಿಸಲಾಗಿದೆ. ಹಸ್ತಾಂತರಿಸಿರುವ ಜಮೀನಿನಲ್ಲಿ ಬಡಾವಣೆ ರಚನೆ ಮಾಡುವ ಸಂದರ್ಭದಲ್ಲಿ ಗ್ರಾಮಸ್ಥರು ಮತ್ತು ಸುತ್ತಮುತ್ತಲಿರುವ ಗ್ರಾಮಸ್ಥರು ಬಡಾವಣೆ ರಚನೆ ಮಾಡಲು ಅಡ್ಡಿ ಪಡಿಸಿದ ಮೇರೆಗೆ ದಿನಾಂಕ: 14/12/2006 ರಂದು ಬಡಾವಣೆ ನಿರ್ಮಾಣದ ಪೂಜಾ ಕಾರ್ಯಕ್ರಮ ದಿನದಂದು ಸುತ್ತಮುತ್ತಲಿನ ಗ್ರಾಮಸ್ಥರು ಬಡಾವಣೆ ನಿರ್ಮಾಣಕ್ಕೆ ಅಡ್ಡಿಪಡಿಸಿದ್ದರಿಂದ ಅಂದೇ ಪ್ರಾಧಿಕಾರದ ನೌಕರರ ಸಂಘವು ಗ್ರಾಮಸ್ಥರಿಗೂ ಅವರು ಸೂಚಿಸುವ ವ್ಯಕ್ತಿಗಳಿಗೆ ನಿವೇಶನ ನೀಡುತ್ತೇವೆಂದು ಕರಾರು ಒಪ್ಪಂದವಾಗಿರುತ್ತದೆ ನಂತರ ದಿನಾಂಕ: 30/09/2007 ರಂದು ನೌಕರರ ಸರ್ವ ಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನ ಕೈಗೊಳ್ಳಲಾದಂತೆ ಹಾಗೂ ಬಡಾವಣೆಯು ಸುಲಲಿತವಾಗಿ ನಡೆಯಬೇಕೆಂಬ ಉದ್ದೇಶದಿಂದ ಸಭೆಯಲ್ಲಿದ್ದ ಎಲ್ಲಾ ಸದಸ್ಯರು ಗ್ರಾಮಸ್ಥರಿಗೆ ಅವರು ಸೂಚಿಸುವ ವ್ಯಕ್ತಿಗಳಿಗೆ ನಿವೇಶನ ಹಂಚಲು

... ವಿಬಂಧಕರ ಕಛೇರಿ ನಂ.1 ಅಲಿ ಅಸ್ಗರ್ ರಸ್ತೆ ಇವರ ಆದೇಶದಂತೆ ಕ್ರಮ ... ಮತ್ತು 6 ರಿಂದ ಸಂಘದಿಂದ 150 ಅರ್ಜಿಗಳನ್ನು ವಿತರಿಸಲಾಯಿತು. ಅದರಂತೆ ... ಅರ್ಜಿ ಕಳುಹಿಸಿದ ವ್ಯಕ್ತಿಗಳಿಗೆ ಮುಕ್ತ ನಿವೇಶನ ನೀಡಬೇಕೆಂಬ ಬೇಡಿಕೆಯನ್ನು ತಿರಸ್ಕರಿಸಿ ಅವರಿಗೂ ನೌಕರರಂತೆಯೇ ಹಣ ಪಾವತಿಸಿಕೊಂಡು ನಿವೇಶನ ಹಂಚಿಕೆ ಮಾಡಲಾಗಿದೆ.

ಮೇಲ್ಕಂಡ ವಿಷಯಗಳು ಶ್ರೀ.ಡಿ.ಟಿ. ಕೃಷ್ಣೇಗೌಡ ಇವರಿಗೆ ತಿಳಿದಿದ್ದರೂ ದಿನಾಂಕ: 25/11/2008 ರಂದು ಮಾನ್ಯ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದರು ದಿನಾಂಕ: 21/11/2008 ರಂದು ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ದೂರು ದಾಖಲಿಸಿ ನ್ಯಾಯಾಲಯವು ಎರಡು ಕಡೆ ವಾದವನ್ನು ಆಲಿಸಿ ಕೃಷ್ಣೇಗೌಡ ಅವರ ದೂರಿನಲ್ಲಿ ಸತ್ಯಾಂಶವಿಲ್ಲವೆಂದು ಸದರಿ ದೂರು ದಾರರ ಅರ್ಜಿಯನ್ನು ವಜಾಮಾಡಿರುತ್ತದೆ. ಈ ಆದೇಶದ ಬಳಿಕ ಮತ್ತೆ ಕೃಷ್ಣೇಗೌಡ ರವರು ಕರ್ನಾಟಕ ರಾಜ್ಯ ಗ್ರಾಹಕರ ವೇದಿಕೆ ಮುಂದೆ ದಿನಾಂಕ: 28/03/2009 ರಂದು ಮರು ಮನವಿಯನ್ನು ಸಲ್ಲಿಸಿದ್ದು 16/04/2009 ರಂದು ಕೃಷ್ಣೇಗೌಡರ ಮೇಲ್ಮನವಿಯನ್ನು ಮಾನ್ಯ ನ್ಯಾಯಾಲಯವು ವಜಾಮಾಡಿರುತ್ತದೆ.

ಈ ಎರಡೂ ಆದೇಶಗಳು ವ್ಯತಿರಿಕ್ತವಾದ ಪ್ರಯುಕ್ತ ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 18658/2009 ರಲ್ಲಿ ದೂರನ್ನು ದಾಖಲಿಸಿದ್ದರು ನಂತರ ಕೃಷ್ಣೇಗೌಡ ರವರು ನೌಕರರ ಸಂಘಕ್ಕೆ ಖುದ್ದಾಗಿ ಭೇಟಿ ನೀಡಿ ದಾಖಲೆಗಳನ್ನು ಹಾಗೂ ಹಂಚಿಕೆ ನಿಯಮಾವಳಿಗಳನ್ನು ಪರಿಶೀಲಿಸಿದ್ದು ನೌಕರರ ಸಂಘದ ನಿವೇಶನಗಳ ಹಂಚಿಕೆಯಲ್ಲಿ ಯಾವುದೇ ಲೋಪದೋಷ ಕಂಡು ಬಂದಿಲ್ಲವೆಂದು ದೃಢಪಡಿಸಿಕೊಂಡು ನಾನು ನಿವೇಶನಕ್ಕೆ ಪಾವತಿಸಿರುವ ಹಣವನ್ನು ಹಿಂತಿರುಗಿಸಿದ್ದಲ್ಲಿ ನನ್ನ ಮಗನಿಂದ ಹಣವನ್ನು ವರ್ಗಾಯಿಸಿಕೊಂಡು ರೈತರು ಮತ್ತು ಸಂಘದ ಮಧ್ಯೆ ಮಾಡಿಕೊಂಡಿರುವ ಒಪ್ಪಂದದಂತೆ ಮತ್ತು ಸರ್ವಸದಸ್ಯರ ನಡವಳಿಕೆಯಂತೆ ತಿಳಿಸಿ ರೈತರಿಂದ ನೀವು ನೀಡಿರುವ ಅರ್ಜಿಗೆ ರೈತರ ಕಡೆಯಿಂದ ನಿವೇಶನ ಹಂಚಿಕೆ ಪಡೆಯಲು ತೀರ್ಮಾನಿಸಿ ರೈತರ ಕಡೆಯಿಂದ ಅರ್ಜಿ ಸಲ್ಲಿಸಿ ನಿವೇಶನ ಪಡೆದಿರುತ್ತಾರೆ. (ನಿವೇಶನ ಸಂಖ್ಯೆ 175 ಲಿಂಗದೀರನಹಳ್ಳಿ) ನಂತರ ಶ್ರೀ. ಕೃಷ್ಣೇಗೌಡ ಅವರು ಮಾನ್ಯ ಲೋಕಾಯುಕ್ತರಿಗೆ ದಿನಾಂಕ 08/06/2011 ರಂದು ಮನವಿ ಸಲ್ಲಿಸಿ ನಾವು ನೌಕರರ ಸಂಘದ ವಿರುದ್ಧ ಮಾಡಿರುವ ಆಪಾದನೆಯನ್ನು ಸಂಘದಲ್ಲಿ

ದಾಖಲೆಗಳನ್ನು ಪರಿಶೀಲಿಸಿದ ನಂತರ ಮನದಟ್ಟು ಮಾಡಿಕೊಂಡು ಲೋಕಾಯುಕ್ತರಿಗೆ ನೀಡಿರುವ ದೂರನ್ನು ಮುಕ್ತಾಯ ಮಾಡಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ.

ಮತ್ತೆ ವಿವಿಧ ಬೇನಾಮಿ ಹೆಸರುಗಳಲ್ಲಿ ಸಂಘದ ವಿರುದ್ಧ ದೂರುಗಳು ಬಂದ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ನಿಬಂಧಕರು ಪತ್ರ ಸಂಖ್ಯೆ ಡಿಆರ್‌ಬಿಎಸ್/ಪಿಟಿಎನ್/653/2010-11, ದಿನಾಂಕ : 09/11/2011 ಸಹಕಾರ ಸಂಘಗಳ ನಿಬಂಧಕರುಗಳ ಶಿಫಾರಸ್ಸಿನಂತೆ ಸಂಘದ ವಿರುದ್ಧ ಯಾವುದೇ ದೂರುಗಳಲ್ಲಿ ಸತ್ಯಾಂಶ ಇಲ್ಲವೆಂದು ದೂರುಗಳಿಗೆ ಸಂಬಂಧಪಟ್ಟಂತೆ ಸರ್ಕಾರದ ಮಟ್ಟದಲ್ಲಿ ಮುಕ್ತಾಯಗೊಳಿಸಲಾಗಿದೆ.

ಈ ಮೇಲ್ಕಂಡ ಎಲ್ಲಾ ಅಂಶಗಳು ಸತ್ಯಾಂಶದಿಂದ ಕೂಡಿದೆ ಎಂದು ತಿಳಿಸುತ್ತಾ ದೂರುದಾರರಾದ ಕೃಷ್ಣೇಗೌಡರವರು ನೀಡಿರುವ ದೂರಿನಲ್ಲಿ ಸತ್ಯಾಂಶವಿಲ್ಲವೆಂದು ಹಾಗೂ ದುರುದ್ದೇಶದಿಂದ ಕೂಡಿದೆ ಎಂದೂ ತಿಳಿಸಿರುತ್ತಾರೆ. ಈ ಬಗ್ಗೆ ಸಂಘದ ಅಧ್ಯಕ್ಷರು ನೀಡಿರುವ ಲಿಖಿತ ಹೇಳಿಕೆ ಮತ್ತು ಎಲ್ಲಾ ದಾಖಲಾತಿಗಳನ್ನು ಈ ಕೆಳಕಂಡಂತೆ ಲಗತ್ತಿಸಿದೆ (ಅನುಬಂಧ-6)

1) ಲಿಖಿತ ಹೇಳಿಕೆ ಪುಟ 1 ರಿಂದ 4 ರವರೆಗೆ
2) ತಿದ್ದುಪಡಿಯನ್ನೊಳಗೊಂಡ ನೋಂದಾಯಿತ ಉಪ ನಿಯಮದ ದೃಢೀಕೃತ ಪ್ರತಿ. (ಪುಟ-1)
3) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನೌಕರರ ಸಂಘಕ್ಕೆ ನಿವೇಶನ ಮಂಜೂರಾತಿ ನೀಡಿರುವ ಪ್ರತಿ.
4) ಲೆಕ್ಕಪತ್ರಗಳ ಸ್ವೀಕೃತಿ ಪ್ರತಿ
5) ಮಂಜೂರಾದ ಭೂಮಿಯ ಪೈಕಿ ಅಸೋಸಿಯೇಷನ್‌ಗೆ ಲಭ್ಯವಾದ ಒಟ್ಟು ಜಮೀನಿನ ದೃಢೀಕೃತ ಪ್ರತಿ.
6) ಅಸೋಸಿಯೇಷನ್ ನೀಡಿದ ಜಮೀನುಗಳಲ್ಲಿ ಸಂಘಕ್ಕೆ ಲಭ್ಯವಾದ ಒಟ್ಟು ಜಮೀನಿನ ವಿವರ.
7) ಸಂಘದ ಸದಸ್ಯರ ಪಟ್ಟಿ ಹಂಚಿಕೆ ಸಮೇತ (ಪುಟ 1 ರಿಂದ 36 ಒಟ್ಟು 802 ಸದಸ್ಯರ ಪಟ್ಟಿ)
8) ಹಾಲಿ ಪ್ರಾಧಿಕಾರದಲ್ಲಿ ಸೇವೆಯಲ್ಲಿರುವ ಅಧಿಕಾರಿಗಳು ಮತ್ತು ನೌಕರರುಗಳಿಗೆ ಹಂಚಿಕೆ ಮಾಡಿರುವ ನಿವೇಶನಗಳ ವಿವರ. (ಪುಟ 1 ರಿಂದ 24 ರವರೆಗೆ ಒಟ್ಟು 630 ಸದಸ್ಯರ ಪಟ್ಟಿ)
9) ಸರ್ವಸದಸ್ಯರ ತೀರ್ಮಾನದ ಪ್ರತಿ. (ಪುಟ 1 ರಿಂದ 18 ರವರೆಗೆ)
10) ಸಂಘದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಹಾಲಿ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿಯ ಸದಸ್ಯರ ಪಟ್ಟಿ (ಪುಟ 1).
11) ನಿವೇಶನ ಹಂಚಿಕೆಯಾಗದೇ ಇರುವ ಬಿ.ಡಿ.ಎ ನೌಕರರು ಮತ್ತು [illegible] ನೌಕರರ ಪಟ್ಟಿ (ಪುಟ 1 ರಿಂದ 06 ಒಟ್ಟು 116 ಸದಸ್ಯರ ಪಟ್ಟಿ)
12) ನಿವೃತ್ತಿ ಹೊಂದಿರುವ ನೌಕರರ ಪಟ್ಟಿ (ಪುಟ 1 ರಿಂದ 5 ಒಟ್ಟು 145 ಸದಸ್ಯರ ಪಟ್ಟಿ)

ಈ ಸಂಬಂಧ ಸಂಘದ ಅಧ್ಯಕ್ಷರ ವಿವರಣೆಯನ್ನು ಲಗತ್ತಿಸಿ ಈ ವಿಚಾರದಲ್ಲಿ ಪ್ರತಿ ಹೇಳಿಕೆಯನ್ನು ದಾಖಲಿಸುವಂತೆ ದೂರುದಾರರಾದ ಶ್ರೀ.ಡಿ.ಎನ್. ಕೃಷ್ಣೇಗೌಡ ರವರಿಗೆ ದಿನಾಂಕ 19/08/2015 ರಂದು ನೋಟೀಸ್ ಜಾರಿ ಮಾಡಿ ದಿನಾಂಕ 15/09/2015 ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿತ್ತು. ಪ್ರತಿಯನ್ನು (ಅನುಬಂಧ-7) ಲಗತ್ತಿಸಿದೆ.

ಆದರೆ ದೂರುದಾರರಾದ ಶ್ರೀ.ಡಿ.ಎನ್. ಕೃಷ್ಣೇಗೌಡ ಇವರು ದಿನಾಂಕ 09/09/2015 ರಂದು ವಿಚಾರಣಾಧಿಕಾರಿಗಳಿಗೆ ಮನವಿ ಪತ್ರವೊಂದನ್ನು ಸಲ್ಲಿಸಿ ಅದರಲ್ಲಿ ದಿನಾಂಕ 15/09/2015 ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿರುವುದರಿಂದ ನನ್ನ ವೈಯಕ್ತಿಕ ಕಾರಣಗಳಿಂದ ಅದಿನ ವಿಚಾರಣೆಗೆ ಹಾಜರಾಗಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿ ಅದರ ಬದಲು ದಿನಾಂಕ 09/09/2015 ರಂದೇ ವಿಚಾರಣೆಗೆ ಹಾಜರಾಗಿ ಪ್ರತಿ ಹೇಳಿಕೆಯನ್ನು ದಾಖಲಿಸಲು ಅವಕಾಶ ಮಾಡಿಕೊಡುವಂತೆ ಕೋರಿದ್ದರು (ಅನುಬಂಧ-8) ಪ್ರತಿಯನ್ನು ಲಗತ್ತಿಸಿದೆ. ಅದರಂತೆ ಇವರ ಮನವಿಯನ್ನು ಪರಿಗಣಿಸಿ ದಿನಾಂಕ 15/09/2015 ರಂದು ನಡೆಸಬೇಕಾಗಿದ್ದ ವಿಚಾರಣೆಯನ್ನು ದಿನಾಂಕ 09/09/2015 ರಂದೇ ಸದರಿ ವಿಚಾರಣೆಯನ್ನು ಕೈಗೆತ್ತಿಕೊಂಡು ಶ್ರೀಯುತ ಡಿ.ಟಿ.ಕೃಷ್ಣೇಗೌಡ ರವರು ನೀಡಿರುವ ದೂರಿಗೆ ಸಂಬಂಧಿಸಿದಂತೆ ಸಂಘದ ಅಧ್ಯಕ್ಷರಾದ ಡಿ.ಎನ್. ಬೆಟ್ಟೇಗೌಡ ಇವರು ನೀಡಿರುವ ಸಮಜಾಯಿಷಿಗೆ ದೂರುದಾರರಾದ ಶ್ರೀ.ಡಿ.ಟಿ. ಕೃಷ್ಣೇಗೌಡ ರವರು ಆರೋಪವನ್ನು ಸಾಬೀತು ಪಡಿಸಬಹುದಾದ ಪೂರಕ ದಾಖಲೆಗಳೊಂದಿಗೆ ಈ ಕೆಳಕಂಡಂತೆ ಅವರ ಲಿಖಿತ ಹೇಳಿಕೆಯನ್ನು ವಿಚಾರಣಾ ಸಂದರ್ಭದಲ್ಲಿ ದಾಖಲಿಸಿರುತ್ತಾರೆ ಅದರಂತೆ

ಕರ್ನಾಟಕ ಸುವರ್ಣ ರಾಜ್ಯೋತ್ಸವದ ಪ್ರಯುಕ್ತ ನಿಯಮಾವಳಿಗಳನ್ನು ಸಡಿಲಿಸಿ ರಿಯಾಯಿತಿ ದರದಲ್ಲಿ ನಿವೇಶನಗಳನ್ನು ಸಿ ಮತ್ತು ಡಿ ಗುಂಪಿನ ನೌಕರರಿಗೆ ಮಾತ್ರ ಹಂಚಿಕೆ ಮಾಡಿಕೊಳ್ಳಲು ಪತ್ರ ಸಂಖ್ಯೆ ಬೆಂಅಪ್ರಾಆಯುಕ್ತರು:2861/2005-06ರ ದಿನಾಂಕ 12/01/2006 ರಂದು ಘನ ಸರ್ಕಾರಕ್ಕೆ ಪ್ರಾಧಿಕಾರವು ಪತ್ರ ಬರೆದಿರುತ್ತದೆ. ಈ ಪತ್ರಕ್ಕೆ ಅನುಸಾರವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರು ಪತ್ರ ಸಂಖ್ಯೆ ನಅಇ/40/ಬೆಂಅಪ್ರಾ/2006ರ ದಿನಾಂಕ 19/04/2006 ರಂದು ಪ್ರಾಧಿಕಾರದ ನೌಕರರ ಸಂಘಕ್ಕೆ ಅದರ ನೌಕರರಿಗೆ ಮಾತ್ರ ನಿವೇಶನಗಳನ್ನು ಹಂಚಲು, ಪ್ರಾಧಿಕಾರದ ಆಯುಕ್ತರಿಗೆ ಜಮೀನಿನ ಲಭ್ಯತೆ ನೋಡಿಕೊಂಡು ಪ್ರಾಧಿಕಾರದ ನೌಕರರ ಸಂಘಕ್ಕೆ

ಆದರೆ ನೌಕರರಿಗೆ ಮಾತ್ರ ನಿವೇಶನಗಳನ್ನು ಹಂಚಲು, ಪ್ರಾಧಿಕಾರದ ಆಯುಕ್ತರಿಗೆ ಜಮೀನಿನ ಲಭ್ಯತೆ ನೋಡಿಕೊಂಡು ಪ್ರಾಧಿಕಾರದ ನೌಕರರ ಸಂಘಕ್ಕೆ ಜಮೀನು ಹಂಚಿಕೆ ಮಾಡಬಹುದೆಂದು ನಿರ್ದೇಶನ ನೀಡಿರುತ್ತಾರೆ. ಈ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 1976 ಹಾಗೂ ನಿಯಮಗಳ ಅಧ್ಯಾಯ 4 ರ ನಿಯಮ 49 ರಂತೆ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಒಟ್ಟು ಸಿಬ್ಬಂದಿಗಳ ಸಂಖ್ಯೆಯ ಮಾಹಿತಿಯು ಅರಿವಿರುವ ಆಯುಕ್ತರು ಈ ನೌಕರರಲ್ಲಿ ನಿವೇಶನಕ್ಕೆ ಹಣ ಪಾವತಿಸಿ ಸದಸ್ಯತ್ವ ಪಡೆದ ಹಾಲಿ ಮತ್ತು ನಿವೃತ್ತ ನೌಕರರ ಸಂಖ್ಯೆಗನುಗುಣವಾಗಿ ಲೆಕ್ಕ ಹಾಕಿ, ಇಂತಿಷ್ಟು ಜಮೀನಿನಲ್ಲಿ ಇಂತಿಷ್ಟು ನಿವೇಶನಗಳನ್ನು ರಚಿಸಿ, ಸದಸ್ಯತ್ವ ಪಡೆದ ಹಾಲಿ ಮತ್ತು ನಿವೃತ್ತ ನೌಕರರಿಗೆ ಮಾತ್ರ ನಿವೇಶನ ಹಂಚಿಕೆ ಮಾಡಲು ಅಂದಾಜು ಮಾಡಿ ಆಯುಕ್ತರು ಆದೇಶ ಮಾಡಬಹುದಾಗಿತ್ತು. ಈ ಕೆಲಸವನ್ನು ಆಯುಕ್ತರು ಮಾಡಿರುವುದಿಲ್ಲ.

ಇನ್ನು ಎರಡನೆಯದಾಗಿ ಅಸೋಸಿಯೇಷನ್‌ರವರು ಸದಸ್ಯತ್ವ ಶುಲ್ಕ ರೂ.1,050/- ಲಾಟರಿ ಸುತ್ತೋಲೆಗಳನ್ನು ಹೊರಡಿಸಿದಾಗ ಲಾಟರಿ ಮೂಲಕ ನೌಕರರಿಗೆ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ ತಿಳಿಸಿದ್ದು ಲಾಟರಿ ಎತ್ತುವ ಮೂಲಕವಾಗಲೀ ಜೇಷ್ಠತೆಯನ್ನು ನಿರ್ವಹಣೆ ಮಾಡದೇ, ಸರ್ಕಾರದ ಅಥವಾ ಪ್ರಾಧಿಕಾರದ ಆದೇಶವಿಲ್ಲದೇ ಕಾನೂನು ಬಾಹಿರವಾಗಿ ಎರವಲು ಸೇವೆ ನೌಕರರು ಇತರೆ ಇಲಾಖೆಗಳ ನೌಕರರು ಮತ್ತು ಸಾರ್ವಜನಿಕರಿಗೆ ಹಂಚಿಕೆ ಮಾಡಿ ನೋಂದಣಿ ಮಾಡಿಕೊಟ್ಟಿರುತ್ತಾರೆ. ಇವರೆಲ್ಲರಿಗೂ ನಿವೇಶನ ನೀಡುವಂತೆ ಪ್ರಾಧಿಕಾರ ಅಥವಾ ಸರ್ಕಾರದ ಆದೇಶವಿರುವುದಿಲ್ಲ ಮತ್ತು ಸಂಘದ ಬೈಲಾದಲ್ಲಿಯೂ ಅವಕಾಶವಿರುವುದಿಲ್ಲ ಸಂಘದ ವತಿಯಿಂದ ದೊಡ್ಡ ಕಲ್ಲಸಂದ್ರ ಗ್ರಾಮದ ನಿವೇಶನ ಸಂಖ್ಯೆ 334 (ಎ) ಮತ್ತು 388 ರ ನಿವೇಶನಗಳನ್ನು ಕ್ರಮವಾಗಿ ಶ್ರೀಮತಿ. ಜಯಮ್ಮ ಮತ್ತು ಶ್ರೀಮತಿ. ಎಸ್. ಸುಧಾ ಎಂಬುವವರಿಗೂ ಹಾಗೂ ಲಿಂಗದೀರನಹಳ್ಳಿ ಗ್ರಾಮದ ನಿವೇಶನ ಸಂಖ್ಯೆ 223, 300 ಮತ್ತು 308 ರ ನಿವೇಶನಗಳನ್ನು ಶ್ರೀ. ದೇವೇಗೌಡ, ಶ್ರೀಮತಿ. ಕವಿತ. ಮತ್ತು ಶ್ರೀಮತಿ. ನಳಿನಿ ಎಂಬುವವರಿಗೆ ನೋಂದಣಿ ಮಾಡಿಕೊಡಲಾಗಿದೆ. ಮುಂದುವರೆದು ದೊಡ್ಡ ಕಲ್ಲಸಂದ್ರ ಗ್ರಾಮದ ನಿವೇಶನ ಸಂಖ್ಯೆ 12 (ಬಿ) 13, 71 ಮತ್ತು 76 ರ ನಿವೇಶನಗಳನ್ನು ಕ್ರಮವಾಗಿ ಶ್ರೀ. ಕೆ. ವಿಕೇಶ್ ಬಾಬು, ಶ್ರೀಮತಿ. ರೇಖಾ ಗೋವಿಂದರಾಜ್ ಮತ್ತು ಕೆ.ಗೋವಿಂದರಾಜ್ ಶ್ರೀ.ಎಸ್.ಸಿ. ಬಸವರಾಜಯ್ಯ ಹಾಗೂ

ಎಂ.ಎನ್.ಶಂಕರ್ ಭಟ್ ಇವರುಗಳಿಗೆ ಹಾಗೂ ಲಿಂಗದೀರನಹಳ್ಳಿ ಗ್ರಾಮದ ನಿವೇಶನ ಸಂಖ್ಯೆ 151, 152, 153, ಮತ್ತು 263 ರ ನಿವೇಶನಗಳನ್ನು ಕ್ರಮವಾಗಿ ಶ್ರೀ. ಪ್ರವೀಣ, ನಾಗರಾಜ ಅಂಚಲ ಕೋಟೆ, ಶ್ರೀ.ಕೆ.ಎಂ.ಬಿ. ಚನ್ನಯ್ಯ ಶ್ರೀ. ಸುರೇಶ್ ಮೈಲಾರ, ಎಸ್.ಎಂ. ಕಲಾವತಿ ಹಾಗೂ ಶ್ರೀ.ವಿ. ರಾಮಚಂದ್ರರಾವ್ ಇವರುಗಳಿಗೆ ಸ್ವಾಧೀನ ಪತ್ರಗಳನ್ನು ನೀಡಲಾಗಿರುತ್ತದೆ. ಇವರುಗಳ್ಯಾರು ಪ್ರಾಧಿಕಾರದ ಮೂಲ ನೌಕರರಾಗಿರುವುದಿಲ್ಲ.

ಇನ್ನು ಬಡಾವಣೆ ನಿರ್ಮಾಣದ ಮೋಜಣಿ ಕಾರ್ಯಕ್ರಮ ಬಡಾವಣೆ ರಚಿಸುವಾಗ ಗ್ರಾಮಸ್ಥರು ಮತ್ತು ಸುತ್ತಮುತ್ತಲಿನ ಸಾರ್ವಜನಿಕರು ಅಡ್ಡಿ ಪಡಿಸಿದರೆಂದು ಅನೇಕ ಸಬೂಬುಗಳನ್ನು ಅಸೋಸಿಯೇಷನ್ ರವರು ಸೃಷ್ಟಿಸುತ್ತಿದ್ದಾರೆ. ಅಸೋಸಿಯೇಷನ್‌ಗೆ ಬಿಡುಗಡೆ ಮಾಡಿರುವ ಜಮೀನನ್ನು ಪ್ರಾಧಿಕಾರವು ಸ್ವಾಧೀನ ಪಡಿಸಿಕೊಂಡು ನೀಡಿರುತ್ತದೆ. ಈ ಜಮೀನುಗಳಿಗೆ ಪ್ರಾಧಿಕಾರವು 4(1) ಮತ್ತು 6(1) ಅಧಿಸೂಚನೆಗಳನ್ನು ಹೊರಡಿಸಿ ಸಂಬಂಧಪಟ್ಟ ಜಮೀನಿನ ರೈತರು ಅಥವಾ ಭೂ ಮಾಲೀಕರಿಗೆ ಅವಾರ್ಡ್ ರಚಿಸಿರುವುದು ತಿಳಿದು ಬಂದಿರುತ್ತದೆ.

ಈ ಕಾರ್ಯಗಳನ್ನು ಮಾಡದೇ ಪ್ರಾಧಿಕಾರವು ಜಮೀನನ್ನು ಅಸೋಸಿಯೇಷನ್‌ಗೆ ಕೊಡಲು ಸಾಧ್ಯವಿಲ್ಲ. ಅದರ ಗ್ರಾಮಸ್ಥರು ಮತ್ತು ಸುತ್ತಮುತ್ತಲಿನ ವ್ಯಕ್ತಿಗಳು ಅಡ್ಡಿಪಡಿಸಿದರೆಂದು ಏಕಾಏಕಿ ಕೆಲವೇ ವ್ಯಕ್ತಿಗಳು ಕರಾರು ಒಪ್ಪಂದ ಅಥವಾ ಒಳ ಒಪ್ಪಂದ ಮಾಡಿಕೊಂಡಿರುವುದಾಗಿ ತಿಳಿದುಬಂದಿರುತ್ತದೆ. ಆದರೆ ಈ ಒಳ ಒಪ್ಪಂದಕ್ಕೆ ಮಾನ್ಯತೆ ಇರುವುದಿಲ್ಲ. ಏಕೆಂದರೆ ಜಮೀನನ್ನು ಸರ್ಕಾರದಿಂದ ಅನುಮತಿ ಪಡೆದು ರಿಯಾಯಿತಿ ದರದಲ್ಲಿ ಪ್ರಾಧಿಕಾರವು ನೀಡುತ್ತಿರುವಾಗ, ಈ ವಿಚಾರವನ್ನು ಪ್ರಾಧಿಕಾರ ಅಥವಾ ಸರ್ಕಾರದ ಗಮನಕ್ಕೆ ಅಸೋಸಿಯೇಷನ್‌ನವರು ತಂದು ಮುಂದಿನ ಕ್ರಮ ಕೈಗೊಳ್ಳಬಹುದಾಗಿತ್ತು. ಇದಲ್ಲದೇ ಪೋಲೀಸರ ರಕ್ಷಣೆ ಪಡೆದು ಬಡಾವಣೆ ನಿರ್ಮಾಣ ಕಾರ್ಯ ಕೈಗೊಳ್ಳಬಹುದಾಗಿತ್ತು. ಇಲ್ಲವೇ ಪ್ರಾಧಿಕಾರವೇ ಬಡಾವಣೆ ರಚಿಸಿ ತನ್ನ ನೌಕರರಿಗೆ ಹಂಚಿಕೆ ಮಾಡಬಹುದಾಗಿತ್ತು. ಸರ್ಕಾರದಿಂದ ರಿಯಾಯಿತಿ ದರದಲ್ಲಿ ಅಂದರೆ ದೊಡ್ಡಕಲ್ಲಸಂದ್ರದಲ್ಲಿ ಒಂದು ಎಕರೆಗೆ ರೂ.1,86,452 ಗಳನ್ನು ಅಸೋಸಿಯೇಷನ್ ಪಾವತಿಸಿ, ಗ್ರಾಮಸ್ಥರಿಗೆ ಅಥವಾ ಒಪ್ಪಂದ ಮಾಡಿಕೊಳ್ಳುವ ಅಧಿಕಾರ ಸರ್ವ ಸದಸ್ಯರ ಸಭೆಗೂ ಇರುವುದಿಲ್ಲ

ಹಾಗೂ ಪ್ರಾಧಿಕಾರವು ಅಕ್ವೈರ್ ಮಾಡಿಕೊಂಡಿರುವ ಜಮೀನಿಗೆ ಕಾನೂನಿನ ಪ್ರಕಾರ ಇತರರು ಅಡ್ಡಿಪಡಿಸಲು ಸಾಧ್ಯವಿಲ್ಲ.

ಮುಂದುವರೆದಂತೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಸೋಸಿಯೇಷನ್‌ಗಳಲ್ಲಿ ಅವ್ಯವಹಾರ ನಡೆದಿದೆ ಇದು ಸಾಬೀತಾದ ಹಿನ್ನೆಲೆಯಲ್ಲಿ ದಾಖಲಾತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು. ನಂತರದ ದಿನಗಳಲ್ಲಿ ಒಂದು ನಿವೇಶನವನ್ನು ಅಸೋಸಿಯೇಷನ್‌ನವರು ನನ್ನ ಮಗನ ಹೆಸರಿಗೆ ನೋಂದಣಿ ಮಾಡಿಕೊಟ್ಟ ನಂತರ ನ್ಯಾಯಾಲಯದಲ್ಲಿದ್ದ ದಾವೆಯನ್ನು ಹಿಂಪಡೆದ ನಂತರವೂ ಇಲ್ಲಿಯವರೆವಿಗೂ ಸಾರ್ವಜನಿಕರಿಗೆ, ಎರವಲು ಸೇವಾ ನೌಕರರು ಹಾಗೂ ಇತರ ಇಲಾಖೆಗಳ ನೌಕರರಿಗೆ ನೋಂದಾಯಿಸುತ್ತಿರುವುದಾಗಿ ತಿಳಿದುಬಂದಿರುತ್ತದೆ.

ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದಲ್ಲಿ ಸ್ಪಷ್ಟವಾಗಿ ಮತ್ತು ಖಂಡಿತವಾಗಿಯೂ ಅವ್ಯವಹಾರ ನಡೆದಿದೆ ಎಂಬುದಕ್ಕೆ ಕೆಲವು ಮಾಹಿತಿಗಳನ್ನು ಮತ್ತು ದಾಖಲಾತಿಗಳನ್ನು ಹಾಜರು ಪಡಿಸಲಾಗಿದೆ.

1) ಸಂಘವು ನಿವೇಶನ ಹಂಚಿಕೆಯಲ್ಲಿ ಜೇಷ್ಠತೆಯನ್ನು ನಿರ್ವಹಣೆ ಮಾಡಿರುವುದಿಲ್ಲ.

2) ಬಿಡಿಎನ ಎರವಲು ಸೇವಾ ನೌಕರರು, ಇತರ ಇಲಾಖೆಗಳ ನೌಕರರು ಮತ್ತು ಸಾರ್ವಜನಿಕರಿಗೆ ನಿವೇಶನ ಹಂಚಿಕೆ ಮಾಡಲು ಪ್ರಾಧಿಕಾರ ಅಥವಾ ಸರ್ಕಾರದ ಆದೇಶವನ್ನು ಪಡೆದಿಲ್ಲ ಹಾಗೆ ಸಂಘದ ಬೈಲಾದಲ್ಲಿ ಅವಕಾಶವಿಲ್ಲ. ಪ್ರಾಧಿಕಾರದ ನೌಕರರಿಗೆ ಮಾತ್ರ ನಿವೇಶನ ಹಂಚಿಕೆ ಮಾಡಬೇಕೆಂಬ ಷರತ್ತನ್ನು ಪ್ರಾಧಿಕಾರವು ವಿಧಿಸಿರುತ್ತಾರೆ.

3) ಹಂಚಿಕೆದಾರರ ಮತ್ತು ಪತ್ನಿಯ ಹೆಸರನ್ನು ಸೇರಿಸಿ ಹಂಚಿಕೆ ಪತ್ರ ನೀಡತಕ್ಕದ್ದು ಎಂದು ಪ್ರಾಧಿಕಾರದ ಆದೇಶವನ್ನು ಪಾಲನೆ ಮಾಡಿಲ್ಲ.

4) ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘವು ಸಹಕಾರ ಸಂಘಗಳ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಸಹಕಾರ ಸಂಘಗಳ ಅಪರ ನಿಬಂಧಕರು ಬರೆದಿರುವ ಪತ್ರ.

5) ಕ್ಷೇಮಾಭಿವೃದ್ಧಿ ಸಂಘವು ಸಹಕಾರ ಸಂಘಗಳ ವ್ಯಾಪ್ತಿಗೆ ಒಳಪಡದೇ ಇರುವುದರಿಂದ ಇತರ ಗೃಹ ನಿರ್ಮಾಣ ಸಹಕಾರ ಸಂಘಗಳಂತೆ ಸಹ ಸದಸ್ಯತ್ವ ಹೊಂದಿ, ಶೇಕಡ 10 ರಷ್ಟು ನಿವೇಶನಗಳನ್ನು ಹಂಚಿಕೆ ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ.

6) ಸಂಘವು ಹೊರಡಿಸಿದ ಸುತ್ತೋಲೆಯಲ್ಲಿ ಲಾಟರಿ ನಿವೇಶನ ಹಂಚಿಕೆ ಮಾಡಲಾಗುವುದೆಂದು ತಿಳಿಸಿದ್ದು, ಇದನ್ನು ಉಲ್ಲಂಘಿಸಿ ಇಷ್ಟ ಬಂದಂತೆ ನಿವೇಶನಗಳನ್ನು ವಿತರಿಸಿದ್ದು, ಅದಕ್ಕೆ ಅನುಮತಿಯನ್ನು ಪಡೆದಿರುವುದಿಲ್ಲ ಮತ್ತು ಈ ರೀತಿ ಮಾಡಲು ಆದೇಶವೂ ಇರುವುದಿಲ್ಲ.

7) ಮೊದಲನೆಯ ಹಂತವಾಗಿ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.15, 16 ಮತ್ತು 17ರಲ್ಲಿ 33 ಎಕರೆ 02 ಗುಂಟೆ ಜಮೀನನ್ನು ಬಿಡುಗಡೆ ಮಾಡಿದ ನಂತರ ಆ ಸ್ಥಳದಲ್ಲಿ ಲಭ್ಯವಿದ್ದ ಜಮೀನು 27 ಎಕರೆ 15 1/2 ಗುಂಟೆ ಎಂದು ತಿದ್ದುಪಡಿಯಾಗಿರುತ್ತದೆ. ಆದರೆ ಭೌತಿಕವಾಗಿ ಲಭ್ಯವಾದ ಜಮೀನು ಎಷ್ಟು ಎಂದು ಪರಿಶೀಲನೆ ಮಾಡಬೇಕಾಗಿದೆ. ಈ ಬಗ್ಗೆ ತನಿಖೆ ಕೈಗೊಳ್ಳಲು ಸರ್ಕಾರದ ಆದೇಶವಾಗಿರುತ್ತದೆ.

8) ಪ್ರಾಧಿಕಾರವು ದಿನಾಂಕ 17/06/2011 ರಂದು "ಇನ್ನು ಮುಂದೆ ಪ್ರಾಧಿಕಾರದ ನೌಕರರಲ್ಲದೇ ಎರವಲು ಸೇವೆಯ ನೌಕರರಿಗೆ ನಿವೇಶನ ಹಂಚಿಕೆ ಮಾಡಬಾರದು" ಎಂದು ಷರತ್ತು ವಿಧಿಸಿದ್ದರೂ, ಈ ಆದೇಶವನ್ನು ಉಲ್ಲಂಘಿಸಿ ಎರವಲು ಸೇವಾ ನೌಕರರು, ಇತರ ಇಲಾಖೆಗಳ ನೌಕರರು ಮತ್ತು ಸಾರ್ವಜನಿಕರಿಗೆ ನಿವೇಶನ ಹಂಚಿಕೆ ಮಾಡಿ ನೋಂದಾಯಿಸಲಾಗಿರುತ್ತದೆ.

9) ಪಟ್ಟಿಯಲ್ಲಿ ನಮೂದಾಗಿರುವ 58(1) (ನ್ಯ) ನಿವೇಶನಗಳನ್ನು ಕ್ರಮವಾಗಿ ಶ್ರೀ.ಎಲ್. ಸಾಗರ್ ಮತ್ತು ಶ್ರೀಮತಿ. ಆರ್.ಶೈಲಶ್ರೀ ಎಂಬುವವರಿಗೆ ನೋಂದಾಯಿಸಿರುವಾಗಿ ತಿಳಿದುಬಂದಿರುತ್ತದೆ.

10) ಅಸೋಸಿಯೇಷನ್ ವತಿಯಿಂದ ಕಾನೂನು ಬಾಹಿರವಾಗಿ 40 X 60 ನಿವೇಶನವನ್ನು ರಚಿಸಿ ದಿನಾಂಕ 10ನೇ ಮಾರ್ಚ್ 2013 ರಂದು ಶ್ರೀ.ಎನ್. ಶಿವನಂಜಯ್ಯ ಎಂಬುವವರಿಗೆ ನೋಂದಾಯಿಸಿರುವುದಾಗಿ ತಿಳಿದುಬಂದಿರುತ್ತದೆ.

11). ನನ್ನ ದಾವೆಗೆ ಸಂಬಂಧಿಸಿದಂತೆ, ನ್ಯಾಯಾಲಯವು ನಿವೇಶನ ಹಂಚಿಕೆ ಮಾಡಿ ನೋಂದಾಯಿತರಾಗಿರುವವರ ಪಟ್ಟಿಯನ್ನು ನೀಡುವಂತೆ ಆದೇಶ ಮಾಡಿದ್ದು, ಅದರಂತೆ ನಿವೇಶನ ಹಂಚಿಕೆಯಾಗಿ ನೋಂದಣಿಯಾಗಿರುವ ಪಟ್ಟಿಯನ್ನು ದಿನಾಂಕ 27/10/2010 ರಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಈ ಪಟ್ಟಿಯಲ್ಲಿ ನೋಂದಣಿಯಾದ ಸಂಪೂರ್ಣ ಮಾಹಿತಿಗಳನ್ನು ನೀಡದೇ ಕೆಲವು ಹೆಸರುಗಳನ್ನು ಮುಚ್ಚಿಡಲಾಗಿದೆ.

12) ಪ್ರಾಧಿಕಾರದಿಂದ ಜಮೀನನ್ನು ಪಡೆದು ಬಡಾವಣೆ ನಿರ್ಮಾಣಕ್ಕೆ ಪಾರದರ್ಶಕವಾಗಿ ಯಾವುದೇ ಟೆಂಡರ್ ಕರೆದಿರುವುದಿಲ್ಲ ಮತ್ತು ಗುತ್ತಿಗೆದಾರರು ಯಾರೆಂದು ತಿಳಿದಿರುವುದಿಲ್ಲ. ಈ ಕೆಲಸಕ್ಕೆ ಸಂಬಂಧಪಟ್ಟಂತೆ ಖರ್ಚು-ವೆಚ್ಚಗಳ ಬಗ್ಗೆ ಸದಸ್ಯರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಖರ್ಚು-ವೆಚ್ಚಗಳ ಬಗ್ಗೆ ಸರ್ವಸದಸ್ಯರ ಅಥವಾ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದಿಲ್ಲ.

13) ಕ್ಷೇಮಾಭಿವೃದ್ಧಿ ಸಂಘಕ್ಕೆ ಅಧ್ಯಕ್ಷರಾಗಿರುವ ಶ್ರೀ ಡಿ.ಎನ್. ಬೆಟ್ಟೇಗೌಡ ಯಾವ ಚುನಾವಣೆಯಲ್ಲಿ ಆಯ್ಕೆಯಾಗಿ ಅಧ್ಯಕ್ಷರಾಗಿದ್ದಾರೆಂಬ ಮಾಹಿತಿಯೂ ಇಲ್ಲಿಯವರೆವಿಗೂ ತಿಳಿದಿಲ್ಲ ಮತ್ತು ಸಂಘಕ್ಕೆ ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸಿಲ್ಲ, ಆಡಿಟ್ ವರದಿಗಳನ್ನು ಕಾಲಕಾಲಕ್ಕೆ ಒಪ್ಪಿಸಿಲ್ಲ. ಸದಸ್ಯರಿಗೆ ಯಾವುದೇ ಸಭೆಯ ನೋಟೀಸ್ ಮತ್ತು ಅಜೆಂಡಾವನ್ನು ಕಳುಹಿಸಿರುವುದಿಲ್ಲ.

ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಹೆಸರಿನಲ್ಲಿ ರಿಯಲ್ ಎಸ್ಟೇಟ್ ದಂಧೆಯನ್ನು ನಡೆಸುತ್ತಿದ್ದು, ಅಪಾರವಾದ ಹಣ ಗಳಿಕೆಯ ಕಾರ್ಯದಲ್ಲಿ ತೊಡಗಿದ್ದಾರೆ. ಈ ಅಸೋಸಿಯೇಷನ್ ವಿರುದ್ಧ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು, ಬಿಡಿಎ ಅಧಿಕಾರಿಗಳಿಗೆ ಅನೇಕ ದೂರು ಅರ್ಜಿಗಳನ್ನು ನೀಡಿದ್ದರೂ ಕಣ್ಣು ಮುಚ್ಚಿ ಕುಳಿತು, ದಂಧೆಗೆ ಸಹಕಾರ ನೀಡುತ್ತಿದ್ದರೆ. ಪ್ರಾಧಿಕಾರದ ಹಾಲಿ ಮತ್ತು ನಿವೃತ್ತ ನೌಕರರ ಬಗ್ಗೆ ಯಾರೂ ಆಸಕ್ತಿ ತೆಗೆದುಕೊಳ್ಳುತ್ತಿಲ್ಲ. ನಾನು ಈ ಸಂಘದ ವಿರುದ್ಧ ನನ್ನ ಸಾಮರ್ಥ್ಯ ಮೀರಿ ಹೋರಾಟ ನಡೆಸಿದ್ದು, ಜಿಲ್ಲಾ ಗ್ರಾಹಕರ ವೇದಿಕೆ, ರಾಜ್ಯ ಗ್ರಾಹಕರ ವೇದಿಕೆ ಸೇರಿದಂತೆ ಅನೇಕ ಕಡೆಗಳಲ್ಲಿ ದೂರು ಅರ್ಜಿ ಸಲ್ಲಿಸಿದರೂ ಬಿಡಿಎ ನಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಾಗಿದ್ದ ಮತ್ತು ಹಾಲಿ ಬಿಡಿಎ

ಕಾನೂನು ಅಧಿಕಾರಿಗಳಾಗಿರುವ ಶ್ರೀ.ಎಂ.ಎಸ್. ಶಂಕರ್‌ಭಟ್ ಇವರು ಪ್ರಭಾವ ಬೀರಿ ಶ್ರೀ.ಡಿ.ಎಸ್.ಚಿಕ್ಕೇಗೌಡರ ಅವ್ಯವಹಾರಗಳನ್ನು ಮುಚ್ಚಿಹಾಕಲು ಸಹಕಾರಿಯಾಗುತ್ತಿದ್ದರು. ಸಂಘದ ಅವ್ಯವಹಾರಗಳನ್ನು ಎಸಗಲು ಶ್ರೀ.ಎಂ.ಎಸ್. ಶಂಕರ್ ಭಟ್‌ರವರು ಪರೋಕ್ಷವಾಗಿ ಕಾರಣರಾಗಿದ್ದರೆಂದು ಘಂಟಾಘೋಷವಾಗಿ ಹೇಳಬಯಸುತ್ತೇನೆ. ಶ್ರೀ. ಶಂಕರ್‌ಭಟ್ ಇವರಿಗೆ ಕೇವಲ ಒಂದೇ ದಿನದಲ್ಲಿ ಸಂಘದ ಸದಸ್ಯತ್ವ ನಿವೇಶನ ಹಂಚಿಕೆ ಮಾಡಿ ನೋಂದಾಯಿಸಿ ಕೊಡುವುದಲ್ಲದೇ ಸ್ವಾಧೀನ ಪತ್ರವನ್ನು ನೀಡಿರುತ್ತಾರೆ ಮತ್ತು ರೀತಿ ನೋಂದಾಯಿಸಿಕೊಂಡ ನಿವೇಶನವನ್ನು ಶ್ರೀ. ಶಂಕರ ಭಟ್‌ರವರು ಒಂದೇ ವಾರದಲ್ಲಿ ಬೇರೆಯವರಿಗೆ ಹೆಚ್ಚಿನ ಹಣಕ್ಕೆ ಮಾರಾಟ ಮಾಡಿರುತ್ತಾರೆ.

ಆದ್ದರಿಂದ ಬಿ.ಡಿ.ಎ. ನೌಕರರ ಕ್ಷೇಮಾಭಿವೃದ್ಧಿ ಸಂಘವು ಸರ್ಕಾರಿ ನಿಯಮಗಳನ್ನು ಗಾಳಿಗೆ ತೂರಿ ಇಷ್ಟಬಂದಂತೆ ನಿವೇಶನಗಳನ್ನು ಹಂಚಿಕೆ ಮಾಡಿರುವುದು ದಾಖಲಾತಿಗಳಿಂದ ಕಂಡುಬರುತ್ತದೆ. ಈ ಸಂಘದಲ್ಲಿ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ ನಡೆದಿರುವುದು ಸ್ಪಟಿಕದಷ್ಟೇ ಸ್ಪಷ್ಟವಾಗಿರುತ್ತದೆ. ಇನ್ನೂ ಅನೇಕ ಸದಸ್ಯರು ನಿವೇಶನ ದೊರೆಯದೆ ಚಾತಕ_ಪಕ್ಷಿಗಳಂತೆ ಕಾಯುತ್ತಿದ್ದು, ಸಂಘದಿಂದ ವಂಚನೆಗೊಳಗಾಗಿರುತ್ತಾರೆ. ಆದರೆ ಸಂಘದವರು ಸಂಬಂಧಪಡದ ಯಾರ್‍ಯಾರಿಗೋ ನಿವೇಶನಗಳನ್ನು ಹೆಚ್ಚಿನ ಹಣಕ್ಕೆ ಮಾರಿಕೊಂಡು ಲೂಟಿ ಹೊಡೆಯುತ್ತಿದ್ದಾರೆ. ನ್ಯಾಯವಾಗಿ ನಿವೇಶನ ದೊರೆಯಬೇಕಾದವರಿಗೆ ನಿವೇಶನ ನೀಡದೇ ಕಾನೂನುಬಾಹಿರವಾಗಿ ಇತರರಿಗೆ ನಿವೇಶನ ಹಂಚಿಕೆ ಮಾಡಿ ಸದಸ್ಯರಿಗೆ ಮೋಸ ಮಾಡಿರುತ್ತಾರೆ. ಇವೆಲ್ಲ ಅವ್ಯವಹಾರಗಳು ಸಂಘದಲ್ಲಿ ನಡೆದಿರುವುದರಿಂದ ಅಸೋಸಿಯೇಷನ್ ಬಗ್ಗೆ ಸಮಗ್ರ ತನಿಖೆ ಕೈಗೊಂಡು, ಅಸೋಸಿಯೇಷನ್ ವಿರುದ್ಧ ಖಂಡಿತವಾಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸ್ವಮನಸ್ಸಿನಿಂದ ಯಾವ ಒತ್ತಾಯವೂ ಇಲ್ಲದೇ ಖುದ್ದು ನಾನೇ ಹೇಳಿಕೆಯನ್ನು ನೀಡುತ್ತಾ, ಲಿಖಿತ ಹೇಳಿಕೆಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಒದಗಿಸಲಾಗಿದೆ. (ಅನುಬಂಧ-9).

1) ಲಿಖಿತ ಹೇಳಿಕೆ ಪುಟ 1 ರಿಂದ 3
2) ಆಮಿಂದು ಮಂಜೂರಾತಿ ಪತ್ರ ಪುಟ 1, ದಿನಾಂಕ 12/01/2006
3) ಸರ್ಕಾರದ ಪತ್ರ ದಿನಾಂಕ 19/04/2006, ಪುಟ-1
4) ಕ್ರಯಪತ್ರ, ದಸ್ತಾವೇಜು ಸಂಖ್ಯೆ 2705/2014-15, ಒಟ್ಟು 5 ಪುಟಗಳು
5) ಕ್ರಯಪತ್ರ, ದಸ್ತಾವೇಜು ಸಂಖ್ಯೆ 2703/2014-15, ಒಟ್ಟು 5 ಪುಟಗಳು

6) ಕ್ರಯಪತ್ರ, ದಸ್ತಾವೇಜು ಸಂಖ್ಯೆ 831/2014-15, ಒಟ್ಟು 5 ಪುಟಗಳು
7) ಕ್ರಯಪತ್ರ, ದಸ್ತಾವೇಜು ಸಂಖ್ಯೆ 2699/2014-15, ಒಟ್ಟು 5 ಪುಟಗಳು
8) ಕ್ರಯಪತ್ರ, ದಸ್ತಾವೇಜು ಸಂಖ್ಯೆ 2701/2014-15, ಒಟ್ಟು 5 ಪುಟಗಳು
9) ಸ್ವಾಧೀನ ಪತ್ರ ನಿವೇಶನ ಸಂಖ್ಯೆ 12/ಬಿ, ಪುಟ-1
10) ಸ್ವಾಧೀನ ಪತ್ರ ನಿವೇಶನ ಸಂಖ್ಯೆ 13, ಪುಟ-1
11) ಸ್ವಾಧೀನ ಪತ್ರ ನಿವೇಶನ ಸಂಖ್ಯೆ 71, ಪುಟ-1
12) ಸ್ವಾಧೀನ ಪತ್ರ ನಿವೇಶನ ಸಂಖ್ಯೆ 76, ಪುಟ-1
13) ಸ್ವಾಧೀನ ಪತ್ರ ನಿವೇಶನ ಸಂಖ್ಯೆ 151, ಪುಟ-1
14) ಸ್ವಾಧೀನ ಪತ್ರ ನಿವೇಶನ ಸಂಖ್ಯೆ 152, ಪುಟ-1
15) ಸ್ವಾಧೀನ ಪತ್ರ ನಿವೇಶನ ಸಂಖ್ಯೆ 153, ಪುಟ-1
16) ಸ್ವಾಧೀನ ಪತ್ರ ನಿವೇಶನ ಸಂಖ್ಯೆ 263, ಪುಟ-1
17) ಮಾನ್ಯ ಆಯುಕ್ತರು ದಿನಾಂಕ: 17/06/2011 ರಂದು ಸಂಘದ ಅಧ್ಯಕ್ಷರಿಗೆ 3 ಎಕರೆ ಜಮೀನನ್ನು ಹಸ್ತಾಂತರಿಸಿರುವ ಪತ್ರ ಪುಟ-1
18) ದಿನಾಂಕ: 20/07/2006 ರಂದು ಮಾನ್ಯ ಕಾರ್ಯದರ್ಶಿ, ಬಿಡಿಎ, ರವರು ಸಂಘದ ಅಧ್ಯಕ್ಷರಿಗೆ ಬರೆದಿರುವ ಪತ್ರ, ಪುಟ-1
19) ಕರ್ನಾಟಕ ಸರ್ಕಾರದ ನಡವಳಿಕೆಗಳು ಪುಟ-2.

ಆರೋಪ-1ಕ್ಕೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಗಳ ವಿಶ್ಲೇಷಣೆ ಹಾಗೂ ಅಭಿಪ್ರಾಯ:-

ದೂರುದಾರರ ಮತ್ತು ಸಂಘದ ಅಧ್ಯಕ್ಷರ ಹೇಳಿಕೆ ಪ್ರತಿ ಹೇಳಿಕೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ್ದು ದೂರುದಾರರಾದ ಶ್ರೀ.ಡಿ.ಟಿ. ಕೃಷ್ಣೇಗೌಡ ಇವರು ನಿವೇಶನ ಹಂಚಿಕೆಗಾಗಿ ಸಂಘಕ್ಕೆ ಪಾವತಿಸಬೇಕಾಗಿದ್ದ ರೂ.1,50,000/- ಗಳನ್ನು ಕ್ರಮವಾಗಿ ರೂ.75,000/- ಗಳಂತೆ ಎರಡು ಕಂತುಗಳಲ್ಲಿ ದಿನಾಂಕ: 03/11/2006 ಮತ್ತು 19/12/2006 ರಂದು ಸಂಘದ ಪರವಾಗಿ ಎಸ್.ಬಿ.ಎಂ. ಬ್ಯಾಂಕ್‌ನಲ್ಲಿ ಡಿಡಿಯನ್ನು ಪಡೆದು ಪಾವತಿಸಿರುವುದು ಕಂಡು ಬಂದಿರುತ್ತದೆ. ಸದರಿ ಪಾವತಿ ಬಗ್ಗೆ ಸ್ವೀಕೃತಿ ಪತ್ರಗಳನ್ನು (ಅನುಬಂಧ-10) ಎಂದು ನಮೂದಿಸಿ ಈ ವರದಿಯೊಂದಿಗೆ ಲಗತ್ತಿಸಿದೆ.

ಈ ರೀತಿ ಸದರಿ ದೂರುದಾರರಾದ ಶ್ರೀ.ಡಿ.ಟಿ ಕೃಷ್ಣೇಗೌಡ ಇವರು ಇವರ ಹೆಸರಿನಲ್ಲಿ ನಿವೇಶನ ಪಡೆಯುವ ಸಲುವಾಗಿ ಹಣಪಾವತಿಸಿದಾಗ್ಯೂ ಇವರಿಗೆ ಸಂಘದ ವತಿಯಿಂದ ಯಾವುದೇ ನಿವೇಶನವನ್ನು ಹಂಚಿಕೆ ಮಾಡಿರುವುದಿಲ್ಲವೆಂದು ತಮ್ಮ ದೂರು ಅರ್ಜಿಯಲ್ಲಿ ಮಾಡಿರುವ

ಆರೋಪದಲ್ಲಿ ಯಾವುದೇ ಸತ್ಯಾಂಶ ಕಂಡುಬಂದಿರುವುದಿಲ್ಲ ಕಾರಣ. ಬೆಂಗಳೂ ಪ್ರಾಧಿಕಾರದವರು ಈ ಜಮೀನನ್ನು ಬಿಡಿಎ ಎಂಪ್ಲಾಯಿಸ್ ವೆಲ್‌ಫೇರ್ ಅಸ ರವರಿಗೆ ಹಸ್ತಾಂತರ ಮಾಡಿರುವ ಸಂದರ್ಭದಲ್ಲಿ ಸದರಿ ಜಮೀನಿನಲ್ಲಿ ವಿಂಗಡಿಸುವ / ಹಂಚಿಕೆ ಮಾಡುವಾಗ ಮುಖ್ಯವಾಗಿ 5 ಷರತ್ತುಗಳನ್ನು ವಿಧಿಸಿದ್ದು ಈ ಷರತ್ತುಗ ಷರತ್ತಿನಲ್ಲಿ ಈ ನಿವೇಶನಗಳನ್ನು ಹಾಲಿ ಸೇವೆಯಲ್ಲಿರುವ ಪ್ರಾಧಿಕಾರದ ಅ ನೌಕರರುಗಳಿಗೆ ಮಾತ್ರ ಹಂಚಿಕೆ ಮಾಡತಕ್ಕದೆಂದು ಸ್ಪಷ್ಟವಾಗಿ ನಮೂದಿಸಿರು ಬಂದಿರುತ್ತದೆ. (ಅನುಬಂಧ-11) ಆದೇಶದ ಪ್ರತಿಯನ್ನು ಲಗತ್ತಿಸಿದೆ.

ಆದ್ದರಿಂದ ಸದರಿ ದೂರುದಾರರಾದ ಶ್ರೀ.ಡಿ.ಟಿ.ಕೃಷ್ಣೇಗೌಡ ಇವರು ಹಾಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ/ನೌಕರರಾಗಿರುವುದಿಲ್ಲ ಇವರನ್ನು ಪ್ರಾಧಿಕಾರದಲ್ಲಿ ಗ ಮೇಲೆ ಕಾನೂನು ಅಧಿಕಾರಿ (Law-officer) ಎಂದು ನೇಮಕ ಮಾಡಿಕೊಂಡಿ ಬಂದಿರುತ್ತದೆ ಆದೇಶದ ಪ್ರತಿಯನ್ನು (ಅನುಬಂಧ-12). ಈ ವರದಿಯೊಂದಿಗೆ ಲಗತ್ತಿ

ಆದ ಕಾರಣ ಸದರಿ ದೂರುದಾರರು ಈ ಸಂಘದಲ್ಲಿ ನಿವೇಶನ ಪಡೆಯಲ ಪ್ರಕಾರ ಹಾಗೂ ಮಾನ್ಯ ಆಯುಕ್ತ ರವರ ಆದೇಶದ ಪ್ರಕಾರ ಅರ್ಹರಿರುವು ಅರ್ಜಿದಾರರು ದೂರು ಅರ್ಜಿಯಲ್ಲಿ ಮಾಡಿರುವ ಒಂದನೇ ಆರೋಪವು ಸಾಬೀತಾ

ಆರೋಪ-2ಕ್ಕೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಗಳ ವಿಶ್ಲೇಷಣೆ ಹಾಗೂ ಅಭಿಪ್ರಾ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಿಡಿಎ ಎಂಪ್ಲಾಯೀಸ್

ಪ್ರಯುಕ್ತ ಹಂಚಿಕೆ ನಿಯಮಾವಳಿಗಳನ್ನು ಸಡಿಲಿಸಿ ರಿಯಾಯಿತಿ ದರದಲ್ಲಿ ನಿವೇಶನಗಳನ್ನು ಹಂಚಿಕೆಮಾಡಲು ಅನುವು ಮಾಡಿಕೊಡುವಂತೆ ಹಾಗೂ ಪ್ರಾಧಿಕಾರದಿಂದ ನೌಕರರ ಕ್ಷೇಮಾಭಿವೃದ್ಧಿ ಸಂಘದ ಪರವಾಗಿ ಪ್ರಾಧಿಕಾರದ ಯಾವುದಾದರೂ ಬಡಾವಣೆಯಲ್ಲಿ ಸುಮಾರು 45 ಎಕರೆ ಜಮೀನನ್ನು ಹಂಚಿಕೆ ಮಾಡಲು ಕೋರಿದ್ದರ ಮೇರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.15 ರಲ್ಲಿನ 10 ಎಕರೆ 30 ಗುಂಟೆ ಸರ್ವೆ ನಂ.16ರಲ್ಲಿ 5 ಎಕರೆ 26 ಗುಂಟೆ ಮತ್ತು ಸರ್ವೆ ನಂ.17ರಲ್ಲಿ 23 ಎಕರೆ 29 ಗುಂಟೆ ಜಮೀನು ಒಟ್ಟು 40 ಎಕರೆ 05 ಗುಂಟೆ ಜಮೀನನ್ನು ಪ್ರಾಧಿಕಾರವು ಸ್ವಾಧೀನ ಪಡಿಸಿಕೊಂಡಿದ್ದು ಅದರಲ್ಲಿ ಸಗಟು ಹಂಚಿಕೆಗಾಗಿ ಲಭ್ಯವಿರುವ 33 ಎಕರೆ 02 ಗುಂಟೆ ಜಮೀನನ್ನು ಸಂಘದ ಪರವಾಗಿ ಕೆಲವು ಷರತ್ತುಗಳಿಗೆ ಒಳಪಡಿಸಿ ಸಂಘದ ಪರವಾಗಿ ಹಸ್ತಾಂತರಿಸಿರುವುದು ಕಂಡು ಬಂದಿರುತ್ತದೆ. ಈ ಷರತ್ತಿನ ಪ್ರಕಾರ ಈ ಜಮೀನಿನಲ್ಲಿ ರಚಿಸುವ ಬಡಾವಣೆಗಳಲ್ಲಿನ ನಿವೇಶನಗಳನ್ನು ಖಾಲಿ ಸೇವೆಯಲ್ಲಿರುವ ಪ್ರಾಧಿಕಾರದ ಅಧಿಕಾರಿ/ನೌಕರರುಗಳಿಗೆ ಮಾತ್ರ ಹಂಚತಕ್ಕದೆಂದು ಷರತ್ತಿಗೆ ಒಳಪಡಿಸಿರುತ್ತಾರೆ.

ಈ ಆದೇಶದಂತೆ ಬಿಡಿಎ ಎಂಪ್ಲಾಯೀಸ್ ಅಸೋಸಿಯೇಷನ್ ರವರು ಪೂರ್ಣ ನಲವತ್ತೈದು ಎಕರೆಗೂ ಹಣವನ್ನು ಸಂದಾಯ ಮಾಡಿದ್ದು ಜಮೀನು ಲಭ್ಯವಿಲ್ಲದ ಕಾರಣ ಹಂತ ಹಂತವಾಗಿ ನಾಲ್ಕು ಬಾರಿ ನೌಕರರ ಸಂಘಕ್ಕೆ ನಲವತ್ತೆರಡು (42) ಎಕರೆ ಜಮೀನನ್ನು ಹಸ್ತಾಂತರಿಸಿರುವುದು ದಾಖಲೆಗಳಿಂದ ಕಂಡು ಬಂದಿರುತ್ತದೆ.

ಈ ರೀತಿ ಹಸ್ತಾಂತರಿಸಿರುವ ಜಮೀನುಗಳ ಸ್ಥಿತಿ ಬಡಾವಣೆಗಳನ್ನು ರಚಿಸಿ ನಿವೇಶನಗಳನ್ನು ವಿಂಗಡಿಸಲಾಗಿದ್ದು ಸಂಘದ ಅಧ್ಯಕ್ಷರು ವಿಚಾರಣಾ ಸಮಯದಲ್ಲಿ ಒದಗಿಸಿರುವ ದಾಖಲೆಗಳ ಪ್ರಕಾರ ಸರ್ವೆ ನಂ.1/4 (ಪಿ) 7(1)(ಪಿ) 7/5(ಪಿ) 7/8(ಪಿ) ಮತ್ತು 7/9(ಪಿ)ರ ಒಟ್ಟು 15 ಎಕರೆ ಲಿಂಗದೀರನಹಳ್ಳಿ ಯಲ್ಲಿರುವ ಜಮೀನಿನಲ್ಲಿ ಈ ಕೆಳಗೆ ನಮೂದಿಸಿರುವ ವಿವಿಧ ಅಳತೆಯ ನಿವೇಶನಗಳನ್ನು ರಚಿಸಿರುತ್ತಾರೆ ಮಂಜೂರಾದ ನಕ್ಷೆ (ಅನುಬಂಧ-13). ಈ ವರದಿಯೊಂದಿಗೆ ಲಗತ್ತಿಸಿದೆ.

| | | |
|---|---|---|
| 1) | 9.14 ಮೀ X 12.19 ಮೀ ಅಳತೆಯ | 221 ನಿವೇಶನಗಳು |
| 2) | 9.14 ಮೀ X 10.06 ಮೀ ಅಳತೆಯ | 32 ನಿವೇಶನಗಳು |
| 3) | 9.14 ಮೀ X 9.14 ಮೀ ಅಳತೆಯ | 8 ನಿವೇಶನಗಳು |
| 4) | 6.14 ಮೀ X 9.14 ಮೀ ಅಳತೆಯ | 39 ನಿವೇಶನಗಳು |
| 5) | 9.14 ಮೀ X 6.10 ಮೀ ಅಳತೆಯ | 10 ನಿವೇಶನಗಳು |
| 6) | odd sizes | 11 ನಿವೇಶನಗಳು |
| | ಒಟ್ಟು | 321 ನಿವೇಶನಗಳು |

ಮತ್ತು ಸರ್ವೆ ನಂ.15(ಪಿ) 16(ಪಿ) 17(ಪಿ) ಮತ್ತು 19(ಪಿ) ದೊಡ್ಡಕಲ್ಲಸಂದ್ರ ಇಲ್ಲಿ ಒಟ್ಟು 60687.950 ಚ.ಮೀ ಅಳತೆಯ ವಿಸ್ತೀರ್ಣದಲ್ಲಿ ಈ ಕೆಳಕಂಡ ಅಳತೆಯ ನಿವೇಶನಗಳನ್ನು ವಿಂಗಡಿಸಲಾಗಿತ್ತು ಮಂಜೂರಾದ ಬಡಾವಣೆ ನಕ್ಷೆ (ಅನುಬಂಧ-14) ವರದಿಯೊಂದಿಗೆ ಲಗತ್ತಿಸಿದೆ.

| | | |
|---|---|---|
| 1) | 9.14 ಮೀ X 12.20 ಮೀ ಅಳತೆಯ | 421 ನಿವೇಶನಗಳು |
| 2) | 7.62 ಮೀ X 12.20 ಮೀ ಅಳತೆಯ | 26 ನಿವೇಶನಗಳು |
| 3) | 7.62 ಮೀ X 9.14 ಮೀ ಅಳತೆಯ | 07 ನಿವೇಶನಗಳು |
| 4) | odd sizes | 113 ನಿವೇಶನಗಳು |
| | ಒಟ್ಟು | 567 ನಿವೇಶನಗಳು |

ಈ ರೀತಿ ಲಿಂಗಧೀರನಹಳ್ಳಿ ಮತ್ತು ದೊಡ್ಡಕಲ್ಲಸಂದ್ರ ಈ ಎರಡೂ ಬಡಾವಣೆಗಳಲ್ಲಿ ಒಟ್ಟು 888 ನಿವೇಶನಗಳನ್ನು ವಿಂಗಡಿಸಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರವರು ಈ ಜಮೀನನ್ನು ಸದರಿ ಸಂಘಕ್ಕೆ ಹಸ್ತಾಂತರಿಸುವ ಸಂದರ್ಭದಲ್ಲಿ ವಿಧಿಸಿರುವ ಷರತ್ತಿನ ಪ್ರಕಾರ ಈ ನಿವೇಶನಗಳನ್ನು ಬಿಡಿಎ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ ಮತ್ತು ನೌಕರರುಗಳಿಗೆ ಮಾತ್ರ ಹಂಚಿಕೆ ಮಾಡುವ ಅವಕಾಶವಿರುತ್ತದೆ. ಆದರೆ ಈ ವಿಚಾರದಲ್ಲಿ ಸದರಿ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಚಿಕ್ಕೇಗೌಡ ಇವರು ವಿಚಾರಣಾ ಸಮಯದಲ್ಲಿ ಒಟ್ಟು 802 ಹಂಚಿಕೆದಾರರ ಪಟ್ಟಿಯನ್ನು ಒದಗಿಸಿರುತ್ತಾರೆ ತದನಂತರ ವಿಚಾರಣಾಧಿಕಾರಿಗಳ ಆದೇಶದಂತೆ ದಿನಾಂಕ 09/09/2015 ರಂದು ಮತ್ತೊಂದು ಪಟ್ಟಿಯನ್ನು ಅಂದರೆ ಪ್ರಸ್ತುತ ಪ್ರಾಧಿಕಾರದಲ್ಲಿ ಸೇವೆಯಲ್ಲಿರುವವರ 630 ಹಂಚಿಕೆದಾರರ/ಸದಸ್ಯರ

ಪಟ್ಟಿಯನ್ನು ಒದಗಿಸಿರುತ್ತಾರೆ. ( ಈ ಎರಡೂ ಪಟ್ಟಿಗಳನ್ನು ಅನುಬಂಧ-6 ರ ಕ್ರಮಸಂಖ್ಯೆ 7 ಮತ್ತು 8 ರಲ್ಲಿ ಲಗತ್ತಿಸಲಾಗಿದೆ.

ಸಂಘದ ಅಧ್ಯಕ್ಷರು ಒದಗಿಸಿರುವ ಹಂಚಿಕೆದಾರರ ಎರಡೂ ಪಟ್ಟಿಗಳನ್ನು ಪರಿಶೀಲಿಸಲಾಗಿ ಅಂದರೆ ಮೂಲ ಬಿಡಿಎ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಪಟ್ಟಿ ಹಾಗೂ ಎರವಲು ಸೇವೆಯಲ್ಲಿರುವ ಅಧಿಕಾರಿಗಳು/ಸಿಬ್ಬಂದಿಗಳನ್ನು ಸೇರಿಸಿ ನೀಡಿರುವ ಪಟ್ಟಿ ಈ ಎರಡೂ ಪಟ್ಟಿಗಳ ಪೈಕಿ ಮೂಲತಃ ಹಾಲಿ ಪ್ರಾಧಿಕಾರದ ಸೇವೆಯಲ್ಲಿರುವ ಒಟ್ಟು 616 ಸದಸ್ಯರುಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಿರುವುದು ಕಂಡುಬಂದಿರುತ್ತದೆ ಮತ್ತು ಎರವಲು ಸೇವೆಯಲ್ಲಿರುವವನ್ನು ಸೇರಿಸಿ ಒಟ್ಟು 802 ನಿವೇಶನಗಳನ್ನು ಹಂಚಿಕೆ ಮಾಡಿರುವುದು ಕಂಡುಬಂದಿರುತ್ತದೆ ಈ ರೀತಿ ಬಡಾವಣೆಯಲ್ಲಿ ರಚಿಸಿರುವ ಒಟ್ಟು 882 ನಿವೇಶನಗಳ ಪೈಕಿ ಉಳಿದ 86 ನಿವೇಶನಗಳು ಇತರ ಸಂಘದ ಸದಸ್ಯರಲ್ಲದವರಿಗೆ ಅಂದರೆ ಭೂಮಾಲೀಕರು ಶಿಫಾರಸ್ಸು ಮಾಡಿದ್ದ ಇತರ ಸಾರ್ವಜನಿಕರಿಗೆ ನೋಂದಣಿ ಮಾಡಿಕೊಟ್ಟಿರುವುದು ಕಂಡು ಬಂದಿರುತ್ತದೆ.

ಮುಂದುವರೆದಂತೆ ಸಂಘದ ಅಧ್ಯಕ್ಷರು ತಮ್ಮ ಲಿಖಿತ ಹೇಳಿಕೆಯಲ್ಲಿ ಬಡಾವಣೆ ನಿರ್ಮಾಣ ಮಾಡುವ ಸಂದರ್ಭದಲ್ಲಿ ಗ್ರಾಮಸ್ಥರು ಮತ್ತು ಸುತ್ತಮುತ್ತಲಿನ ಜನರು ಬಡಾವಣೆ ರಚನೆ ಮಾಡಲು ಅಡ್ಡಿಪಡಿಸಿದ್ದರಿಂದ ದಿನಾಂಕ: 30/09/2007 ರಂದು ಜರುಗಿದ ಸರ್ವ ಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನ ಕೈಗೊಳ್ಳಲಾದಂತೆ ಗ್ರಾಮಸ್ಥರಿಗೆ ಅವರು ಸೂಚಿಸಿದ ವ್ಯಕ್ತಿಗಳಿಗೆ ನಿವೇಶನ ಹಂಚಲು ಸಹಕಾರ ಸಂಘಗಳ ನಿಬಂಧಕರ ಆದೇಶದಂತೆ ಕ್ರಮ ಸಂಖ್ಯೆ 5 ಮತ್ತು 6 ರಂತೆ ಸಂಘದಿಂದ 150 ಅರ್ಜಿಗಳನ್ನು ವಿತರಿಸಲಾಯಿತು ಎಂದು ತಿಳಿಸಿರುತ್ತಾರೆ.

ಈ ಬಗ್ಗೆ ಕರ್ನಾಟಕ ಸರ್ಕಾರ ಸಹಕಾರ ಇಲಾಖೆ ನಿಬಂಧಕರವರ ಕಛೇರಿಯ ಆದೇಶ ಸಂಖ್ಯೆ ಹೆಚ್.ಎಸ್.ಬಿ1/184/ಹೆಚ್.ಹೆಚ್.ಎಸ್/2007-08 ದಿನಾಂಕ: 29/03/2008 ರ ಆದೇಶದಂತೆ ವರ್ಗೀಕರಿಸಿದಲ್ಲಿ ಕ್ರಮ ಸಂಖ್ಯೆ 2 ರಂತೆ

1) ಸಹಕಾರ ಸಂಘಗಳು ತನ್ನ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುವ ಮುನ್ನ ನೈಜ ಸದಸ್ಯರ ಜೇಷ್ಠತಾ ಪಟ್ಟಿ ಹಾಗೂ ನಿವೇಶನ ಬೇಡಿಕೆದಾರರ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಸಹಕಾರ ಸಂಘಗಳ ನಿಬಂಧಕರ ರವರಿಂದ ಕಡ್ಡಾಯವಾಗಿ ಅನುಮೋದನೆಯನ್ನು ಪಡೆಯತಕ್ಕದ್ದು ಎಂದು

2) ಜೇಷ್ಠತಾ ಪಟ್ಟಿಯ ಅನುಸಾರ ಸದಸ್ಯರಿಗೆ ನಿವೇಶನ ಹಂಚಿಕೆಯ ಹಂಗಾಮಿ ಹಂಚಿಕೆ ಪತ್ರವನ್ನು ಬಡಾವಣೆ ಕಾಮಗಾರಿ ಪೂರ್ಣಗೊಂಡ ನಂತರವೇ ನೀಡತಕ್ಕದ್ದು). ಬಡಾವಣೆ ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ನಿವೇಶನ ಹಂಚುವ ಕ್ರಮ ನಿಯಮಗಳ ಉಲ್ಲಂಘನೆಯ ಕ್ರಮವಾಗುವುದೆಂದು ಈ ಕ್ರಮ ಕಾಯ್ದೆಯಡಿ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಲಾಗುವುದು ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ. ಆದೇಶದ ಪ್ರತಿಯನ್ನು (ಅನುಬಂಧ-15) ಈ ವರದಿಯೊಂದಿಗೆ ಲಗತ್ತಿಸಿದೆ.

ಆದರೆ ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಈ ಸಂಘವು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರಡಿ ನೋಂದಣಿಯಾಗಿರುವುದು ಕಂಡುಬಂದಿಲ್ಲ ಆದರೆ ಇದು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರಡಿ ನೋಂದಾಯಿತ ಸಂಘವಾಗಿರುತ್ತದೆ. ಆದ್ದರಿಂದ ಈ ಸಂಘವು ಸಹಕಾರ ಸಂಘಗಳ ನಿಬಂಧಕರ ವ್ಯಾಪ್ತಿಯಲ್ಲಿ ಬರುವುದಿಲ್ಲವಾದ್ದರಿಂದ ಈ ಮೇಲಿನ ಸಹಕಾರ ಸಂಘಗಳ ನಿಬಂಧಕರ ಆದೇಶವು ಈ ಸಂಘಕ್ಕೆ ಅನ್ವಯವಾಗುವುದಿಲ್ಲ ಈ ಬಗ್ಗೆ ಸಹಕಾರ ಸಂಘಗಳ ನಿಬಂಧಕರವರು ಮತ್ತು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರಿಗೆ ಬರೆದಿರುವ ಪತ್ರದ ಪ್ರತಿಯನ್ನು (ಅನುಬಂಧ-16) ಲಗತ್ತಿಸಿದೆ.

ಸಂಘದ ಅಧ್ಯಕ್ಷರು ದಿನಾಂಕ 14/12/2006 ರಂದು ನೌಕರರ ಬಡಾವಣೆಯ ನಿರ್ಮಾಣದ ಪೂಜಾ ಕಾರ್ಯಕ್ರಮದ ಸಮಯದಲ್ಲಿ ಜಮೀನು ಮಾಲೀಕರೊಂದಿಗೆ ಮಾಡಿಕೊಂಡಿರುವ ಕರಾರು ಪತ್ರದ ಒಪ್ಪಂದದ ಪ್ರಕಾರ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.15(ಪಿ), ನಂ.17(ಪಿ) ರಲ್ಲಿನ

ಸುಮಾರು 33 ಎಕರೆ 02 ಗುಂಟೆ ಜಮೀನನ್ನು ಅಭಿವೃದ್ಧಿ ಪಡಿಸುವ ಸಂದರ್ಭದಲ್ಲಿ ಮಾಡಿಕೊಂಡಿರುವ ಕರಾರಿನಂತೆ 1 ಎಕರೆ ಜಮೀನಿಗೆ 1 ನಿವೇಶನವನ್ನು ಮಾಲೀಕರಿಗೆ ಅಥವಾ ಮಾಲೀಕರು ಸೂಚಿಸುವ ವ್ಯಕ್ತಿಗೆ ನೀಡಬೇಕೆಂದು ಕರಾರು ಮಾಡಿಕೊಂಡಿರುವುದು ಕಂಡುಬಂದಿರುತ್ತದೆ. ಕರಾರು ಪತ್ರದ ಪ್ರತಿಯನ್ನು (ಅನುಬಂಧ-17) ಈ ವರದಿಯೊಂದಿಗೆ ಲಗತ್ತಿಸಿದೆ.

ಅದರಂತೆ ಒಟ್ಟು ಸ್ವಾಧೀನಕ್ಕೆ ಪಡೆದಿರುವ 42 ಎಕರೆ ಜಮೀನಿಗೂ ಈ ಕರಾರು ಅನ್ವಯಿಸಿದಲ್ಲಿ ಕೇವಲ 42 ನಿವೇಶನಗಳನ್ನು ಮಾತ್ರ ಭೂ ಮಾಲೀಕರ ಪರವಾಗಿ ಸಂಘದ ವತಿಯಿಂದ ಮಾಡಿಕೊಂಡಿರುವ ಕರಾರಿನಂತೆ ಬೇರೆಯವರಿಗೆ ಅಥವಾ ಭೂ ಮಾಲೀಕರಿಗೆ ನೋಂದಣಿ ಮಾಡಿಕೊಡುವ ಅವಕಾಶವಿರುತ್ತದೆ ಆದರೆ ಸಂಘದ ಅಧ್ಯಕ್ಷರು ಒದಗಿಸಿರುವ ಮಾಹಿತಿಯಂತೆ ಭೂ ಮಾಲೀಕರ ಪರವಾಗಿ 150 ಅರ್ಜಿಗಳನ್ನು ವಿತರಿಸಲಾಗಿದ್ದು ಈ ವ್ಯಕ್ತಿ 86 ನಿವೇಶನಗಳನ್ನು ಸಂಘದ ಸದಸ್ಯರಲ್ಲದ ಬೇರೆಯವರಿಗೆ ನೋಂದಣಿ ಮಾಡಿಕೊಟ್ಟಿರುವುದು ಕಂಡುಬಂದಿರುತ್ತದೆ.

ಈ ವಿಚಾರದಲ್ಲಿ ಸಂಘದ ಅಧ್ಯಕ್ಷರು ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಮಾಡಿಕೊಂಡಿರುವ ಒಪ್ಪಂದದಂತೆ ಜಮೀನಿನಲ್ಲಿ ಹಾಕಿಕೊಂಡಿದ್ದ ಗುಡಿಸಲುಗಳನ್ನು ತೆರವು ಮಾಡಿಸುವ ಸಂದರ್ಭದಲ್ಲಿ ಈ ಎಲ್ಲಾ ಗುಡಿಸಲುಗಳ ಮಾಲೀಕರುಗಳಿಗೆ ನಿವೇಶನವನ್ನು ನೀಡುವುದಾಗಿ ಸರ್ವ ಸದಸ್ಯರ ಸಭೆಯಲ್ಲಿ ಒಪ್ಪಂದಕ್ಕೆ ಬರಲಾಗಿದ್ದು ಒಪ್ಪಂದದ ಪ್ರತಿಯನ್ನು ವಿಚಾರಣಾ ಸಮಯದಲ್ಲಿ ಒದಗಿಸಿರುತ್ತಾರೆ ಆದರೆ ಈ ಒಪ್ಪಂದದಲ್ಲಿ ನಿಖರವಾಗಿ ಇಂತಿಷ್ಟು ನಿವೇಶನಗಳು ಭೂ ಮಾಲೀಕರಿಗೆ ನೀಡಬೇಕೆಂಬ ಬಗ್ಗೆ ಸ್ಪಷ್ಟ ಮಾಹಿತಿ ಇರುವುದಿಲ್ಲ.

ಆದ್ದರಿಂದ ವಿಚಾರಣಾ ಸಂದರ್ಭದಲ್ಲಿ ದೊರೆತಿರುವ ದಾಖಲೆಗಳ ಪ್ರಕಾರ ಈ ಕೆಳಗೆ ನಮೂದಿಸಿರುವವರ ಸಂಘದ ಸದಸ್ಯರಲ್ಲದವರ ಹೆಸರಿನಲ್ಲಿ ಸಂಘದ ಅಧ್ಯಕ್ಷರು ನಿವೇಶನಗಳನ್ನು ನೋಂದಣಿ ಮಾಡಿಕೊಟ್ಟಿರುವುದು ಕಂಡುಬಂದಿರುತ್ತದೆ ಆದರೆ ಸಂಘದ ಅಧ್ಯಕ್ಷರು ನೀಡಿರುವ ಹಂಚಿಕೆದಾರರ ಪಟ್ಟಿಯಲ್ಲಿ ಇವರುಗಳ ಹೆಸರುಗಳು ನಮೂದಾಗಿರುವುದಿಲ್ಲ ಆದ್ದರಿಂದ ಇವರುಗಳು

ಮಾಲೀಕರೇ ಅಥವಾ ಮಾಲೀಕರ ಪರವಾಗಿ ಅವರ ಕಡೆಯಿಂದ ಶಿಫಾರಸ್ಸಿನಂತೆ ನಿವೇಶನಗಳನ್ನು ನೋಂದಣಿ ಮಾಡಿಕೊಡಲಾಗಿದೆಯೇ ಎಂಬುದಕ್ಕೆ ಯಾವುದೇ ದಾಖಲೆಗಳನ್ನು ಒದಗಿಸಿರುವುದಿಲ್ಲ. ಈ ರೀತಿ ಒಟ್ಟು 86 ನಿವೇಶನಗಳು ಸಂಘದ ಸದಸ್ಯರು ಅಂದರೆ ಹಾಲಿ ಸೇವೆಯಲ್ಲಿರುವ ಮತ್ತು ನಿಯೋಜನೆ ಮೇಲೆ ಕೆಲಸ ನಿರ್ವಹಿಸುತ್ತಿರುವ/ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತು ಪಡಿಸಿ ಬೇರೆಯವರಿಗೆ ನೋಂದಣಿಯಾಗಿರುವುದು ಕಂಡುಬಂದಿರುತ್ತದೆ. ಅದರಂತೆ ವಿಚಾರಣೆಯಲ್ಲಿ ದೊರೆತಿರುವ ಕೆಲವು ದಾಖಲಾತಿಗಳ ಆಧಾರದ ಮೇಲೆ ಈ ಕೆಳಕಂಡ ನಿವೇಶನಗಳು ಸಂಘದ ಸದಸ್ಯರನ್ನು ಹೊರತುಪಡಿಸಿ ಇತರರಿಗೆ ನೋಂದಣಿಯಾಗಿರುವುದು ಕಂಡುಬಂದಿರುತ್ತದೆ.

| ಕ್ರಮ ಸಂಖ್ಯೆ | ಹೆಸರುಗಳು | ನಿವೇಶನ ಸಂಖ್ಯೆ | ನೋಂದಣಿಯಾದ ದಸ್ತಾವೇಜು ಸಂಖ್ಯೆ | ಷರಾ:- |
|---|---|---|---|---|
| 01. | ನರಸಿಂಹಯ್ಯ ಮತ್ತು ಬಿ.ಎನ್.ರವೀಂದ್ರ | 88 | 316/2007-08 | |
| 02. | ಪದ್ಮ | 34 | 941/2010-11 | |
| 03. | ಎನ್.ಭಾಗ್ಯ | 33 | | |
| 04. | ಹೆಚ್.ಸಿ.ಲತಾ | 76 | 472/2009-10 | |
| 05. | ಬಿ.ರವಿ | 95 | 2262/08-09 | |
| 06. | ವೆಂಕಟರಾಮು ಮತ್ತು ಎಚ್.ಮಂಜುಳಾ | 125 | 2432/08-09 | |
| 07. | ಹೆಚ್.ಗಿರೀಶ್ | 127 | 695/08-09 | |
| 08. | ಪಿ.ಲಕ್ಷ್ಮೀಗೌಡ | 128 | 481/08-09 | |
| 09. | ಪಿ.ಶ್ರೇಯಸ್‌ರೆಡ್ಡಿ | 149 | 1048/09-10 | |
| 10. | ಬಿ.ಸತ್ಯನಾರಾಯಣ | 150 | 3107/10-11 | |
| 11. | ಪ್ರವೀಣ್ . ನಾಗರಾಜ ಅಂಕಣಕೋಟೆ | 151 | 2032/10-11 | |
| 12. | ಕೆ.ಎಂ.ಬಿ. ಚನ್ನಯ್ಯ | 152 | 1755/10-11 | |

72

134



| | | | | |
|---|---|---|---|---|
| 13. | ಎಂ.ಕೆ.ಬಸವರಾಜ್ ಮತ್ತು ಪಿ.ಎಸ್.ವಿದ್ಯಾಶ್ರೀ | 172 | 475/09-10 | |
| 14. | ದೀಪಕ್ ಕುಮಾರ್ | 178 | 480/08-09 | |
| 15. | ಯುವರಾಜ | 128 | 640/10-11 | |
| 16. | ರವಿಕುಮಾರ್.ಟಿ | 201 | 1840/10-11 | |
| 17. | ಪುಟ್ಟಮ್ಮ | 222 | 478/08-09 | |
| 18. | ಎನ್.ಮರಿಗೌಡ | 340 | 2636/08-09 | |
| 19. | ಶಿವನಂಜಯ್ಯ | 64 | 9791/2014-15 | |
| 20. | ಆರ್.ಸಾಗರ್ | 5/(ಪಿ-1) | 9792/2014-15 | |
| 21. | ಎಸ್.ಸಿ.ಬಸವರಾಜಯ್ಯ | 71 | 2948/08-09 | |
| 22. | ಸುನೀತಾ ಶರ್ಮ | 114 | 7377/11-12 | |
| 23. | ಸೋಮಶೇಖರಯ್ಯ | 141 | 1605/08-09 | |
| 24. | ಟಿ.ಆರ್.ರಮ್ಯ | 153 | 792/08-09 | |
| 25. | ಬಸವರಾಜು ಮತ್ತು ಜಯಮ್ಮ | 334/ಎ | 2701/14-15 | |
| 27. | ಮಂಜುನಾಥ ಮತ್ತು ಕೆ.ಸವಿತಾ | 300 | 2705/14-15 | |
| 28. | ಕೆ.ಆರ್.ಜಯದೇವಪ್ಪ ಮತ್ತು ಪಾರ್ವತಿ | 308 | 2703/14-15 | |
| 29. | ದೇವೇಗೌಡ | 223 | 831/14-15 | |
| 30. | ಲಕ್ಷ್ಮಮ್ಮ | 91 | 7061/10-11 | |
| 31. | ಸಿ.ಮೀನಾಕ್ಷಿ | 125 | 1071/09-10 | |
| 32. | ಸರೋಜಮ್ಮ ಮತ್ತು ಲಕ್ಷ್ಮಣ್‌ಗೌಡ | 165 | 582/08-09 | |
| 33. | ಬಿ.ಎಲ್.ಪುಟ್ಟಸ್ವಾಮಿ ಗೌಡ ಮತ್ತು ಸುಜಾತ | 169 | 1606/08-09 | |
| 34. | ಫಯಾಜ್ | 184 | 2384/08-09 | |
| 35. | ಟಿ.ಎಸ್.ಸತೀಶ್ | 186 | 5786/08-09 | |

| | | | | |
|---|---|---|---|---|
| 36. | ಲೋಗನಾಥನ್ ಮತ್ತು ಜಮುನ | 203 | 947/08-09 | |
| 37. | ಶಾಂತಮ್ಮ.ವಿ | 243 | 2386/08-09 | |
| 38. | ಆರ್.ವಿಜಯ | 335/ಬಿ. | 2367/08-09 | |
| 39. | ಸುಧಾ | 388 | | |

ಇವರುಗಳಿಗೆ ಸಂಬಂಧಿಸಿದಂತೆ ವಿಚಾರಣಾ ಕಾಲದಲ್ಲಿ ಲಭ್ಯವಿರುವ ಮಾಹಿತಿಯಂತೆ ಸ್ವಾಧೀನ ಪತ್ರಗಳ ಪ್ರತಿಗಳನ್ನು (ಅನುಬಂಧ-18) ಪುಟ 01 ರಿಂದ 47 ವರೆಗೆ ಈ ವರದಿಯೊಂದಿಗೆ ಲಗತ್ತಿಸಿದೆ.

ಮುಂದುವರೆದಂತೆ ವಿಚಾರಣಾ ಕಾಲದಲ್ಲಿ ತಿಳಿದು ಬಂದಂತೆ ಬಡಾವಣೆಗಳನ್ನು ರಚಿಸಿ ಒಟ್ಟು 888 ನಿವೇಶನಗಳ ಪೈಕಿ ಸಂಘದ ಅಧ್ಯಕ್ಷರು ಒದಗಿಸಿರುವ ದಾಖಲೆಗಳ ಪ್ರಕಾರ ಈ ಕೆಳಕಂಡಂತೆ ಹಂಚಿಕೆ ಮಾಡಿರುವುದು ಕಂಡು ಬಂದಿರುತ್ತದೆ.

| | | |
|---|---|---|
| 1) | ಹಾಲಿ ಸೇವೆ ಸಲ್ಲಿಸುತ್ತಿರುವ ಪ್ರಾಧಿಕಾರದ ನೌಕರರಿಗೆ ಹಾಗೂ ಅಧಿಕಾರಿಗಳಿಗೆ ಹಂಚಿಕೆ ಮಾಡಿರುವ ಒಟ್ಟು ನಿವೇಶನಗಳ ಸಂಖ್ಯೆ (ಸಂಘದ ಅಧ್ಯಕ್ಷರು ಒದಗಿಸಿರುವ ಪಟ್ಟಿಯಂತೆ | 616 |
| 2) | ನಿಯೋಜನೆ ಇತರ ಇಲಾಖೆ ಮತ್ತು ಗುತ್ತಿಗೆ ಆಧಾರಿತ ಅಧಿಕಾರಿ ಮತ್ತು ನೌಕರರಿಗೆ ಹಂಚಿಕೆ ಮಾಡಲಾದ ನಿವೇಶನಗಳ ಒಟ್ಟು ಸಂಖ್ಯೆ | 186 |
| 3) | ಬೇರೆಯವರಿಗೆ ಅಂದರೆ ಸಂಘದ ಸದಸ್ಯರಲ್ಲದ (ಇವರಿಗೆ ಭೂ ಮಾಲೀಕರ ಶಿಫಾರಸ್ಸಿನಂತೆ ದಾಖಲೆಗಳನ್ನು ಒದಗಿಸಿರುವುದಿಲ್ಲ) ಒಟ್ಟು | 86 |
| | ಒಟ್ಟು ನಿವೇಶನಗಳ ಸಂಖ್ಯೆ | 888 |

ದಿನಾಂಕ 30/09/2007 ರಂದು ನೌಕರರ ಸರ್ವ ಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನ ಕೈಗೊಳ್ಳಲಾದಂತೆ ಹಾಗೂ ಬಡಾವಣೆಯು ಸುಲಲಿತವಾಗಿ ನಡೆಯಬೇಕೆಂಬ ಸದುದ್ದೇಶದಿಂದ. ಸಭೆಯಲ್ಲಿದ್ದ ಎಲ್ಲಾ ಸದಸ್ಯರು ಗ್ರಾಮಸ್ಥರಿಗೆ ಅವರು ಸೂಚಿಸುವ ವ್ಯಕ್ತಿಗಳಿಗೆ ನಿವೇಶನ ಹಂಚಲು ತೀರ್ಮಾನಿಸಲಾಯಿತೆಂದು ಅಧ್ಯಕ್ಷರು ತಿಳಿಸಿದ್ದು ಈ ಬಗ್ಗೆ ಸಭೆಯ

ನಮಗಳಿಯನ್ನು ಬಿಟ್ಟರೆ ಬೇರೆ ಯಾವುದೇ ಸರ್ಕಾರಿ ಆದೇಶವಾಗಲೀ ಅಥವಾ ಪ್ರಾಧಿಕಾರದ ಆಯುಕ್ತರಿಂದಾಗಲೀ ಯಾವುದೇ ಲಿಖಿತ ಆದೇಶವಿರುವುದಿಲ್ಲ. ಹಾಗಾಗಿ ಈಗ ಹಾಲಿ ಸಂಘದ ಸದಸ್ಯರಲ್ಲದವರಿಗೆ ಹಂಚಿಕೆ ಮಾಡಿರುವ ಒಟ್ಟು 86 ನಿವೇಶನಗಳಿಗೆ ಸರ್ಕಾರದಿಂದ ಯಾವುದೇ ಲಿಖಿತ ಆದೇಶವಿರುವುದು ಕಂಡು ಬಂದಿರುವುದಿಲ್ಲ.

ಸಂಘದ ಅಧ್ಯಕ್ಷರು ದಿನಾಂಕ: 06/10/2006 ರಂದು ಸುತ್ತೋಲೆಯೊಂದನ್ನು ಹೊರಡಿಸಿದ್ದು ಅದರಲ್ಲಿನ ಸುತ್ತೋಲೆಯ ವಿಶೇಷ ಸೂಚನೆಯನ್ನು ಪರಿಗಣಿಸುವುದಾದರೆ

1) ಉದ್ದೇಶಿತ ಬಡಾವಣೆಯ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ಮತ್ತು ಅರ್ಜಿದಾರರು ನಿವೇಶನದ ಪೂರ್ಣ ಮೌಲ್ಯವನ್ನು ಪಾವತಿಸಿದ ನಂತರವಷ್ಟೇ ಲಾಟರಿಯ ಮೂಲಕ ಮೊದಲ ಹಂತದಲ್ಲಿ ಹಂಚುವ ನಿವೇಶನಗಳನ್ನು ನಿರ್ಧರಿಸಲಾಗುವುದೆಂದು ತಿಳಿಸಿರುತ್ತಾರೆ ಪ್ರತಿಯನ್ನು (ಅನುಬಂಧ-19) ಈ ವರದಿಯೊಂದಿಗೆ ಲಗತ್ತಿಸಿದೆ.

2) ಮಾನ್ಯ ಆಯುಕ್ತರವರ ಕಛೇರಿಯ ಟಿಪ್ಪಣಿ ಕಂಡಿಕೆ 277 ರಲ್ಲಿ Report Doesnot answer para 270. Also in employees, officials on deputation cannot be considered. ಎಂದು ಸ್ಪಷ್ಟವಾಗಿ ನಮೂದಿಸಿರುತ್ತಾರೆ. ಪ್ರತಿಯನ್ನು (ಅನುಬಂಧ-20) ಈ ವರದಿಯೊಂದಿಗೆ ಲಗತ್ತಿಸಿದೆ.

3) ದಿನಾಂಕ: 17/06/2011 ರಂದು ಮಾನ್ಯ ಆಯುಕ್ತರವರು ಲಭ್ಯವಿರುವ ಶ್ರೀಗಂಧದಕಾವಲಿನ ಸರ್ವೆ ನಂ.6(ಪಿ) ಮತ್ತು 7(ಪಿ) ಮೂರು ಎಕರೆ ಜಮೀನನ್ನು ಸಂಘಕ್ಕೆ ಹಸ್ತಾಂತರಿಸುವ ಸಂದರ್ಭದಲ್ಲಿಯೂ ಸಹ <u>ಇನ್ನು ಮುಂದೆ ಪ್ರಾಧಿಕಾರದ ನೌಕರರಲ್ಲದೇ ಎರವಲು ಸೇವೆಯ ನೌಕರರಿಗೆ ನಿವೇಶನಗಳನ್ನು ಹಂಚಿಕೆ ಮಾಡಬಾರದು ಎಂದು ಷರತ್ತನ್ನು ವಿಧಿಸಿರುವುದು ಕಂಡು ಬಂದಿರುತ್ತದೆ.</u> ಅಂದರೆ ಎರವಲು ಸೇವೆಯ ಮೇಲೆ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ಮತ್ತು ನೌಕರರು ಸದರಿ ಸಂಘದಲ್ಲಿ ನಿವೇಶನ ಪಡೆಯಲು ಅರ್ಹರಾಗಿರುವುದಿಲ್ಲವೆಂಬ ಅಂಶವು ಸ್ಪಷ್ಟವಾಗಿರುತ್ತದೆ ಪ್ರತಿಯನ್ನು (ಅನುಬಂಧ-21) ಲಗತ್ತಿಸಿದೆ.

4) ಮುಂದುವರೆದಂತೆ ಈ 3 ಎಕರೆ ಜಮೀನನ್ನು ಸಂಘಕ್ಕೆ ಹಸ್ತಾಂತರಿಸುವ, ಸಂಬಂಧ ಮಾನ್ಯ ಆಯುಕ್ತರ ಆದೇಶದಂತೆ ಇನ್ನು ಮುಂದೆ ಪ್ರಾಧಿಕಾರದ ನೌಕರರಲ್ಲದೆ ಎರವಲು ಸೇವೆಯ ನೌಕರರಿಗೆ ನಿವೇಶನಗಳನ್ನು ಹಂಚಿಕೆಮಾಡುವುದಿಲ್ಲವೆಂದು ಸಂಘದ ಅಧ್ಯಕ್ಷರಿಂದ ಒಪ್ಪಿಗೆ ಸೂಚಿಸಿರುವುದು ಕಂಡು ಬಂದಿರುತ್ತದೆ.

ಮುಂದುವರೆದಂತೆ ದೂರುದಾರರಾದ ಶ್ರೀ.ಡಿ.ಟಿ.ಕೃಷ್ಣೇಗೌಡ ಇವರು ಆಕ್ಷೇಪಿಸಿರುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾನೂನು ಅಧಿಕಾರಿಯಾಗಿ (Law Officer) ಹಾಲಿ ಕಾರ್ಯನಿರ್ವಹಿಸುತ್ತಿರುವ ಈ ಹಿಂದೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಾಗಿದ್ದ ಶ್ರೀ.ಎಂ.ಎಸ್.ಶಂಕರ್‌ಭಟ್ ಇವರಿಗೆ ಎಂ.ಕೆ.ಎಸ್. 1ನೇ ಹಂತದ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 76 ಅನ್ನು ಹಂಚಿಕೆ ಮಾಡಿರುವುದು ಕಂಡು ಬಂದಿರುತ್ತದೆ.

ಆದ್ದರಿಂದ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿದ್ದು ಸದರಿ ಸಂಘಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಜಮೀನು ಮಂಜೂರು ಮಾಡಿ ಸದರಿ ಜಮೀನುಗಳನ್ನು ಸಂಘಕ್ಕೆ ಹಸ್ತಾಂತರಿಸುವ ಪ್ರತಿ ಸಂದರ್ಭದಲ್ಲಿಯೂ ಸಹ ಈ ನಿವೇಶನಗಳನ್ನು ಹಾಲಿ ಸೇವೆಯಲ್ಲಿರುವ ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರುಗಳಿಗೆ ಹಂಚಿಕೆ ಮಾಡತಕ್ಕದ್ದು ಷರತ್ತನ್ನು ವಿಧಿಸಿದ್ದರೂ ಸಹ ಈ ಷರತ್ತನ್ನು ಉಲ್ಲಂಘಿಸಿ ಬೇರೆ ಬೇರೆ ಇಲಾಖೆಗಳಿಂದ ನಿಯೋಜನೆ ಮೇಲೆ ಪ್ರಾಧಿಕಾರದ ಸೇವೆಯಲ್ಲಿರುವ ಕಂದಾಯ ಇಲಾಖೆಯ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆಯಿಂದ ಪ್ರಾಧಿಕಾರದಲ್ಲಿ ನಿಯೋಜನೆ ಮೇಲೆ ಇರುವ ಇಂಜಿನಿಯರ್‌ಗಳು ಮತ್ತು ಸಿಬ್ಬಂದಿಗಳಿಗೆ ಪೊಲೀಸ್ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಬ್ಯಾಂಕ್ ಸಿಬ್ಬಂದಿಗಳಿಗೆ ಮತ್ತು ಹೊರ ಗುತ್ತಿಗೆ ಆಧಾರದ ಮೇಲೆ ಸೇವೆಯಲ್ಲಿರುವ ಅಧಿಕಾರಿಗಳಿಗೆ ಮತ್ತು ಮಾಲೀಕರ ಪರ ಇತರರಿಗೆ ಈ ಸಂಘದಿಂದ ನಿವೇಶನಗಳನ್ನು ನೋಂದಣಿ ಮಾಡಿಕೊಟ್ಟಿರುವುದು ಕಂಡುಬಂದಿರುವುದರಿಂದ ಸದರಿ ದೂರಿನಲ್ಲಿ ದೂರುದಾರರು ಮಾಡಿರುವ 2ನೇ ಆರೋಪವು ಸಾಬೀತಾಗಿರುತ್ತದೆ.

3ನೇ ಆರೋಪಕ್ಕೆ ವಿಚಾರಣಾಧಿಕಾರಿಗಳ ವಿಶ್ಲೇಷಣೆ ಹಾಗೂ ಅಭಿಪ್ರಾಯ:-

ಮೇಲೆ ವಿವರಿಸಿದಂತೆ ಸರ್ಕಾರವು ಅಸೋಸಿಯೇಷನ್‌ನ ಸದಸ್ಯರುಗಳ ಹಿತದೃಷ್ಟಿಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲಕ ಜಮೀನನ್ನು ಮಂಜೂರು ಮಾಡಿದ್ದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ನಿವೇಶನಗಳ ಹಂಚಿಕೆ) ನಿಯಮಾವಳಿ 1984 ರ ನಿಯಮಗಳಂತೆ ನಿವೇಶನ ಹಂಚಿಕೆಗಾಗಿ ಅರ್ಜಿ ಸಲ್ಲಿಸುವ ಅರ್ಜಿದಾರರ ಹೆಸರಿನಲ್ಲಿ ಪತ್ನಿ, ಅವಲಂಬಿತ ಮಕ್ಕಳು, ತಂದೆ, ತಾಯಿ ಇವರ ಹೆಸರಿನಲ್ಲಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಮನೆ ಅಥವಾ ನಿವೇಶನದ ಮಾಲೀಕತ್ವವನ್ನು ಹೊಂದಿದ್ದಲ್ಲಿ ಅಂತಹವರು ನಿವೇಶನ ಹಂಚಿಕೆಗೆ ಅರ್ಹರಾಗಿರುವುದಿಲ್ಲ. ಅಸೋಸಿಯೇಷನಿನ ಸದಸ್ಯನಲ್ಲದ ವ್ಯಕ್ತಿ ನಿವೇಶನ ಪಡೆಯಲು ಹಕ್ಕುಳ್ಳವನಾಗಿರುವುದಿಲ್ಲ. ಅಸೋಸಿಯೇಷನ್ ಕೂಡ ಈ ನಿಯಮಗಳನ್ನು ಉಲ್ಲಂಘಿಸಿ ನಿವೇಶನ ನೋಂದಣಿ ಮಾಡಿಕೊಟ್ಟಿದ್ದಲ್ಲಿ ಕಾನೂನಿನ ಅನ್ವಯ ಅಂತಹ ಹಂಚಿಕೆ ಕಾನೂನು ಬಾಹಿರ ಎಂದು ಪರಿಗಣಿಸಬೇಕಾಗುತ್ತದೆ.

ದೂರುದಾರರು ಆರೋಪಿಸಿರುವಂತೆ ಅಂದರೆ ಹಂಚಿಕೆಯಾಗಿರುವ ನಿವೇಶನದಾರರಲ್ಲಿ ಕೆಲವರಿಗೆ ಈಗಾಗಲೇ 2-3 ನಿವೇಶನಗಳು 2-3 ಮನೆಗಳು ಇದ್ದರೂ ಅಂತಹವರಿಗೆ ನಿವೇಶನ ಹಂಚಿಕೆಮಾಡಲಾಗಿದೆ ಎಂಬ ದೂರಿಗೆ ಸಂಬಂಧಿಸಿದಂತೆ ದೂರುದಾರರು ವಿಚಾರಣೆಯ ಸಮಯದಲ್ಲಿ ತಮ್ಮ ದೂರಿನಲ್ಲಿ ಮಾಡಿರುವ ಆರೋಪವನ್ನು ಸಾಬೀತು ಪಡಿಸಬಹುದಾದ ಯಾವುದೇ ಪೂರಕ ದಾಖಲೆಗಳನ್ನು ಒದಗಿಸಿಲ್ಲ. ಆದ್ದರಿಂದ ದೂರುದಾರರೂ ಮಾಡಿರುವ 3ನೇ ಆರೋಪವು ಸಾಬೀತಾಗಿರುವುದಿಲ್ಲವೆಂದು ಅಭಿಪ್ರಾಯ ಪಡಲಾಗಿದೆ.

Sd/- 30-9-2015
(ಜೆ.ಬಿ.ಶಿವನಂಜಯ್ಯ)
ವಿಚಾರಣಾಧಿಕಾರಿಗಳು,

True copy

[illegible] KY [illegible] Satish Kumar B. [illegible]

NOTARY, BANGALORE

ಮಾಹಿತಿ ಹಕ್ಕು ಅಧಿನಿಯಮ 2005 ರಿತ್ಯಾ ಪಡೆದು ನೀಡಿದೆ.

ಕರ್ನಾಟಕ ಸರಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ: ಉನೋಕ/ಹೆಘ/ಕಛೇರಿ/134/2015-16

ಹೆಸರಘಟ್ಟ ಉಪ ನೋಂದಣಿ ಕಛೇರಿ,
ಹೆಚ್.ಸಿ.ಪುಟ್ಟಸ್ವಾಮಿ ಬಡಾವಣೆ,
ನಾಡ ಕಛೇರಿ ಹತ್ತಿರ, ಹೆಸರಘಟ್ಟ,
ಬೆಂಗಳೂರು – 560 088.
ದಿನಾಂಕ: 22-11-2015

ರವರಿಗೆ,
ಮಾನ್ಯ ಜಿಲ್ಲಾ ನೋಂದಣಾಧಿಕಾರಿಗಳು,
ಗಾಂಧಿನಗರ ನೋಂದಣಿ ಜಿಲ್ಲೆ,
2ನೇ ಮುಖ್ಯ ರಸ್ತೆ, ವೈಯಾಲಿಕಾವಲ್ ಎಕ್ಸ್‌ಟೆನ್ಷನ್,
ಬೆಂಗಳೂರು 560 003.

ಮಾನ್ಯರೆ,

ವಿಷಯ:- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ವಿರುದ್ಧದ ದೂರು ಕುರಿತು ವಿಚಾರಣೆ ನಡೆಸುವ ಬಗ್ಗೆ.

ಉಲ್ಲೇಖ:- ತಮ್ಮ ಕಛೇರಿಯ ಆದೇಶ ಸಂಖ್ಯೆ ಸಂ.ನೋ.ಅ/ಗಾ.ನೋ.ಜಿ/698/2015/16 ದಿನಾಂಕ: 14-8-2015 ಮತ್ತು ದಿನಾಂಕ: 20-8-2015.

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಆದೇಶಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ರವರು ನಿವೇಶನಗಳನ್ನು ಹಂಚಿಕೆ ಮಾಡಿರುವ ಬಗ್ಗೆ ನೀಡಿರುವ ದೂರು ಕುರಿತು ವಿಚಾರಣೆ ನಡೆಸಲು ಆದೇಶಿಸಿದ ಮೇರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್‌ನ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಯವರಿಗೆ ಹಾಗೂ ದೂರುದಾರರಾದ ಶ್ರೀ.ಹೆಚ್.ವಿ.ಕೃಷ್ಣಪ್ಪ ಮತ್ತು ಇತರರಿಗೆ ನೋಟೀಸ್ ನೀಡಿ ವಿಚಾರಣೆ ನಡೆಸಿ ಅವರಿಂದ ಪಡೆದ ಹೇಳಿಕೆ/ವಿವರಣೆಯ ವರದಿಯನ್ನು ಹಾಗೂ ಸದರಿಯವರು ಸಲ್ಲಿಸಿದ ದಾಖಲೆ ಪತ್ರಗಳ ಪ್ರತಿಗಳನ್ನು (ಅನುಬಂಧ 'ಅ', 'ಬ' ಮತ್ತು 1 ರಿಂದ 10) ಈ ಪತ್ರದೊಂದಿಗೆ ಲಗತ್ತಿಸಿ ಗೌರವಪೂರ್ವಕವಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಹಿರಿಯ ಉಪ ನೋಂದಣಾಧಿಕಾರಿ,
ಹಿರಿಯ ಉಪನೋಂದಣಾಧಿಕಾರಿಗಳು,
ಹೆಸರಘಟ್ಟ, ಬೆಂಗಳೂರು

ಮಾಹಿತಿ ಹಕ್ಕು ಅಧಿನಿಯಮ 2005 ರೀತ್ಯಾ ನಕಲು ನೀಡಿದೆ



ದಿನಾಂಕ:04-09-2006 ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರ ಪತ್ರ ಸಂಖ್ಯೆ:ಬೆಂಅಪ್ರಾ/ಉಕಾ-1/T435/2006-07 ರ ಷರತ್ತು (5) ರಲ್ಲಿ 'ನಿವೇಶನಗಳನ್ನು ಹಾಲಿ ಸೇವೆಯಲ್ಲಿರುವ ಪ್ರಾಧಿಕಾರದ ಅಧಿಕಾರಿ ಮತ್ತು ನೌಕರರಿಗೆ ಮಾತ್ರ ಹಂಚಿಕೆ ಮಾಡತಕ್ಕದ್ದು' ಎಂಬುದಾಗಿ ಷರತ್ತು ವಿಧಿಸಿದ್ದರಿಂದ ನಿವೃತ್ತಿ ನೌಕರರಿಗೆ ನಿವೇಶನ ಹಂಚಿಕೆ ಮಾಡಲಾಗಿರುವುದಿಲ್ಲ ಎಂದು ತಿಳಿಸಿದ್ದು ದಿನಾಂಕ:04-09-2006 ರ ಪತ್ರದ ಪ್ರತಿ ಹಾಜರುಪಡಿಸಿರುತ್ತಾರೆ.

ದಿನಾಂಕ:14-12-2006 ರಂದು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಮತ್ತು ಬಡಾವಣೆ ನಿರ್ಮಾಣಕ್ಕೆ ಜಮೀನು ನೀಡಿದ ರೈತರ ಮಧ್ಯೆ ಆದ ಕರಾರು ಒಪ್ಪಂದ ಪತ್ರ ಹಾಗು ದಿನಾಂಕ:30-09-2007 ರಂದು ನಡೆದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ ತೀರ್ಮಾನಿಸಿದಂತೆ (ವಿಷಯ 3) ಸದರಿ ಬಡಾವಣೆ ನಿರ್ಮಾಣಕ್ಕೆ ಜಮೀನು ನೀಡಿದ ರೈತರು/ರೈತರು ಸೂಚಿಸಿದವರಿಗೆ 97 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ.ನಿವೇಶನ ಹಂಚಿಕೆ ಮಾಡುವ ಬಗ್ಗೆ ಸಂಘದ ಕಾರ್ಯಕಾರಿ ಮಂಡಳಿ ಸಭೆಗಳಲ್ಲಿ ಚರ್ಚೆ ನಡೆದಿರುವುದಿಲ್ಲ.

ದಿನಾಂಕ: 17-06-2011 ರ ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಬೆಂಅಪ್ರಾ/ಆಯು/T93/2011-12 ರಲ್ಲಿ 'ಇನ್ನು ಮುಂದೆ ಪ್ರಾಧಿಕಾರದ ನೌಕರರಲ್ಲದೆ ಎರವಲು ಸೇವೆಯ ನೌಕರರಿಗೆ ನಿವೇಶನಗಳನ್ನು ಹಂಚಿಕೆ ಮಾಡಬಾರದು' ಎಂದು ಷರತ್ತು ವಿಧಿಸಿರುವುದರಿಂದ ಎರವಲು ಸೇವಯ ನೌಕರರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದಿಲ್ಲ ಎಂಬುದಾಗಿ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಹಾಗೂ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ.ಮಲ್ಲಣ್ಣ ಇವರು ವಿಚಾರಣೆ ವೇಳೆಯಲ್ಲಿ ಹೇಳಿಕೆ/ವಿವರಣೆ ನೀಡಿರುತ್ತಾರೆ.

ಮಾಹಿತಿ ಹಕ್ಕು ಅಧಿನಿಯಮ 2005 ರೀತ್ಯಾ ನಕಲು ನೀಡಿದೆ.

123

65

64

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ವಿರುದ್ಧ ಶ್ರೀ ಹೆಚ್.ವಿ.ಕೃಷ್ಣಪ್ಪ ಮತ್ತು ಇತರರು ನೀಡಿರುವ ದೂರು ಕುರಿತು ದೂರುದಾರರಾದ ಶ್ರೀ ಹೆಚ್.ವಿ.ಕೃಷ್ಣಪ್ಪ ಮತ್ತು ಇತರರು (ಶ್ರೀ.ಹೆಚ್.ವಿ.ಕೃಷ್ಣಪ್ಪ ಶ್ರೀ.ಬಿ.ಎಂ.ಚಿಕ್ಕಯ್ಯ, ಶ್ರೀ ಬಿ.ವಿ.ಗುರುರಾಜ, ಶ್ರೀ ಎನ್.ಮುನಿರಾಜು, ಶ್ರೀ ಎಂ.ರಂಗಶಾಮಯ್ಯ, ಶ್ರೀ ಪಿ.ಮುನಿತಿಮ್ಮಯ್ಯ, ಶ್ರೀ ಡಿ.ಎಲ್.ಪಾಂಡುರಂಗ ರಾವ್ ಮತ್ತು ಶ್ರೀ ಜಿ.ಚಿನ್ನಪ್ಪ) ಹೆಸರಘಟ್ಟ ಉಪನೋಂದಣಿ ಕಛೇರಿಯಲ್ಲಿ ದಿನಾಂಕ:20-11-2015 ರಂದು ವಿಚಾರಣೆಗೆ ಹಾಜರಾಗಿ ಈ ಕೆಳಕಂಡಂತೆ ಹೇಳಿಕೆ/ವಿವರಣೆ ನೀಡಿರುತ್ತಾರೆ. (ಲಿಖಿತ ಹೇಳಿಕೆ ಮತ್ತು ಹೇಳಿಕೆಯೊಂದಿಗೆ ಸಲ್ಲಿಸಿದ ಧಾಖಲಾತಿಗಳನ್ನು ಅನುಬಂಧ 'ಬ' ನಲ್ಲಿ ಲಗತ್ತಿಸಿದೆ 15+151)

ಬಿ.ಡಿ.ಎ ನೌಕರರಲ್ಲದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಎರವಲು ಸೇವೆಯ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಇತರೆ ಇಲಾಖೆಯ ನೌಕರರು ಹಾಗೂ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದು ಈ ರೀತಿ ಹಂಚಿಕೆ ಮಾಡಲು ಸರ್ಕಾರದಿಂದ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ:ಬೆಂಅಪ್ರಾ/ಉಕಾ-1/T435/2006-07, ದಿನಾಂಕ:04-09-2006 ರನ್ವಯ ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಸಂಘಕ್ಕೆ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.15,16 ಮತ್ತು 17 ರಲ್ಲಿ 33 ಎಕರೆ 2 ಗುಂಟೆ ಜಮೀನನ್ನು ಹಂಚಿಕೆ ಮಾಡುವಾಗ ಕ್ರ.ಸಂ.5 ರಲ್ಲಿ ಕೆಳಕಂಡಂತೆ ಷರತ್ತನ್ನು ವಿಧಿಸಲಾಗಿರುತ್ತದೆ. 'ನಿವೇಶನಗಳನ್ನು ಹಾಲಿ ಸೇವೆಯಲ್ಲಿರುವ ಪ್ರಾಧಿಕಾರದ ಅಧಿಕಾರಿ ಮತ್ತು ನೌಕರರಿಗೆ ಮಾತ್ರ ಹಂಚಿಕೆ ಮಾಡತಕ್ಕದ್ದು'. ಅದರಂತೆ ಅಂದು ಸೇವೆಯಲ್ಲಿದ್ದಂತಹ ನೌಕರರಿಗೆ ಸಂಘದ ಸದಸ್ಯತ್ವ ನೀಡಿ ನಿವೇಶನ ಹಂಚಿಕೆ ಮಾಡಲು ಹಣ ಪಾವತಿಸಿಕೊಂಡು ತದನಂತರ ನಿವೇಶನ ಹಂಚಿಕೆ ಮಾಡುವ ವೇಳೆಯಲ್ಲಿ ನಿವೃತ್ತರಾಗಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರಿಗೆ ನಿವೇಶನಗಳನ್ನು ನೀಡಿರುವುದಿಲ್ಲ. ನಿವೃತ್ತಿ ಹೊಂದಿದ ನೌಕರರಿಗೂ ಸಹ ನಿವೇಶನ ಹಂಚಿಕೆಗೆ ಹಣ ಪಾವತಿಸಿಕೊಂಡು ನಿವೇಶನ ಹಂಚಿಕೆ ಮಾಡಿರುವುದಿಲ್ಲ.

ದಿನಾಂಕ:14-12-2006 ರಂದು ಬಡಾವಣೆ ನಿರ್ಮಾಣದ ಪೂಜಾ ಕಾರ್ಯಕ್ರಮದ ಸಮಯದಲ್ಲಿ ದೊಡ್ಡಕಲ್ಲಸಂದ್ರ ಗ್ರಾಮದ ಜನರೊಡನೆ ಕರಾರು ಒಪ್ಪಂದ ಮಾಡಿಕೊಂಡಿದ್ದು

(105)

ಈ ಜನರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಬಿ.ಡಿ.ಎ/ಸರ್ಕಾರದಿಂದ ಅನುಮೋದನೆ/ಅನುಮತಿ ಪಡೆದಿರುವುದಿಲ್ಲ. ಎಂಬುದಾಗಿ ದೂರುದಾರರಾದ ಶ್ರೀ ಹೆಚ್.ವಿ.ಕೃಷ್ಣಪ್ಪ ಮತ್ತು ಇತರರು (ಶ್ರೀ.ಹೆಚ್.ವಿ.ಕೃಷ್ಣಪ್ಪ ಶ್ರೀ.ಬಿ.ಎಂ.ಚಿಕ್ಕಯ್ಯ ಶ್ರೀ ಬಿ.ವಿ.ಗುರುರಾಜ, ಶ್ರೀ ಎನ್.ಮುನಿರಾಜು, ಶ್ರೀ ಎಂ.ರಂಗಶಾಮಯ್ಯ ಶ್ರೀ ಪಿ.ಮುನಿತಿಮ್ಮಯ್ಯ ಶ್ರೀ ಡಿ.ಎಲ್.ಪಾಂಡುರಂಗ ರಾವ್ ಮತ್ತು ಶ್ರೀ ಜಿ.ಚೆನ್ನಪ್ಪ) ವಿಚಾರಣೆ ವೇಳೆಯಲ್ಲಿ ಹೇಳಿಕೆ ನೀಡಿರುತ್ತಾರೆ.

## ವಿಚಾರಣೆಯಲ್ಲಿ ಗಮನಿಸಿದ ಅಂಶಗಳು (Observations):-

ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ನ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಹಾಗೂ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ.ಮಲ್ಲಣ್ಣ ಇವರು ಹಾಗೂ ದೂರುದಾರರಾದ ಶ್ರೀ ಹೆಚ್.ವಿ.ಕೃಷ್ಣಪ್ಪ ಮತ್ತು ಇತರರು ವಿಚಾರಣೆ ವೇಳೆ, ಸದರಿ ಅಸ್ಸೋಸಿಯೇಷನ್ ನಿಂದ ನಿವೇಶನಗಳನ್ನು ಹಂಚಿಕೆ ಮಾಡಿರುವ ಬಗ್ಗೆ ಹಾಜರುಪಡಿಸಿದ ದಾಖಲೆ ಪ್ರತಿಗಳನ್ನು ಹಾಗೂ ಅವರು ನೀಡಿದ ಹೇಳಿಕೆ/ವಿವರಣೆಯನ್ನು ಅವಲೋಕಿಸಿದಾಗ ನಿವೇಶನಗಳ ಹಂಚಿಕೆ ಬಗ್ಗೆ ಈ ಕೆಳಕಂಡ ಅಂಶಗಳನ್ನು ಗಮನಿಸಲಾಯಿತು.

I. ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ನ Memorandum of Association ನ RULES AND REGULATIONS ಕ್ರ.ಸಂ.I ರಲ್ಲಿ ಸದಸ್ಯತ್ವದ ಬಗ್ಗೆ 'MEMBERSHIP: The Membership of the Association is confined to BDA officials & Employees' ಎಂಬುದಾಗಿ ಇದ್ದು, ( ಪ್ರತಿ ಲಗತ್ತಿಸಿದೆ, ಅನುಬಂಧ –I) BDA officials & Employees ಪದವು ಹಾಲಿ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ/ನೌಕರನ್ನು ಮಾತ್ರ ಒಳಗೊಳ್ಳುತ್ತದೆಯೇ ಅಥವಾ ನಿವೃತ್ತಿ ಹೊಂದಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ/ನೌಕರರು ಅಥವಾ/ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಎರವಲು ಸೇವೆಯಲ್ಲಿರುವ (On Deputation) ಅನ್ಯ ಇಲಾಖೆಯ ನೌಕರರನ್ನೂ ಒಳಗೊಳ್ಳುತ್ತದೆಯೇ ಎಂಬುದನ್ನು ಪ್ರತ್ಯೇಕವಾಗಿ (Explicitly) ನಮೂದಿಸಿರುವುದಿಲ್ಲವಾದರೂ ಸಾಮಾನ್ಯವಾಗಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ/ನೌಕರನ್ನು ಮಾತ್ರ ಒಳಗೊಳ್ಳುತ್ತದೆ ಎಂದು ಅರ್ಥೈಸಿಕೊಳ್ಳಬಹುದಾಗಿರುತ್ತದೆ. ಹೀಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಎರವಲು ಸೇವೆಯಲ್ಲಿರುವ (On Deputation) ಅನ್ಯ ಇಲಾಖೆಯ

124

63 06

ನೌಕರರು ಸದರೀ ಸಂಘದ ಸದಸ್ಯತ್ವ ಪಡೆಯಲು Memorandum of Association ನಲ್ಲಿ ಅವಕಾಶ ಇರುವುದು ಕಂಡುಬಂದಿರುವುದಿಲ್ಲ.

ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಅನುಮೋದಿಸಿರುವ Amendement of Memorandum of Association (ದಿನಾಂಕ ನಮೂದಾಗಿರುವುದಿಲ್ಲ) ಮೂಲಕ Memorandum of Association ನ AIMS AND OBJECTIVES ಗೆ J,K,L ಮತ್ತು M ಕಂಡಿಕೆಗಳನ್ನು ಸೇರ್ಪಡೆ ಮಾಡಿಕೊಂಡಿದ್ದು ಈ ಪೈಕಿ L ಮತ್ತು M ಕಂಡಿಕೆಗಳು ವಸತಿ ನಿವೇಶನಗಳ ಕುರಿತಾಗಿದ್ದು ಈ ಕೆಳಕಂಡಂತಿರುತ್ತವೆ. (ಪ್ರತಿ ಲಗತ್ತಿಸಿದೆ, ಅನುಬಂಧ – 2)

'L) Assist and help members in acquiring residencial premises sites from any government authority and private agency for their welfare of association members.

M) To assist and help the members for getting any Civic amenities, civil rights in respect of their residential properties from any Government Authorities, corporation Board are any statutory bodies.'

ಅದರಂತೆ ಸಂಘದ ಸದಸ್ಯರಿಗೆ ವಸತಿ ನಿವೇಶನ ಹೊಂದಲು/ವಸತಿ ನಿವೇಶನಗಳಿಗೆ ಮೂಲಭೂತ ಸೌಕರ್ಯಗಳನ್ನು ಪಡೆಯಲು ಸಂಘದಿಂದ ಸಹಾಯ/ಸಹಕಾರ ನೀಡಬಹುದಾಗಿರುತ್ತದೆ.

2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪತ್ರ ಸಂಖ್ಯೆ:ಬೆಂಅಪ್ರಾ/ಉಕಾ–I/T435/2006–07, ದಿನಾಂಕ: 4–9–06 ರ ಮೂಲಕ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ. 15, 16 ಮತ್ತು ಸರ್ವೆ ನಂ. 17ರಲ್ಲಿ ಒಟ್ಟು 33 ಎಕರೆ 02 ಗುಂಟೆ ಜಮೀನನ್ನು ಕೆಲವು ಷರತ್ತುಗಳೊಂದಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘಕ್ಕೆ ಸಗಟು ಹಂಚಿಕೆ ಮಾಡಲಾಗಿರುತ್ತದೆ.
(ಪ್ರತಿ ಲಗತ್ತಿಸಿದೆ, ಅನುಬಂಧ – 3)

ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪತ್ರ ಸಂಖ್ಯೆ:ಬೆಂಅಪ್ರಾ/ಉಕಾ–1/424/2007–08, ದಿನಾಂಕ: 8–6–07 ರ ಮೂಲಕ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂ. 6/p ರಲ್ಲಿ ಒಟ್ಟು 7ಎಕರೆ

ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘಕ್ಕೆ ಕೆಲವು ಷರತ್ತುಗಳೊಂದಿಗೆ ಸಗಟು ಹಂಚಿಕೆ ಮಾಡಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ, ಅನುಬಂಧ – 4) ಮೇಲೆ ತಿಳಿಸಿದ ಎರಡೂ ಸಂದರ್ಭಗಳಲ್ಲಿ ವಿದಿಸಿದ ಷರತ್ತುಗಳಲ್ಲಿ 'ನಿವೇಶನಗಳನ್ನು ಹಾಲಿ ಸೇವೆಯಲ್ಲಿರುವ ಪ್ರಾಧಿಕಾರದ ಅಧಿಕಾರಿ ಮತ್ತು ನೌಕರರಿಗೆ ಮಾತ್ರ ಹಂಚಿಕೆ ಮಾಡತಕ್ಕದ್ದು' ಎಂಬುದಾಗಿ ಷರತ್ತನ್ನು (ಕ್ರಮ ಸಂಖ್ಯೆ: 5) ವಿದಿಸಿರುವುದು ಕಂಡುಬಂದಿರುತ್ತದೆ. ಹಾಲಿ ಸೇವೆಯಲ್ಲಿರುವ ಪ್ರಾಧಿಕಾರದ ಅಧಿಕಾರಿ ಮತ್ತು ನೌಕರರು ಎಂಬುದು ಹಾಲಿ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ/ನೌಕರನ್ನು ಮಾತ್ರ ಒಳಗೊಳ್ಳುತ್ತದೆಯಲ್ಲದೆ ನಿವೃತ್ತಿ ಹೊಂದಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ/ನೌಕರರು ಅಥವಾ/ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಎರವಲು ಸೇವೆಯಲ್ಲಿರುವ (On Deputation) ಅನ್ಯ ಇಲಾಖೆಯ ನೌಕರರನ್ನು ಒಳಗೊಳ್ಳುತ್ತದೆಯೆಂದು ತಿಳಿದುಬಂದಿರುವುದಿಲ್ಲ.

ಅಂದು ಸೇವೆಯಲ್ಲಿದ್ದಂತಹ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರಿಗೆ ಸಂಘದ ಸದಸ್ಯತ್ವ ನೀಡಿ ನಿವೇಶನ ಹಂಚಿಕೆ ಮಾಡಲು ಮುಂಗಡ ಕಂತಿನ ಹಣ ಪಾವತಿಸಿಕೊಂಡು ತದನಂತರ ನಿವೇಶನ ಹಂಚಿಕೆ ಮಾಡುವ ಸಮಯದಲ್ಲಿ ನಿವೃತ್ತರಾಗಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಈ ನೌಕರರಿಗೆ ನಿವೇಶನಗಳನ್ನು ನೀಡಿರುವುದಿಲ್ಲ ಹಾಗೂ ನಿವೃತ್ತಿ ಹೊಂದಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರಿಂದಲೂ ಸಹ ನಿವೇಶನ ಹಂಚಿಕೆ ಮಾಡವುದಾಗಿ ಮುಂಗಡ ಕಂತಿನ ಹಣ ಪಾವತಿಸಿಕೊಂಡು ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ ಎಂದು ದೂರುದಾರರಾದ ಶ್ರೀ ಹೆಚ್.ವಿ.ಕೃಷ್ಣಪ್ಪ ಮತ್ತು ಇತರರು ವಿಚಾರಣೆ ವೇಳೆ ಹೇಳಿಕೆ ನೀಡಿರುತ್ತಾರೆ..

ದಿನಾಂಕ:14–12–2006 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಮತ್ತು ಬಡಾವಣೆ ನಿರ್ಮಾಣಕ್ಕೆ ಜಮೀನು ನೀಡಿದ ರೈತರ ಮಧ್ಯೆ ಆದ ಕರಾರು ಒಪ್ಪಂದ ಪತ್ರ (ಪ್ರತಿ ಲಗತ್ತಿಸಿದೆ, ಅನುಬಂಧ – 5) ಹಾಗು ದಿನಾಂಕ:30–09–2007 ರಂದು ನಡೆದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ ತೀರ್ಮಾನಿಸಿದಂತೆ (ವಿಷಯ 3) (ಪ್ರತಿ ಲಗತ್ತಿಸಿದೆ, ಅನುಬಂಧ – 6) ಸದರಿ ಬಡಾವಣೆ ನಿರ್ಮಾಣಕ್ಕೆ ಜಮೀನು ನೀಡಿದ ರೈತರು/ರೈತರು ಸೂಚಿಸಿದವರಿಗೆ 150 ನಿವೇಶನಗಳನ್ನು ನೀಡಲು ತೀರ್ಮಾನಿಸಿದ್ದು ಅದರಂತೆ 97 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ

ಮಾಹಿತಿ ಹಕ್ಕು ಅಧಿನಿಯಮ 2005 ರೀತ್ಯ ನಕಲು ನೀಡಿದೆ.

ಎಂದು ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಹಾಗೂ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ.ಮಲ್ಲಣ್ಣ ಇವರು ವಿಚಾರಣೆ ವೇಳೆ ತಿಳಿಸಿರುತ್ತಾರೆ.

ಈ ರೀತಿ ಸಂಘದ ಸದಸ್ಯರಲ್ಲದವರಿಗೆ ನಿವೇಶನಗಳನ್ನು ಹಂಚಿಕೆ ಮಾಡುವಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ/ಸರ್ಕಾರದ ಅನುಮತಿ ಪಡೆದಿರುವುದು ಕಂಡುಬಂದಿರುವುದಿಲ್ಲ.

3. ದಿನಾಂಕ: 17-6-2011 ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ ಬೆಂಅಪ್ರಾ/ಆಯು/793/11-12 ರಲ್ಲಿ ಲಿಂಗಧೀರನಹಳ್ಳಿಯ ಸರ್ವೆ ನಂ. 6/p ಮತ್ತು ಸರ್ವೆ ನಂ.7/p ರಲ್ಲಿ 3 ಎಕರೆ ಜಮೀನನ್ನು ಹಸ್ತಾಂತರಿಸುವ ವೇಳೆಯಲ್ಲಿ ಈ ಕೆಳಕಂಡಂತೆ ಷರತ್ತುಗಳನ್ನು ವಿಧಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ, ಅನುಬಂಧ – 7)

* 'ಇನ್ನು ಮುಂದೆ ಪ್ರಾಧಿಕಾರದ ನೌಕರರಲ್ಲದೆ ಎರವಲು ಸೇವೆಯ ನೌಕರರಿಗೆ ನಿವೇಶನಗಳನ್ನು ಹಂಚಿಕೆ ಮಾಡಬಾರದು.
* ಇನ್ನು ಮುಂದೆ ಹಂಚಿಕೆ ಮಾಡುವ ನಿವೇಶನಗಳಿಗೆ ಹತ್ತು ವರ್ಷಗಳ ಪರಭಾರೆ ಮಾಡುವುದನ್ನು ಕಟ್ಟು ನಿಟ್ಟಾಗಿ ನಿರ್ಬಂಧನೆ ವಿಧಿಸುವುದು.
* ಮತ್ತು ಈಗಾಗಲೇ ನಿವೇಶನ ಹಂಚಿಕೆಯಾಗಿರುವ ನೌಕರರಿಗೆ ಮತ್ತೊಮ್ಮೆ ನಿವೇಶನವನ್ನು ಹಂಚಿಕೆ ಮಾಡಬಾರದು.'

ಅದರಂತೆ ಇನ್ನು ಮುಂದೆ ಎರವಲು ಸೇವೆಯ ನೌಕರರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದಿಲ್ಲ ಎಂಬುದಾಗಿ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಹಾಗೂ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ.ಮಲ್ಲಣ್ಣ ಇವರು ವಿಚಾರಣೆ ವೇಳೆ ತಿಳಿಸಿರುತ್ತಾರೆ.

'ನಿವೇಶನಗಳನ್ನು ಹಾಲಿ ಸೇವೆಯಲ್ಲಿರುವ ಪ್ರಾಧಿಕಾರದ ಅಧಿಕಾರಿ ಮತ್ತು ನೌಕರರಿಗೆ ಮಾತ್ರ ಹಂಚಿಕೆ ಮಾಡತಕ್ಕದ್ದು' ಎಂದು ಜಮೀನು ಹಸ್ತಾಂತರಿಸುವ ಸಮಯದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾವು ನಿರ್ಬಂಧ ವಿದಿಸಿದ್ದರಿಂದಾಗಿ ನಿವೃತ್ತಿ ಹೊಂದಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ/ನೌಕರರಿಗೆ ಸಂಘದಿಂದ ನಿವೇಶನ ಹಂಚಿಕೆ ಮಾಡಿರುವುದಿಲ್ಲವೆಂಬುದಾಗಿ ವಿಚಾರಣೆ ವೇಳೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಹಾಗೂ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ.ಮಲ್ಲಣ್ಣ ತಿಳಿಸಿರುತ್ತಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ನಿಂದ ಈ ಕೆಳಕಂಡಂತೆ ಒಟ್ಟು 888 ನಿವೇಶನಗಳನ್ನು ಹಂಚಿಕೆ ಮಾಡಿರುವುದಾಗಿ ವಿಚಾರಣೆ ವೇಳೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಹಾಗೂ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ.ಮಲ್ಲಣ್ಣ ತಿಳಿಸಿರುತ್ತಾರೆ.

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರು : ---------- 605
   (ಪಟ್ಟಿ ಲಗತ್ತಿಸಿದೆ, ಅನುಬಂಧ – 8)
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಎರವಲು ಸೇವೆಯಲ್ಲಿರುವ (On Deputation) ಅನ್ಯ ಇಲಾಖೆಯ ನೌಕರರು ಹಾಗೂ ಇತರೆ ಇಲಾಖೆ ನೌಕರರು : ---------------------- 186
   (ಪಟ್ಟಿ ಲಗತ್ತಿಸಿದೆ, ಅನುಬಂಧ – 9)
3. ಇತರರು : ---------------------------- 97
   (ದಿನಾಂಕ:14–12–2006 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಮತ್ತು ಗ್ರಾಮಸ್ಥರು ಮಾಡಿಕೊಂಡ ಕರಾರು ಒಪ್ಪಂದ ಹಾಗು ದಿನಾಂಕ:30–09–2007 ರಂದು ನಡೆದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ ತೀರ್ಮಾನಿಸಿದಂತೆ)
   (ಪಟ್ಟಿ ಲಗತ್ತಿಸಿದೆ, ಅನುಬಂಧ – 10)

-------

ಒಟ್ಟು: 888

-------

ಮೇಲ್ಕಂಡಂತೆ ನಿವೇಶನಗಳನ್ನು ಹಂಚಿಕೆ ಮಾಡಿರುವುದಾಗಿ ತಿಳಿಸಿದ್ದು ನಿವೇಶನಗಳ ಹಂಚಿಕೆಯ ಬಗ್ಗೆ ಕಾರ್ಯಕಾರಿ ಸಮಿತಿ ಸಭೆಗಳಲ್ಲಿ ಚರ್ಚಿಸಿ ತೀರ್ಮಾನ ಕೈಗೊಂಡಿರುವುದು ಕಂಡುಬಂದಿರುವುದಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಎರವಲು ಸೇವೆಯಲ್ಲಿರುವ (On Deputation) ಅನ್ಯ ಇಲಾಖೆಯ ನೌಕರರು ಹಾಗೂ ಇತರೆ ಇಲಾಖೆ ನೌಕರರು ಮತ್ತು ಇತರರಿಗೆ ನಿವೇಶನಗಳನ್ನು ಹಂಚಿಕೆ ಮಾಡುವಾಗ ಸರ್ಕಾರದ / ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪೂರ್ವಾನುಮತಿ ಪಡೆದಿರುವುದು ಕಂಡುಬಂದಿರುವುದಿಲ್ಲ.

(ನಾರಾಯಣಪ್ಪ)
ಹಿರಿಯ ಉಪನೋಂದಣಾಧಿಕಾರಿ
ಹೆಸರಘಟ್ಟ ಉಪ ನೋಂದಣಿ ಕಛೇರಿ,
ಹೆಸರಘಟ್ಟ, ಬೆಂಗಳೂರು.

59

SOSALE INDUDHARA
*ENQUIRY OFFICER*

No.8, 15th Cross, (Ring Road)
First Floor, J.P. Nagar,
Bangalore-560 078.
Phone: 26596240

Dated: 18.05.2016.

# ಎಸ್.ಇಂದೂಧರ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿ

## ತನಿಖಾ ವರದಿ

ಸರ್ಕಾರದ ಆದೇಶ ಸಂಖ್ಯೆ:ಕಂ.ಇ.102.ಮುನೋಸೋ.2015 ಬೆಂಗಳೂರು ದಿನಾಂಕ 20.04.2016.

ವಿಷಯ:: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ಸಮಗ್ರ ವಿಚಾರಣೆ ನಡೆಯಿಸಿ ವರದಿ ಸಲ್ಲಿಸುವ ಬಗ್ಗೆ.

1) ಜಿಲ್ಲಾ ನೋಂಧಣಾಧಿಕಾರಿಗಳು, ಗಾಂಧಿನಗರ ನೋಂದಣಿ ಜಿಲ್ಲೆಯವರು ತಮ್ಮ 28.10.2015 ಮತ್ತು 09.12.2015ರ ಪತ್ರಗಳಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೌಕರರ ಕ್ಷೇಮಾಭಿವೃದ್ಧಿ ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಮಾನ್ಯ ಲೋಕಾಯುಕ್ತರ ಸೂಚನೆಯನ್ವಯ ಕರ್ನಾಟಕ ನೋಂದಣಿ ಕಾಯ್ದೆ 1960ರ ಕಲಂ 25ರಡಿಯಲ್ಲಿ ಶಾಸನಬದ್ಧ ವಿಚಾರಣೆ ನಡೆಯಿಸಿ ತಮ್ಮ ವರದಿಯಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಶಿಫಾರಸ್ಸು ಮಾಡಿದ್ದರು. ಅನಂತರ ಸಂಘಕ್ಕೆ ದಿ 05.11.2015ರ ನೋಟೀಸನ್ನು ಸರ್ಕಾರ ಕೊಟ್ಟಿದ್ದಿತು. ಈ ಬಗ್ಗೆ ಅಧ್ಯಕ್ಷರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಕ್ಷೇಮಾಭಿವೃದ್ಧಿ ಸಂಘರವರು ದಿನಾಂಕ 13.11.2015 ಮತ್ತು 18.11.2015ರ ಹೇಳಿಕೆ ಸಲ್ಲಿಸಿ, ಜಿಲ್ಲಾ ನೋಂದಣಾಧಿಕಾರಿಗಳ ವರದಿಯಲ್ಲಿ ಸತ್ಯಾಂಶವಿರುವುದಿಲ್ಲವೆಂಬ ನಿಲುವನ್ನು ತೆಗೆದು ಕೊಂಡಿರುತ್ತಾರೆ. ಅನಂತರ ಮೇಲ್ಕಂಡ ಸಂಘದ ವಿರುದ್ಧದ ಅವ್ಯವಹಾರ/ದೂರುಗಳ ಬಗ್ಗೆ ತನಿಖೆ ನಡೆಯಿಸಿ ವರದಿ ಸಲ್ಲಿಸಲು ಡಿ.ಹೆಚ್.ಶಶಿಧರ್, ನಿವೃತ್ತ ಐ.ಎ.ಎಸ್., ಅಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿರುತ್ತದೆ. ಈ ಬಗ್ಗೆ ಡಬ್ಲ್ಯೂ.ಪಿ.40081/2013ರಲ್ಲಿ ಪ್ರಕರಣವನ್ನು ಹಾಕಲಾಗಿದ್ದು ಈ ಬಗ್ಗೆ ಮಾನ್ಯ ನ್ಯಾಯಾಲಯವು ದಿ 10.09.2013ರಂದು ಮಧ್ಯಂತರ ಆದೇಶವನ್ನು ಮಾಡಿ ದಿ 02.09.2013ರ

18/5

SOSALE INDUDHARA
*ENQUIRY OFFICER*

No.8, 15th Cross, (Ring Road)
First Floor, J.P. Nagar,
Bangalore-560 078.
Phone: 26596240

Dated:

ಆದೇಶಕ್ಕೆ ತಡೆಯಾಜ್ಞೆ ನೀಡಿದ. ಅನಂತರ ಸರ್ಕಾರವು ಈ ಪ್ರಕರಣವನ್ನು ಕೂಲಂಕುಶವಾಗಿ ಪರಿಶೀಲಿಸಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27(ಎ)(1)(ಸಿ)ರನ್ವಯ ಪ್ರತ್ಯೇಕ ಸಮಗ್ರ ವಿಚಾರಣೆ ನಡೆಸುವುದಕ್ಕೆ ವಿಚಾರಣಾಧಿಕಾರಿಯವರನ್ನು ಮತ್ತು ವಿಚಾರಣಾಧಿಕಾರಿಯವರನ್ನು ನೇಮಿಸಿ ಮೇಲ್ಕಂಡ ಸರ್ಕಾರದ ಆದೇಶ ಸಂಖ್ಯೆ: ಕಂಇ102ಮುನೋಸೋ 2015 ಬೆಂಗಳೂರು ದಿ. 20.04.2016ರ ಆದೇಶವನ್ನು ಹೊರಡಿಸಿ, ವಿಚಾರಣೆಯನ್ನು ಒಂದು ತಿಂಗಳೊಳಗೆ ಪೂರ್ಣಗೊಳಿಸಿ, ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಆದೇಶಿಸಲಾಗಿದೆ.

2) ಮೇಲ್ಕಂಡ ಆದೇಶ ನಕಲು ತಲಪಿದ ನಂತರ ಈ ಪ್ರಕರಣದ ವಿಚಾರಣೆಯನ್ನು ನಡೆಸಲು ಕ್ರಮತೆಗೆದು ಕೊಂಡು ಮಂಡನಾಧಿಕಾರಿಯವರಿಗೆ ಸಂಘದ ಅಧ್ಯಕ್ಷರಿಗೆ ಹಾಗೂ ಪಕ್ಷದಾರರಿಗೆ ನೋಟೀಸನ್ನು ಕೊಡಲಾಗಿದೆ.

3) ವಿಚಾರಣಾ ಸಮಯದಲ್ಲಿ ಮಂಡನಾಧಿಕಾರಿಯವರು ಈ ಪ್ರಕರಣಕ್ಕೆ ಸಂಬಂಧಿಸಿದ ಸಂಘದ ವಿರುದ್ಧದ ಅವ್ಯವಹಾರ/ದೂರುಗಳ ಬಗ್ಗೆ ತಮ್ಮಲ್ಲಿದ್ದ ಈ ಕೆಳಗೆ ಕಂಡ ದಾಖಲೆಗಳನ್ನು ಕೊಟ್ಟಿರುತ್ತಾರೆ.

ಅ) ಶ್ರೀ ಕೃಷ್ಣೇಗೌಡರ ದೂರು ಅರ್ಜಿಗೆ ಸಂಬಂಧಿಸಿದಂತೆ ಹಾಗೂ ಮಾನ್ಯ ಲೋಕಾಯುಕ್ತರ ಲೆಕ್ಕಾಧೀಕ್ಷಕರು ನಡೆಸಿಕೊಟ್ಟಿರುವ ತನಿಖಾ ವರದಿ ಪ್ರತಿ.

ಆ) ಮಾನ್ಯ ಲೋಕಾಯುಕ್ತರವರ ಆದೇಶದನ್ವಯ ಗಾಂಧಿನಗರ ಜಿಲ್ಲಾ ನೋಂದಣಾಧಿಕಾರಿಯವರು ತನಿಖಾಧಿಕಾರಿಯವರನ್ನು ನೇಮಿಸಿದ ನಂತರ ತನಿಖಾಧಿಕಾರಿಯವರು ನೀಡಿರುವ ವಿಚಾರಣಾ ವರದಿ ಪ್ರತಿ.

ಇ) ಶ್ರೀ ಬಿ.ಎಂ.ಚಿಕ್ಕಯ್ಯರವರ ದೂರಿನ ಮೇಲೆ ಹೆಸರಘಟ್ಟ ಉಪನೋಂದಣಾಧಿಕಾರಿಯವರು ನೀಡಿರುವ ವಿಚಾರಣಾ ವರದಿ.

ಈ) ಶ್ರೀ ಹೆಚ್.ವಿ.ಕೃಷ್ಣಪ್ಪ ಮತ್ತು ಇತರರ ದೂರು ಅರ್ಜಿಗಳು.

4) ಸಂಘದ ಅಧ್ಯಕ್ಷರು ಮೇಲ್ಕಂಡ ದೂರುಗಳ ಬಗ್ಗೆ ತಮ್ಮ ವಿವರಣೆಯನ್ನು ನೀಡಿ ದಾಖಲೆಗಳ ಪ್ರತಿಗಳನ್ನು ಕೊಟ್ಟಿರುತ್ತಾರೆ.

57

No.8, 15th Cross, (Ring Road)
First Floor, J.P. Nagar,
Bangalore-560 078.
Phone: 26596240

SOSALE INDUDHARA
*ENQUIRY OFFICER*

Dated:

5) ಮಂಡನಾಧಿಕಾರಿ ಹಾಗೂ ಸಂಘದ ಅಧ್ಯಕ್ಷರ ವಾದ ವಿವಾದವನ್ನು ಕೇಳಲಾಯಿತು.

**ಶ್ರೀ ಡಿ.ಟಿ.ಕೃಷ್ಣೇಗೌಡರ ದೂರಿನ ಬಗ್ಗೆ**

6). ಶ್ರೀ ಡಿ.ಟಿ.ಕೃಷ್ಣೇಗೌಡರು ತಮ್ಮ ದೂರಿನಲ್ಲಿ ತಾವು ಸದಸ್ಯತ್ವದ ಶುಲ್ಕ 1,050/–ಗಳನ್ನು ಹಾಗೂ ನಿವೇಶನದ ಬಾಬ್ತು ಎರಡು ಕಂತುಗಳಲ್ಲಿ ರೂ.1,50,000/–ಗಳನ್ನು ಕೊಟ್ಟದ್ದರೂ ಸಹ ತಮಗೆ ನಿವೇಶನವನ್ನು ಹಂಚಿಕೆ ಮಾಡದೆ, ರಚಿಸಿದ ನಿವೇಶನಗಳ ಪೈಕಿ ನಿವೇಶನಗಳನ್ನು ಕೆಲವೇ ಜನ ಸದಸ್ಯರುಗಳಿಗೆ ಹಂಚಿಕೆ ಮಾಡಿ, ತಮಗೆ ಬೇಕಾದವರಿಗೆ ಹಾಗೂ ಖಾಸಗಿ ವ್ಯಕ್ತಿಗಳಿಗೆ ನಿವೇಶನವನ್ನು ಹಂಚಿಕೆ ಮಾಡಿ, 2–3 ಮನೆಗಳು ಹಾಗೂ ನಿವೇಶನಗಳು ಇರುವಂತಹವರಿಗೆ ನಿವೇಶನವನ್ನು ಹಂಚಿಕೆ ಮಾಡಲಾಗಿದೆ ಎಂದು ದೂರನ್ನು ಮಾಡಿರುತ್ತಾರೆ.

7) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ಡಿ.ಟಿ.ಕೃಷ್ಣೇಗೌಡರು ರೂ.1,050/– ಸದಸ್ಯತ್ವ ಶುಲ್ಕ ಹಾಗೂ ದಿ 03.11.2006ರಂದು ರೂ.75,000/– ಮತ್ತು ದಿ 19.12.2006ರಂದು ರೂ.75,000/–ಗಳನ್ನು ಪಾವತಿಸಿರುವುದು ಕಂಡು ಬರುತ್ತದೆ. ಶ್ರೀ ಕೃಷ್ಣೇಗೌಡರಿಗೆ ಏಕೆ ನಿವೇಶನವನ್ನು ಹಂಚಲಾಗಿಲ್ಲ ಎಂಬ ಬಗ್ಗೆ ಅಧ್ಯಕ್ಷರಾದ ಶ್ರೀ ಡಿ.ಎನ್.ಬೆಟ್ಟೇಗೌಡರು ತಮ್ಮ 28.09.2011ರ ಪತ್ರದಲ್ಲಿ ವಿವರಣೆಯನ್ನು ಸಲ್ಲಿಸಿರುವುದು ಕಂಡು ಬರುತ್ತದೆ. ಮೇಲ್ಕಂಡ ಪತ್ರದಲ್ಲಿ ಸರ್ಕಾರದ ಆದೇಶದಂತೆ ಪ್ರಾಧಿಕಾರದ ನೌಕರರ ಸಂಘಕ್ಕೆ 45 ಎಕರೆ ಜಮೀನು ಮಂಜೂರು ಮಾಡುವ ಬದಲು ಕೇವಲ 38 ಎಕರೆ ಜಮೀನು ಮಾತ್ರ ಪ್ರಾಧಿಕಾರ ಮಂಜೂರು ಮಾಡಿದ್ದು, ಇದರಿಂದಾಗಿ ಲಭ್ಯವಿರುವ 753 ನಿವೇಶನಗಳಲ್ಲಿ ಚಾಲಕರಿಗೆ ಹಾಗೂ ಗ್ರೂಪ್ ಡಿ ನೌಕರರಿಗೆ ಪ್ರಥಮ ಆದ್ಯತೆ ನೀಡಿ ಉಳಿದ ನಿವೇಶನಗಳನ್ನು ನೌಕರರಿಗೆ/ಅಧಿಕಾರಿಗಳಿಗೆ ಎರವಲು ಸೇವೆ ಮಾಡುವವರಿಗೆ ಕಾರ್ಯಕಾರಿ ಸಮಿತಿಯ ತೀರ್ಮಾನದಂತೆ ನಿವೇಶನವನ್ನು ಹಂಚಲಾಗಿರುತ್ತದೆಂದು ತಿಳಿಸಿರುವುದು ಕಂಡು ಬರುತ್ತದೆ. ಮೇಲಾಗಿ ಶ್ರೀ ಡಿ.ಟಿ.ಕೃಷ್ಣೇಗೌಡರು ಸಾರ್ವಜನಿಕರೊಂದಿಗೆ ಹಾಗೂ ನೌಕರರೊಂದಿಗೆ ಸೌಜನ್ಯದಿಂದ ನಡೆದುಕೊಳ್ಳದೆ ಇದ್ದುದರಿಂದ ಅವರನ್ನು ಕೆಲಸದಿಂದ ಬಿಡುಗಡೆ ಮಾಡಲಾದ ಹಿನ್ನೆಲೆಯಲ್ಲಿ ಅವರಿಗೆ ನಿವೇಶನವನ್ನು ನೀಡಲಾಗಲಿಲ್ಲವೆಂದು ತಿಳಿಸಿರುವುದು ಕಂಡು ಬರುತ್ತದೆ. ಅನಂತರ ಮೇಲ್ಕಂಡ ದೂರುದಾರರು ಗ್ರಾಹಕರ ವೇದಿಕೆಯ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಅಲ್ಲಿ ಇವರ ಮನವಿಯನ್ನು ತಿರಸ್ಕರಿಸಿದ್ದರಿಂದ, ನ್ಯಾಯಾಲಯದ ಆದೇಶದಂತೆ ಸಂಘವು 770408ನೇ ನಂಬರಿನ ಚೆಕ್

18/5

**SOSALE INDUDHARA**
*ENQUIRY OFFICER*

**No.8, 15th Cross, (Ring Road)
First Floor, J.P. Nagar,
Bangalore-560 078.
Phone: 26596240**

Dated:

ಮುಖಾಂತರ 02.12.2008ರಂದು ರೂ.1,50,000/-ಗಳನ್ನು ಹಿಂದಕ್ಕೆ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಅನಂತರ ದೂರುದಾರರು ರಾಜ್ಯ ಗ್ರಾಹಕರ ವೇದಿಕೆಗೆ ಪ್ರಕರಣ ದಾಖಲಿಸಿದ್ದು, ಅಲ್ಲೂ ಸಹ ವಜಾ

ಆಗಿರುವುದು ಕಂಡು ಬರುತ್ತದೆ. ಅನಂತರ ದೂರುದಾರರು ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ. ಪ್ರಕರಣವನ್ನು ಹಾಕಿದ್ದು ಅದನ್ನು ಹಿಂದಕ್ಕೆ ಪಡೆದಿರುತ್ತಾರೆಂದು ತಿಳಿಸಿರುತ್ತಾರೆ. ತನ್ನ ಮತ್ತು ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ನಡುವೆ ಇದ್ದ ಪ್ರಕರಣಗಳನ್ನು ರಾಜಿ ಮುಖಾಂತರ ಪರಿಹರಿಸಿಕೊಂಡಿರುವುದರಿಂದ ತಮ್ಮ ದೂರನ್ನು ಕೈ ಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿ ಶ್ರೀ. ಡಿ.ಟಿ.ಕೃಷ್ಣೇಗೌಡರು 08.06.2012ರ ಪತ್ರವನ್ನು ಬರೆದಿರುವುದು ಕಂಡು ಬರುತ್ತದೆ ತಾವು ನಿವೇಶನಕ್ಕಾಗಿ ಕಟ್ಟಿದ್ದ ಹಣವನ್ನು ತಮ್ಮ ಮಗನ ಹೆಸರಿಗೆ ವರ್ಗಾವಣೆ ಮಾಡಬೇಕೆಂದು ಕೋರಿ 15.02.2012ರ ಪತ್ರವನ್ನು ಸಹ ಶ್ರೀ ಡಿ.ಟಿ.ಕೃಷ್ಣೇಗೌಡರು ಬರೆದಿರುವುದು ಕಂಡು ಬರುತ್ತದೆ. ಬಡಾವಣೆ ರಚಿಸಲು ಜಮೀನು ನೀಡಿದ ರೈತರ ಜತೆ ಒಪ್ಪಂದ ಮಾಡಿಕೊಂಡಿರುವ ಕರಾರಿನ ಕೆಳಗೆ ಶ್ರೀ ಕೃಷ್ಣೇಗೌಡರ ಮಗನಾದ ಶ್ರೀ ಡಿ.ಕೆ.ಶ್ರೀನಿವಾಸ್‌ರವರಿಗೆ 175ನೇ ನಂಬರಿನ ನಿವೇಶನವನ್ನು ಹಂಚಿಕೆ ಮಾಡಿದ್ದು, ಅವರು ಮೇಲ್ಕಂಡ ನಿವೇಶನದ ಸ್ವಾಧೀನವನ್ನೂ ಸಹ 17.02.2012ರಂದು ಪಡೆದಿರುವುದು ಕಂಡು ಬರುತ್ತದೆ. ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಶ್ರೀ ಕೃಷ್ಣೇಗೌಡರ ಪ್ರಕರಣ ಸಂಘಕ್ಕೆ ಆಡಳಿತಾಧಿಕಾರಿಯವರನ್ನು ನೇಮಕ ಮಾಡುವಷ್ಟು ಗುರುತರ ಹಾಗೂ ಗಂಭೀರ ಪ್ರಕರಣವಾಗಿರುವುದಿಲ್ಲವೆಂದು ನಾನು ಅಭಿಪ್ರಾಯ ಪಟ್ಟಿರುತ್ತೇನೆ.

8) ಸಂಘಕ್ಕೆ ಲಭ್ಯವಿದ್ದ 39 ಎಕರೆ 15 ಗುಂಟೆ ಜಮೀನಿನಲ್ಲಿ ಸುಮಾರು 777 ನಿವೇಶನಗಳನ್ನು ರಚಿಸಿದ್ದು ಸದರಿ ನಿವೇಶನಗಳಿಗೆ 1153 ಅರ್ಜಿದಾರರು ಅರ್ಜಿ ಸಲ್ಲಿಸಿದ್ದು, ಸರ್ಕಾರದ ಆದೇಶ ಹಾಗೂ ಆಯುಕ್ತರ ಆದೇಶದಂತೆ ಪ್ರಾಧಿಕಾರದ ನೌಕರರು ಮತ್ತು ಎರವಲು ಸೇವೆಯಲ್ಲಿರುವ ನೌಕರರಿಗೆ ಕಾರ್ಯಕಾರಿ ಸಮಿತಿಯ ಸಭೆಯ ತೀರ್ಮಾನದಂತೆ ಜಮೀನು ನೀಡಿದ ರೈತರಿಗೆ ಅಥವಾ ಅವರುಗಳು ಸೂಚಿಸಿರುವ ವ್ಯಕ್ತಿಗಳಿಗೆ ಒಪ್ಪಂದದ ಕರಾರಿನಂತೆ ಹಂಚಿಕೆ ಮಾಡಿರುವುದು ಕಂಡು ಬರುತ್ತದೆ. ಲಭ್ಯವಿರುವ ನಿವೇಶನಗಳನ್ನು ಸಂಘವು ಆದ್ಯತೆ ಮೇರೆಗೆ ಹಂಚಿಕೆ ಮಾಡಿರುವುದು ಕಂಡು ಬರುತ್ತದೆ.

18/

55

SOSALE INDUDHARA
*ENQUIRY OFFICER*

No.8, 15th Cross, (Ring Road)
First Floor, J.P. Nagar,
Bangalore-560 078.
Phone: 26596240

Dated:

9) ಪ್ರಾಧಿಕಾರದ ನೌಕರರಿಗೆ ಮನೆ ಹಾಗೂ ನಿವೇಶನ ಇದ್ದರೂ ಸಹ ಅವರಿಗೆ ನಿವೇಶನ ಹಂಚಿಕೆ ಮಾಡಿರುವ ಬಗ್ಗೆ ಯಾವುದೇ ಪೂರಕ ದಾಖಲೆಗಳನ್ನು ದೂರಿನ ಜತೆ ಸಲ್ಲಿಸಿರುವುದು ಕಂಡು ಬರುತ್ತಿಲ್ಲ, ಇದರಿಂದಾಗಿ ಈ ಬಗ್ಗೆ ಮಾಡಲಾಗಿರುವ ಆಪಾದನೆಯಲ್ಲಿ ಹುರುಳಿಲ್ಲವೆಂಬುದು ಮೇಲು ನೋಟಕ್ಕೆ ಕಂಡು ಬರುತ್ತದೆ.

10) ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಶ್ರೀ ಕೃಷ್ಣೇಗೌಡರ ದೂರಿನಲ್ಲಿ ತಿಳಿಸಿರುವ ಕಾರಣಗಳಿಂದಾಗಿ, ಆಡಳಿತಾಧಿಕಾರಿಯವರನ್ನು ನೇಮಕಮಾಡುವ ಪ್ರಮೇಯ ಉದ್ಭವಿಸುವುದಿಲ್ಲವೆಂದು ನಾನು ಅಭಿಪ್ರಾಯ ಪಡುತ್ತಿದ್ದೇನೆ.

ಶ್ರೀ ಹೆಚ್.ವಿ.ಕೃಷ್ಣಪ್ಪ ಮತ್ತು ಇತರರು ನೀಡಿರುವ ದೂರಿನ ಬಗ್ಗೆ.

11) 42 ಎಕರೆ ಜಮೀನಿನಲ್ಲಿ ನಿವೇಶನಗಳನ್ನು ರಚಿಸಿ ಕೆಲವೇ ಬಿ.ಡಿ.ಎ ನೌಕರರಿಗೆ ಮಾತ್ರ ಹಂಚಿಕೆ ಮಾಡಿ ಬಹುಪಾಲು ನಿವೇಶನಗಳನ್ನು ಬಿ.ಡಿ.ಎ.ಗೆ ಎರವಲು ಸೇವೆಯ ಮೇಲೆ ಬಂದಿದ್ದ ನೌಕರರು, ಇತರೆ ಇಲಾಖೆಗಳ ನೌಕರರು ಮತ್ತು ಸಾರ್ವಜನಿಕರಿಗೆ ಹಂಚಿಕೆ ಮಾಡಿ ನೋಂದಣಿ ಮಾಡಿಕೊಟ್ಟಿರುತ್ತಾರೆ. ನಿವೃತ್ತರಾದ ನೌಕರರಿಂದ ಹಣ ಪಾವತಿಸಿಕೊಂಡು ನಿವೇಶನ ಹಂಚಿಕೆ ಮಾಡಿರುವುದಿಲ್ಲ. ಸಂಘಕ್ಕೆ ಚುನಾವಣೆ ನಡೆದಿಲ್ಲ ಸಾಮಾನ್ಯ ಮತ್ತು ವಿಶೇಷ ಸರ್ವ ಸದಸ್ಯರ ಸಭೆಗಳು ನಡೆದಿಲ್ಲ. ಪ್ರಾಧಿಕಾರದ ಅಥವಾ ಸರ್ಕಾರದ ಅನುಮತಿ ಪಡೆಯದೇ ಸಂಘದ ಬೈಲಾವನ್ನು ಉಲ್ಲಂಘಿಸಿ ಎರವಲು ಸೇವಾ ನೌಕರರು ಮತ್ತು ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡಿ ನೋಂದಣಿ ಮಾಡಿಕೊಟ್ಟಿರುತ್ತಾರೆ. ಅರ್ಜಿದಾರರ ದೂರಿನ ಬಗ್ಗೆ ಹೇಳಿಕೆಗಳನ್ನು ಸಲ್ಲಿಸಲು ಸಂಘಕ್ಕೆ ಸೂಚಿಸಿದ್ದರೂ ಯಾವುದೇ ವರದಿಯನ್ನು ಈವರೆವಿಗೂ ಸಲ್ಲಿಸದೆ ನಿರ್ಲಕ್ಷತೆ ತೋರಿರುತ್ತಾರೆ. ಈ ಬಗ್ಗೆ ವಿಚಾರಣೆ ನಡೆಸಿದ ಹೆಸರುಘಟ್ಟ ಉಪನೋಂದಣಿ ಕಛೇರಿಯ ಹಿರಿಯ ಉಪನೋಂದಣಾಧಿಕಾರಿಯವರು ತಮ್ಮ ವರದಿಯನ್ನು ಸಲ್ಲಿಸಿರುವುದು ಕಂಡು ಬರುತ್ತದೆ.

12) ನಿವೃತ್ತ ನೌಕರರ ಮುಖ್ಯವಾದ ದೂರು ಏನೆಂದರೆ ತಮ್ಮಿಂದ ನಿವೇಶನದ ಬಗ್ಗೆ ಹಣ ಪಾವತಿಸಿಕೊಂಡಿದ್ದರೂ ಸಹ ತಮಗೆ ನಿವೇಶನವನ್ನು ಹಂಚಿಕೆ ಮಾಡಿರುವುದಿಲ್ಲ ಎಂಬುದಾಗಿದೆ. ದಾಖಲೆಗಳನ್ನು ಪರಿಶೀಲಿಸಲಾಗಿ, ಸಂಘದವರು ನಿವೇಶನಗಳನ್ನು ಹಂಚುವ ಸಲುವಾಗಿ ಬಿ.ಡಿ.ಎ ನಲ್ಲಿ

18/5

SOSALE INDUDHARA
*ENQUIRY OFFICER*

No.8, 15th Cross, (Ring Road)
First Floor, J.P. Nagar,
Bangalore-560 078.
Phone: 26596240

Dated:

ಕರ್ತವ್ಯ ನಿರ್ವಹಿಸುತ್ತಿದ್ದ ಎಲ್ಲರಿಂದಲೂ ಅರ್ಜಿಗಳನ್ನು ಆಹ್ವಾನಿಸಿ ಬಡಾವಣೆಯನ್ನು ರಚಿಸಿದ ನಂತರ ಎಷ್ಟು ನಿವೇಶನಗಳು ಲಭ್ಯವಾಗುತ್ತವೆ ಮತ್ತು ಎಷ್ಟು ಅರ್ಜಿದಾರರು ಇದ್ದಾರೆ ಎಂಬುದನ್ನು ಪರಿಗಣಿಸಿ ಹಂಚಿಕೆ ಕಾರ್ಯವನ್ನು ನಿರ್ವಹಿಸಲು ಕ್ರಮ ತೆಗೆದುಕೊಂಡಿರುವುದು ಕಂಡು ಬರುತ್ತದೆ. ಇದರಿಂದಾಗಿ ಎಲ್ಲ ಅರ್ಜಿದಾರರಿಂದಲೂ ನಿಯಮಾನುಸಾರ ಹಣವನ್ನು ಪಡೆದಿರುತ್ತಾರೆ. ಸಂಘದ ಅಧ್ಯಕ್ಷರು ತಮ್ಮ 28.09.2011ರ ಪತ್ರದಲ್ಲಿ ಸರ್ಕಾರದ ಆದೇಶದಂತೆ ಪ್ರಾಧಿಕಾರದ ನೌಕರರ ಸಂಘಕ್ಕೆ 45 ಎಕರೆ ಜಮೀನು ಮಂಜೂರು ಮಾಡುವ ಬದಲು ಕೇವಲ 38 ಎಕರೆ ಜಮೀನನ್ನು ಮಾತ್ರ ಮಂಜೂರು ಮಾಡಿದ್ದರಿಂದ 753 ನಿವೇಶನಗಳನ್ನು ಮಾತ್ರ ರಚಿಸಲು ಸಾಧ್ಯವಾಯಿತೆಂದು ತಿಳಿಸಿರುವುದು ಕಂಡು ಬರುತ್ತದೆ. ಆದರ ನಿವೇಶನಕ್ಕಾಗಿ 1025 ಅರ್ಜಿಗಳು ಬಂದಿದ್ದರಿಂದ ಹಾಗೂ ಜಮೀನನ್ನು ಹಸ್ತಾಂತರಿಸವ ಸಮಯದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ತಮ್ಮ 17.06.2011ರ ಪತ್ರದಲ್ಲಿ "ಇನ್ನು ಮುಂದೆ ಪ್ರಾಧಿಕಾರದ ನೌಕರರಲ್ಲದೆ ಎರವಲು ಸೇವೆಯ ನೌಕರರಿಗೆ ನಿವೇಶನಗಳನ್ನು ಹಂಚಿಕೆ ಮಾಡಬಾರದು" ಮತ್ತು 04.09.2006 ಹಾಗೂ08.06.2007ರ ಪತ್ರದಲ್ಲಿ "ನಿವೇಶನಗಳನ್ನು ಹಾಲಿ ಸೇವೆಯಲ್ಲಿರುವ ಪ್ರಾಧಿಕಾರದ ಅಧಿಕಾರಿ ಮತ್ತು ನೌಕರರಿಗೆ ಮಾತ್ರ ಹಂಚಿಕೆ ಮಾಡತಕ್ಕದ್ದು" ಎಂಬ ಷರತ್ತನ್ನು ಹಾಕಿದ್ದರಿಂದ ನಿವೃತ್ತ ನೌಕರರಿಗೆ ನಿವೇಶನವನ್ನು ಹಂಚಿಕೆ ಮಾಡಲು ಸಾಧ್ಯವಾಗಿಲ್ಲದೇ ಇರುವುದು ಕಂಡು ಬರುತ್ತದೆ.

13) ಮೇಲ್ಕಂಡ ಕಾರಣಗಳಿಂದಾಗಿ ಸಂಘದ ತೀರ್ಮಾನದಂತೆ ಚಾಲಕರಿಗೆ ಮತ್ತು ಗ್ರೂಪ್ ಡಿ ನೌಕರರಿಗೆ ಪ್ರಥಮ ಆದ್ಯತೆ ಮೇಲೆ ನಿವೇಶನಗಳನ್ನು ಹಂಚಿಕೆ ಮಾಡಿ ಅನಂತರ ಖಾಯಂ ನೌಕರರಿಗೆ ನಿವೇಶನಗಳನ್ನು ಹಂಚಿಕೆ ಮಾಡಿರುವುದು ಕಂಡು ಬರುತ್ತದೆ. ಹೆಸರುಘಟ್ಟ ಉಪನೋಂದಣಿ ಕಛೇರಿಯ ಹಿರಿಯ ಉಪನೋಂದಣಾಧಿಕಾರಿಯವರೂ ಸಹ ತಮ್ಮ 22.11.2015ರ ವರದಿಯಲ್ಲಿ "ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 605 ಖಾಯಂ ನೌಕರರಿಗೆ 605 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ" ಎಂದು ತಿಳಿಸಿರುವುದು ಕಂಡು ಬರುತ್ತದೆ. ಮೇಲಾಗಿ "ಎರವಲು ಸೇವೆಯ ನೌಕರರ ಪೈಕಿ ನಿವೇಶನ ಹಂಚಿಕೆ ಮಾಡದ 97 ಅಧಿಕಾರಿ/ನೌಕರರಿಗೆ ನಿವೇಶನ ಮುಂಗಡ ಹಣವನ್ನು ಬಡ್ಡಿ ಸಮೇತ ದಿ 23.07.2011ರಂದು ವಾಪಸ್ ಮಾಡಲಾಗಿರುತ್ತದೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೃತ್ತ ನೌಕರರಿಗೆ (106

18/5

53

SOSALE INDUDHARA
*ENQUIRY OFFICER*

No.8, 15th Cross, (Ring-Road)
First Floor, J.P. Nagar,
Bangalore-560 078.
Phone: 26596240

Dated:

ಸದಸ್ಯರಿಗೆ) ನಿವೇಶನ ಮುಂಗಡ ಹಣವನ್ನು ದಿ 14.07.2009ರಂದು ಬಡ್ಡಿ ಸಮೇತ ಹಿಂತಿರುಗಿಸಲಾಗಿದೆ" ಎಂದು ತಿಳಿಸಿರುವುದು ಕಂಡು ಬರುತ್ತದೆ.

14) ಬಡಾವಣೆಯ ಕಾಮಗಾರಿ ಕೆಲಸ ಪ್ರಾರಂಭಿಸಲು ಗುದ್ದಲಿ ಪೂಜೆ ಮಾಡುವ ಸಮಯದಲ್ಲಿ ಕೆಲವು ಕುಟುಂಬದವರು ಕಾಮಗಾರಿ ಕೆಲಸಕ್ಕೆ ತಡೆಯೊಡ್ಡಿದ್ದರಿಂದ ಅವರಿಗೆ ಬಡಾವಣೆ ರಚಿಸದ ಮೇಲೆ ಮಾನವೀಯ ದೃಷ್ಟಿಯಿಂದ ಮೇಲ್ಕಂಡಂತೆ ತಡೆಯೊಡ್ಡಿದ ಕುಟುಂಬದವರಿಗಾಗಲೀ ಅಥವಾ ಅವರು ತಿಳಿಸಿದ ವ್ಯಕ್ತಿಗಾಗಲೀ ತಲಾ ಒಂದು ನಿವೇಶನವನ್ನು ನೀಡುವ ಬಗ್ಗೆ ಸಂಘದ ಮಂಡಳಿಯ ಸರ್ವ ಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ಅಧಿಕಾರ ನೀಡಿದ್ದರ ಮೇಲೆ ಮೇಲ್ಕಂಡ ರೈತರ ಜತೆ ಕರಾರು ಒಪ್ಪಂದ ಮಾಡಿಕೊಂಡಿದ್ದರಿಂದ ಹಾಗೂ ಸರ್ಕಾರದ 29.03.2008ರ ಸೂಚನೆಯಂತೆ "ವಿವೇಚನಾ ಕೋಟದ" ಮಿತಿಯೊಳಗೆ ಮೇಲ್ಕಂಡ ರೈತರಿಗೆ ಹಾಗೂ ಇತರರಿಗೆ ನಿವೇಶನ ಹಂಚಿಕೆ ಮಾಡಿರುವುದು ಕಂಡು ಬರುತ್ತದೆ. ಇದರಿಂದಾಗಿ ಕೆಲವು ಸಾರ್ವಜನಿಕರಿಗೆ ನಿವೇಶನವನ್ನು ನಿಯಮಾನುಸಾರ ಹಂಚಿರುವುದು ಕಂಡು ಬರುತ್ತದೆ. ಇದರಲ್ಲಿ ಯಾವ ರೀತಿಯ ದುರುದ್ದೇಶವಾಗಲೀ ಅಥವಾ ಅಕ್ರಮ ವ್ಯವಹಾರವಾಗಲೀ ಕಂಡು ಬರುತ್ತಿಲ್ಲವೆಂದು ನಾನು ಅಭಿಪ್ರಾಯ ಪಡುತ್ತಿದ್ದೇನೆ.

15) ಸಂಘಕ್ಕೆ ಚುನಾವಣೆಯನ್ನು ನಡೆಸಿರುವುದಿಲ್ಲ ಮತ್ತು ಸಾಮಾನ್ಯ ಹಾಗೂ ವಿಶೇಷ ಸರ್ವ ಸದಸ್ಯರ ಸಭೆಗಳು ನಡೆದಿರುವುದಿಲ್ಲವೆಂಬ ಆರೋಪವನ್ನು ಮಾಡಿರುವುದು ಕಂಡು ಬರುತ್ತದೆ. ಈ ಬಗ್ಗೆ ಸಂಘದ ದಾಖಲೆಗಳನ್ನು ಪರಿಶೀಲಿಸಲಾಗಿ 30.09.2007 ಮತ್ತು 25.11.2012ರಂದು ನಡೆದ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ನಡೆಸಿರುವುದು ಕಂಡು ಬರುತ್ತದೆ. ಇದಕ್ಕೆ ಹಾಜರಿದ್ದ ಸರ್ವ ಸದಸ್ಯರ ಸಹಿಗಳನ್ನು ಪಡೆದಿರುವುದು ಕಂಡು ಬರುತ್ತದೆ. ಮೇಲ್ಕಂಡ ಸರ್ವ ಸದಸ್ಯರ ಸಭೆಗಳಲ್ಲಿ, ಅಧ್ಯಕ್ಷರನ್ನು ನಿಯಮಾನುಸಾರ ಚುನಾಯಿಸಿರುವುದು ಕಂಡು ಬರುತ್ತದೆ. ಮೇಲಾಗಿ ಸಾಮಾನ್ಯ ಹಾಗೂ ವಿಶೇಷ ಸರ್ವ ಸದಸ್ಯರ ಸಭೆಯನ್ನು ನಡಿಸಿರುವುದು ಕಂಡು ಬರುತ್ತದೆ. ಈ ಸಭೆಗಳಲ್ಲಿ ಸರ್ವ ಸದಸ್ಯರ ಸಭೆಯ ನಡೆವಳಿಕೆಯನ್ನು ದಾಖಲಿಸಿರುವುದು ಕಂಡುಬರುತ್ತದೆ. ಇದರಲ್ಲಿ ಯಾವ ಲೋಪವಾಗಲಿ ಅಥವಾ ಅಕ್ರಮವಾಗಲಿ ಕಂಡು ಬರುತ್ತಿಲ್ಲವೆಂದು ನಾನು ಅಭಿಪ್ರಾಯ ಪಡುತ್ತಿದ್ದೇನೆ.

18/5

**SOSALE INDUDHARA**
*ENQUIRY OFFICER*

**No.8, 15th Cross, (Ring Road)**
**First Floor, J.P. Nagar,**
**Bangalore-560 078.**
**Phone: 26596240**

Dated:

ಬೆಂಗಳೂರು ಗಾಂಧಿನಗರ ನೋಂದಣಿ ಜಿಲ್ಲೆ ಸಂಘಗಳ ನೋಂದಣಾಧಿಕಾರಿಗಳುರವರ ಆದೇಶದ ಬಗ್ಗೆ.

16) ಶ್ರೀ ಎಸ್.ಎಂ.ವಿಜಯಕೇಶವರೆಡ್ಡಿ ಮತ್ತೆ ಕೆಲವರ ದೂರಿನ ಬಗ್ಗೆ ಸಂಘಗಳ ನೋಂದಣಾಧಿಕಾರಿಗಳು ಗಾಂಧಿನಗರ ನೋಂದಣಿ ಜಿಲ್ಲೆಯವರು ವಿಚಾರಣೆ ನಡೆಯಿಸಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಈ ಪ್ರಕರಣದಲ್ಲಿಯೂ ಸಹ ನಿವೃತ್ತ ನೌಕರರು ತಮಗೆ ನಿವೇಶನವನ್ನು ಕೊಡುವ ಬಗ್ಗೆ ದೂರನ್ನು ದಾಖಲಿಸಿರುತ್ತಾರೆ ಈ ಬಗ್ಗೆ ಸಂಘಗಳ ನೋಂದಣಾಧಿಕಾರಿಯವರು ಈ ಕೆಳಗೆ ಕಂಡಂತೆ ಆದೇಶವನ್ನು ಮಾಡಿರುತ್ತಾರೆ. "ವಾದಿ ಮತ್ತು ಪ್ರತಿವಾದಿಗಳು ಮಂಡಿಸಿರುವ ವಾದ, ಹೇಳಿಕೆಗಳು ಹಾಗೂ ಪ್ರತಿವಾದಿಗಳು ಸಲ್ಲಿಸಿರುವ ಮುಚ್ಚಳಿಕೆಯನ್ನು ಪರಿಶೀಲಿಸಲಾಯಿತು ವಾದಿಗಳು ನೀಡಿರುವ ದೂರಿನನ್ವಯ ಪ್ರತಿವಾದಿಗಳು ಈಗಾಗಲೇ ಬಾಕಿ ಉಳಿಸಿಕೊಂಡಿರುವ ನಿವೇಶನಗಳಲ್ಲಿ ಅಥವಾ ಆಯುಕ್ತರವರಲ್ಲಿ ಮನವಿ ಸಲ್ಲಿಸಿ ಮಂಜೂರಾಗಲಿರುವ 3 ಎಕರೆ ಜಮೀನಿನಲ್ಲಿ ಇವುಗಳ ಪೈಕಿ ಯಾವುದರಲ್ಲಿ ಹಂಚಿಕೆ ಮಾಡಲಾಗುತ್ತದೆಯೋ ಆ ನಿವೇಶನಗಳನ್ನು ಸದರಿ ನಿವೃತ್ತ ನೌಕರರಿಗೆ ಪ್ರಥಮ ಆದ್ಯತೆ ಮೇರೆಗೆ ನೀಡುವಂತೆ ಆದೇಶಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

17) ಮೇಲ್ಕಂಡ ಎಲ್ಲಾ ವಿಚಾರಣಾಧಿಕಾರಿಗಳ ಆದೇಶದ ಮೇಲೆ ಸೂಕ್ತ ಕ್ರಮವನ್ನು ನಿಯಮಾನುಸಾರ ವೆಲ್‌ಫೇರ್ ಅಸೋಸಿಯೇಷನ್‌ನವರು ತೆಗೆದು ಕೊಳ್ಳಬಹುದಾಗಿರುತ್ತದೆ. ಇದರಿಂದಾಗಿ ಈ ಪ್ರಕರಣದಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯವರನ್ನು ನೇಮಕ ಮಾಡುವ ಸನ್ನಿವೇಶ ಉದ್ಭವವಾಗಿರುವುದಿಲ್ಲವೆಂದು ನಾನು ಅಭಿಪ್ರಾಯ ಪಡುತ್ತಿದ್ದೇನೆ.

18) ಈ ಪ್ರಕರಣದ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಸಂಘಕ್ಕೆ 45 ಎಕರೆಗೆ ಬದಲು 33 ಎಕರೆ 02 ಗುಂಟೆ ಜಾಗವನ್ನು ಹಂಚಿಕೆ ಮಾಡಿದ್ದರಿಂದ ಹಾಗೂ ಕೆಲವು ಜಮೀನಿನ ಬಗ್ಗೆ ತಕರಾರು ಇದ್ದಿದ್ದರಿಂದ, ಸ್ವಲ್ಪ ಭಾಗ ಪಾರ್ಕ್ ರಸ್ತೆ, ಮತ್ತು ಇತರೆ ಸೌಲಭ್ಯಗಳಿಗೆ ಹೋಗಿದ್ದರಿಂದ, ನಿವೇಶನಗಳ ಸಂಖ್ಯೆ ಕಡಿಮೆಯಾಗಿದ್ದರಿಂದ ಹಾಗೂ ಮೇಲಾಧಿಕಾರಿಯವರ ಆದೇಶದಿಂದಾಗಿ ನಿವೃತ್ತ ನೌಕರರಿಗೆ ಹಾಗೂ ಎರವಲು ಸೇವೆ ನೌಕರರಿಗೆ ನಿವೇಶನವನ್ನು ಹಂಚಿಕೆ ಮಾಡಲು ಆಗದೆ ಅವರ ಹಣವನ್ನು ಹಿಂದಕ್ಕೆ ಬಡ್ಡಿ ಸಮೇತ ಹಿಂತಿರುಗಿಸಿರುವುದು ಕಂಡು ಬರುತ್ತದೆ. ಇದರಿಂದಾಗಿ ಯಾರಿಗಾದರೂ ತೊಂದರೆಯಾಗಿದ್ದರೆ ಅವರು ಸೂಕ್ತ ಅಧಿಕಾರಿಗಳ ಜತೆ ಚರ್ಚಿಸಿ ತಮ್ಮ ದೂರಿನ ಬಗ್ಗೆ ಪರಿಹಾರವನ್ನು ಪಡೆಯಬಹುದಾಗಿರುತ್ತದೆ.

181.

51

SOSALE INDUDHARA
*ENQUIRY OFFICER*

No.8, 15th Cross, (Ring Road)
First Floor, J.P. Nagar,
Bangalore-560 078.
Phone: 26596240

---

Dated:

ಸಂಘದವರು ಶ್ರೀ ಬಿ.ಎಂ.ಚಿಕ್ಕಯ್ಯ ಮತ್ತು
19) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೃತ್ತ ನೌಕರರ ಸಂಘದವರು ಶ್ರೀ ಬಿ.ಎಂ.ಚಿಕ್ಕಯ್ಯ ಮತ್ತು
ಶಶಿಧರ್ ಅವರ ಮೇಲೆ ಮಾನ್ಯ ಲೋಕಾಯುಕ್ತರವರಿಗೆ ದೂರನ್ನು ಕೊಟ್ಟು ಅದರಲ್ಲಿ ಮೇಲ್ಕಂಡ ಚಿಕ್ಕಯ್ಯ
ಮತ್ತು ಇತರರು ಇಲ್ಲಸಲ್ಲದ ಸುಳ್ಳು ದೂರುಗಳನ್ನು ನೀಡುತ್ತಾ ಬಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ
ದಾವೆ ಹೂಡಿದ್ದು ದಾವೆಯು ರದ್ದಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಮೇಲ್ಕಂಡ ಶ್ರೀ ಚಿಕ್ಕಯ್ಯ ಮತ್ತು
ಶಶಿಧರ್ ಅವರು ನಿವೇಶನ ನೀಡುತ್ತೇವೆಂದು ಹಣ ವಸೂಲಿ ಮಾಡಿ ಅವರಿಗೆ ವಿತರಿಸಲಾಗದೆ ಸುಳ್ಳು
ದೂರನ್ನು ನೀಡುತ್ತಿರುವ ಇಬ್ಬರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿರುವುದು ಕಂಡು
ಬಂದಿರುತ್ತದೆ. ಇದರಿಂದಾಗಿ ಹಾಗೂ ನಿವೃತ್ತ ನೌಕರರು ನೀಡಿರುವ ದೂರುಗಳ ಬಗ್ಗೆ ಈಗಾಗಲೇ ನೀಡಿರುವ
ಕಾರಣಗಳಿಂದಾಗಿ ನಿವೃತ್ತ ನೌಕರರು ಹಾಜರು ಪಡಿಸಿರುವ ದಾಖಲೆಗಳಿಗೆ ಹೆಚ್ಚಿನ ಮಹತ್ವವನ್ನು ಈ
ಹಂತದಲ್ಲಿ ಕೊಡಬೇಕಾಗಿಲ್ಲವೆಂದು ನಾನು ಅಭಿಪ್ರಾಯಪಡುತ್ತಿದ್ದೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ
ನೌಕರರ ಕ್ಷೇಮಾಭಿವೃದ್ಧಿ ಸಂಘದ ವಿರುದ್ಧ ನಿವೃತ್ತ ನೌಕರರು ಮಾಡಿರುವ ಆಪಾದನೆಗಳ ಬಗ್ಗೆ ಪೂರಕ
ದಾಖಲೆಗಳನ್ನು ಪರಿಶೀಲಿಸಲಾಗಿ ಆಪಾದನೆಗಳಲ್ಲಿ ಹುರುಳಿಲ್ಲ ಎಂದು ಕಂಡು ಬಂದಿರುತ್ತದೆ.

20) ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ್ದೇನೆ. ಈ
ಪ್ರಕರಣದ ಎಲ್ಲಾ ಹಂಚಿಕೆ ಪ್ರಕ್ರಿಯೆಗಳು ಸರ್ವ ಸದಸ್ಯರ ಸಭೆಯ ತೀರ್ಮಾನ ಮತ್ತು ಕಾರ್ಯಕಾರಿ
ಸಮಿತಿಯಲ್ಲಿ ಚರ್ಚಿಸಿ ತೆಗೆದುಕೊಂಡ ತೀರ್ಮಾನದಂತೆ ಹಂಚಿಕೆ ಮಾಡಿರುವುದು ಕಂಡು ಬರುತ್ತದೆ.
ಪ್ರಾಧಿಕಾರವು ನೌಕರರ ಸಂಘದಿಂದ ಪೂರ್ಣ ಹಣ ಪಡೆದ ನಂತರ ಮಾನ್ಯ ಆಯುಕ್ತರು ಜಮೀನನ್ನು
ಕೊಟ್ಟಿರುತ್ತಾರೆ. ನಿವೇಶನ ಹಂಚಿಕೆಯಲ್ಲಿ ತೊಂದರೆಯಾಗಬಾರದೆಂದು ತಕರಾರು ಮಾಡುತ್ತಿದ್ದ ಜಮೀನಿನ
ಮಾಲೀಕರ ಜತೆ ಕಾರ್ಯಕಾರಿ ಸಭೆಯ ಆದೇಶದಂತೆ ಒಪ್ಪಂದ ಮಾಡಿಕೊಂಡು ವಿವೇಚನಾ ಕೋಟಾದ
ಕೆಳಗೆ ನಿಯಮಾನುಸಾರ ಕ್ರಮತೆಗೆದುಕೊಂಡಿದ್ದು ಇದರಲ್ಲಿ ಯಾವುದೇ ಲೋಪದೋಷ ಕಂಡುಬರುತ್ತಿಲ್ಲ.
ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಈ ಪ್ರಕರಣದಲ್ಲಿ ಆಡಳಿತಾಧಿಕಾರಿಯವರನ್ನು ನೇಮಿಸುವ ಸಂದರ್ಭ
ಉದ್ಭವಿಸಿರುವುದಿಲ್ಲವೆಂದು ಅಭಿಪ್ರಾಯಪಟ್ಟು ಈ ವರದಿಯನ್ನು 18.05.2016ರಂದು ಸಲ್ಲಿಸಲಾಗಿದೆ.

(ಸೋಸಲೆ ಇಂದೂಧರ್) 18/5/16

(ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು)

ವಿಚಾರಣಾಧಿಕಾರಿ ಶ್ರೀ ಎಸ್.ಸಿ. ಇಂಗಳಗಿ ನಿವೃತ್ತ ಜಿಲ್ಲಾ ನ್ಯಾಯಾಧೀಶರ ಸಮಕ್ಷಮ

ವಿಚಾರಣೆ ಎಸ್.ಸಿ.ಐ 14/17

(ಸರ್ಕಾರದ ಆದೇಶ ಸಂಖ್ಯೆ: ನಅಇ 26 ನಸಂನೋ 2016 ಬೆಂಗಳೂರು ದಿನಾಂಕ: 19/05/2017)

ಕರ್ನಾಟಕ ಸರಕಾರದ
ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ
ವಿಕಾಸ ಸೌಧ ಬೆಂಗಳೂರು.

.. ಶಿಸ್ತು ಪ್ರಾಧಿಕಾರ

ವಿರುದ್ಧ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೌಕರರ
ಕ್ಷೇಮಾಭಿವೃದ್ಧಿ ಸಂಘ.

...ಆರೋಪಿತರು

## ವಾಸ್ತುವಾಂಶ ಶೋಧನಾ (ವಸ್ತು ನಿಷ್ಠ) ವರಧಿ

1] ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ತಮ್ಮ ಆದೇಶ ಸಂಖ್ಯೆ ನಅಇ 26 ನಸಂನೋ 2016 ಬೆಂಗಳೂರು ದಿನಾಂಕ: 19/05/2017 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಕ್ಷೇಮಾಭಿವೃದ್ಧಿ ಸಂಘದಲ್ಲಿ ಅವ್ಯವಹಾರಗಳ ನಡೆದಿದ್ದು ಶ್ರೀ. ಬಿ.ಎಂ. ಚಿಕ್ಕಯ್ಯ ಮತ್ತು ಇತರರು ದಿನಾಂಕ: 23/06/2016 ರಂದು ಸಲ್ಲಿಸಿದ ದೂರನಲ್ಲಿನ 31 ಆರೋಪಗಳ ಕುರಿತು ವಿಚಾರಣೆ ನಡೆಸಿ ವಸ್ತು ನಿಷ್ಠ ವರದಿಯನ್ನು ಸಲ್ಲಿಸಲು ಸೂಚಿಸಿದ್ದಾರೆ.

2] ಶ್ರೀ. ಬಿ.ಎಮ್ ಚಿಕ್ಕಯ್ಯಾ ಮತ್ತು ಶ್ರೀ. ಡಿ.ಎಲ್. ಪಾಂಡುರಂಗರಾವ್ ಇವರಿಗೆ ನನ್ನ ಮುಂದೆ ಹಾಜರಾಗಿ ತಮ್ಮ ದೂರಿಗೆ ಸಂಬಂಧಿಸಿದಂತೆ ಹೇಳಿಕೆ ನೀಡಲು ಸೂಚಿಸಿದ್ದು ಅದರಂತೆ ಅವರಿರ್ವರು ನನ್ನ ಮುಂದೆ ಹಾಜರಾಗಿದ್ದಾರೆ. ಶ್ರೀ. ಬಿ.ಎಮ್. ಚಿಕ್ಕಯ್ಯಾ ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ಮತ್ತು ದೂರಿಗೆ ಸಹಕಾರಿಯಾಗಿ 35 ದಸ್ತಾವೇಜುಗಳನ್ನು ನಿಶಾನೆ ಪಿ1 ರಿಂದ 35 ಎಂದು ಗುರುತಿಸಲಾಗಿದೆ.

3] ಶ್ರೀ. ಬಿ.ಎಮ್. ಚಿಕ್ಕಯ್ಯಾ ಮತ್ತು ಇತರರು ಸಲ್ಲಿಸಿದ ದೂರನ್ನು ನಿಶಾನೆ ಪಿ18 ಎಂದು ಗುರುತಿಸಲಾಗಿದೆ. ಅದರ ಝರಾಕ್ಸ್ ಪ್ರತಿಯು ಪುಟ 2 ರಿಂದ 22 ರಂತೆ ಇದೆ. ಆ ದೂರಿನಲ್ಲಿ ಒಟ್ಟು 31 ಆರೋಪಗಳನ್ನು ಮಾಡಿದ್ದು ಆ ಆರೋಪಗಳಲ್ಲಿ ವಾಸ್ತವಿಕ ಸತ್ಯಾಂಶ ಇದೆಯೋ? ಎಂಬುದನ್ನು ಶೋಧಿಸೋಣ.

49 1

ಶ್ರೀಯುತ ಹೆಚ್.ಎಸ್. ಮಹದೇವ್ ಪ್ರಸಾದ್‌ರವರ ಸನ್ನಿಧಿಗೆ
ಮಾನ್ಯ ಸಹಕಾರ ಸಚಿವರು
ಕರ್ನಾಟಕ ಸರ್ಕಾರ, ವಿಧಾನ ಸೌಧ
ಬೆಂಗಳೂರು-560 001.

ದಿನಾಂಕ: 23-06-2[illegible]

ಸನ್ಮಾನ್ಯರೇ,

ವಿಷಯ:: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್‌ನಲ್ಲಿ ನಿವೇಶನ ಹಂಚಿಕೆಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ನಾವು ಸಲ್ಲಿಸಿರುವ ನೈಜ ದಾಖಲಾತಿಗಳ ಆಧಾರದ ಮೇಲೆ ಅಸೋಸಿಯೇಷನ್‌ಗೆ ಆಡಳಿತಾಧಿಕಾರಿ ಅಥವಾ ಮತ್ತೊಮ್ಮೆ ವಿಚಾರಣಾಧಿಕಾರಿಯನ್ನು ನೇಮಿಸಿ ಸಮಗ್ರ ತನಿಖೆ ನಡೆಸಿ ನ್ಯಾಯ ಒದಗಿಸುವಂತೆ ಅಪೀಲು ಅರ್ಜಿ ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ 1) ಮಾನ್ಯ ಲೋಕಾಯುಕ್ತರವರ ಆದೇಶದ ಮೇರೆಗೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ರವರು ಅಪರ ನೋಂದಣಾಧಿಕಾರಿ ಶ್ರೀ ಶಿವನಂಜಯ್ಯ ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ನಡೆಸಿದ ತನಿಖೆಯ ವರದಿ.

2) ಪ್ರಾಧಿಕಾರದ ನಿವೃತ್ತ ನೌಕರರ ದೂರು ಅರ್ಜಿಯ ಆಧಾರದ ಮೇಲೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ರವರು ಉಪ ನೋಂದಣಾಧಿಕಾರಿ ಶ್ರೀ ನಾರಾಯಣಪ್ಪನವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ನಡೆಸಿದ ತನಿಖೆಯ ವರದಿ.

3) ಉಲ್ಲೇಖ (1) ಮತ್ತು (2)ರ ತನಿಖಾ ವರದಿಗಳನ್ನು ಕಡೆಗಣಿಸಿ, **ಪ್ರಾಧಿಕಾರದಲ್ಲಿಯೇ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹಾಯಕ** ಕಾನೂನು ಅಧಿಕಾರಿ ಶ್ರೀ ಇಂದೂಧರ್ ರವರನ್ನು ದಿನಾಂಕ 20/04/2016ರಂದು ತನಿಖಾಧಿಕಾರಿಯನ್ನಾಗಿ ನೇಮಿಸಿರುವ ಆದೇಶ.

4) ಶ್ರೀ ಇಂಧೂದರ್‌ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ ಆದೇಶವನ್ನು ರದ್ದು ಮಾಡುವಂತೆ ಕೋರಿ ನಾವು ಕಂದಾಯ ಇಲಾಖೆಗೆ ನೀಡಿದ ಅರ್ಜಿ ದಿನಾಂಕ 27/04/2016.

5) ಪ್ರಾಧಿಕಾರದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹಾಯಕ ಕಾನೂನು ಅಧಿಕಾರಿ ಶ್ರೀ ಇಂದೂಧರ್ ರವರು ಅಸೋಸಿಯೇಷನ್‌ನವರೊಡನೆ ಶಾಮೀಲಾಗಿ ತನಿಖೆ ನಡೆಸಿ ಕೊಟ್ಟಿರುವ ವರದಿಯನ್ನಾಧರಿಸಿ ದಿನಾಂಕ 28/05/2016ರಂದು ಕಂದಾಯ ಇಲಾಖೆ ಹೊರಡಿಸಿರುವ ಆದೇಶ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬಿಡಿಎ ನಿವೃತ್ತ ನೌಕರರಾದ ಬಿ.ಎಂ. ಚಿಕ್ಕಯ್ಯ ಹಾಗೂ ಇತರರು ಆದ ನಾವುಗಳೆಲ್ಲರೂ ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಮರುತನಿಖೆ ನಡೆಸುವ ಬಗ್ಗೆ ತಮ್ಮಲ್ಲಿ ವಿನಂತಿಸುವುದೇನೆಂದರೆ,

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘ (BDA Employees Assoiciation)ವು ಕಂದಾಯ ಇಲಾಖೆಯ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರಡಿಯಲ್ಲಿ ಸಂಖ್ಯೆ: 435/78-79ರಂತೆ ದಿನಾಂಕ 01/02/1979ರಲ್ಲಿ ನೋಂದಣಿಯಾಗಿರುತ್ತದೆ. ಸಂಘವು ಸ್ಥಾಪನೆಯಾದಾಗಿನಿಂದಲೂ ಪರಿಷ್ಕೃತಗೊಳ್ಳುವ

ರೂ.3. ರೂ.6, ಪ್ರಸ್ತುತ ರೂ.25 ಗಳಂತೆ ಪ್ರಾಧಿಕಾರದ ನೌಕರರ ವೇತನದಲ್ಲಿ ಕಟಾವು ಮಾಡಲಾಗುತ್ತಿರುತ್ತದೆ *ಅದರಂತೆ ಪ್ರಾಧಿಕಾರದ ನೌಕರರಾದ ನಮ್ಮಗಳ ಸಂಬಳದಲ್ಲಿ ಪ್ರತಿ ತಿಂಗಳು ಹಣ ಕಟಾವುಗೊಳಿಸಲಾಗುತ್ತಿತ್ತು.*

ಇನ್ನು ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘ (BDA Employees Welfare Associaion) ವು ಕಂದಾಯ ಇಲಾಖೆಯ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರಡಿಯಲ್ಲಿ ಸಂಖ್ಯೆ: 653/2001-02ರಂತೆ ದಿನಾಂಕ 20/10/2001ರಲ್ಲಿ ನೋಂದಣಿಯಾಗಿರುತ್ತದೆ.

*ಈ ಎರಡೂ ಸಂಘಗಳ ಬೈಲಾಗಳ ಪ್ರಕಾರ ಪ್ರಾಧಿಕಾರದ ಹಾಲಿ ಮತ್ತು ನಿವೃತ್ತ ನೌಕರರು ಮಾತ್ರ ಸದಸ್ಯತ್ವ ಪಡೆಯಲು ಅವಕಾಶವಿದ್ದು, ಇತರರ್ಯಾರೂ ಸಂಘದ ಸದಸ್ಯತ್ವ ಪಡೆಯಲು ಅವಕಾಶವಿರುವುದಿಲ್ಲ. (ಎರಡೂ ಸಂಘಗಳ ಬೈಲಾ ಪ್ರತಿಗಳನ್ನು ಲಗತ್ತಿಸಿದೆ – ಅನುಬಂಧ 1).*

ಕರ್ನಾಟಕ ಸುವರ್ಣ ರಾಜ್ಯೋತ್ಸವದ ಪ್ರಯುಕ್ತ ಹಂಚಿಕೆ ನಿಯಮಾವಳಿಗಳನ್ನು ಸಡಿಲಿಸಿ, ಪ್ರಾಧಿಕಾರದ ಗ್ರೂಪ್ ಸಿ ಮತ್ತು ಗ್ರೂಪ್ ಡಿ ನೌಕರರಿಗೆ ಮಾತ್ರ ರಿಯಾಯಿತಿ ದರದಲ್ಲಿ ನಿವೇಶನ ರಚಿಸಿ ಹಂಚಿಕೆ ಮಾಡಲು 45 ಎಕರೆ ಜಮೀನನ್ನು ನೀಡುವಂತೆ ಪ್ರಾಧಿಕಾರದ ನೌಕರರ ಸಂಘವು ಕೋರಿದ್ದು, ***ಪ್ರಾಧಿಕಾರದ ಗ್ರೂಪ್ ಸಿ ಮತ್ತು ಗ್ರೂಪ್ ಡಿ ನೌಕರರಿಗೆ ರಿಯಾಯಿತಿ ದರದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲು*** ಅನುವಾಗುವಂತೆ ಪ್ರಾಧಿಕಾರದ ನೌಕರರ ಕ್ಷೇಮಾಭಿವೃದ್ಧಿ ಸಂಘದ ಪರವಾಗಿ 45 ಎಕರೆ ಜಮೀನನ್ನು ಸಗಟಾಗಿ ಹಂಚಿಕೆ ಮಾಡುವ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ನಿರ್ಣಯ ಕೈಗೊಂಡ ನಂತರ ಸರ್ಕಾರದ ಅನುಮತಿ ಕೋರಿ ಪ್ರಾಧಿಕಾರದ ಆಯುಕ್ತರು ದಿನಾಂಕ 12/01/2006ರಂದು ಸರ್ಕಾರಕ್ಕೆ ಬರೆದ ಪತ್ರದಲ್ಲಿ ತಿಳಿಸಿರುತ್ತಾರೆ. ***(ಪ್ರತಿ ಲಗತ್ತಿಸಿದೆ – ಅನುಬಂಧ 02).*** ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ***ಜಮೀನು ಹಂಚಿಕೆಗೆ ಮನವಿಯನ್ನು ಪ್ರಾಧಿಕಾರದ ನೌಕರರ ಸಂಘವು ನೀಡಿದ್ದು, ಮನವಿಯಲ್ಲಿ ಪ್ರಾಧಿಕಾರದ ನೌಕರರ ಕ್ಷೇಮಾಭಿವೃದ್ಧಿ ಸಂಘದ ಪರವಾಗಿ 45 ಎಕರೆ ಜಮೀನನ್ನು ಸಗಟು ಹಂಚಿಕೆ ಮಾಡಬೇಕೆಂದು ತಿಳಿಸಿ, ಗೊಂದಲಮಯ ವಾತಾವರಣ ನಿರ್ಮಿಸಿರುವುದನ್ನು ತಿಳಿಯಬಹುದಾಗಿರುತ್ತದೆ.***

*ಪ್ರಾಧಿಕಾರದ ನೌಕರರ ಸಂಘವು ಕೋರಿಕೆ ಸಲ್ಲಿಸಿದ್ದ ಮನವಿಯನ್ನು ಪರಿಗಣಿಸಬೇಕೆಂಬ ಪ್ರಸ್ತಾವನೆಯನ್ನು ಆಯುಕ್ತರು ಪ್ರಾಧಿಕಾರದ ಸಭೆಯಲ್ಲಿ ನಿರ್ಣಯ ತೆಗೆದುಕೊಂಡು ಸರ್ಕಾರಕ್ಕೆ ಸಲ್ಲಿಸಿದ್ದು, ಈ ಪ್ರಸ್ತಾವನೆಗೆ ಸರ್ಕಾರವು ದಿನಾಂಕ 19/04/2006ರಂದು ತಾತ್ವಿಕ ಅನುಮೋದನೆ ನೀಡಿ, ಪ್ರಾಧಿಕಾರದ ಅದರ ನೌಕರರಿಗೆ ಮಾತ್ರ ನಿವೇಶನ ರಚಿಸಿ ಹಂಚಿಕೆ ಮಾಡಲು ಆಯುಕ್ತರಿಗೆ ಪತ್ರ ಬರೆದಿದ್ದು, ಇದರ ಪ್ರತಿಯನ್ನು ಪ್ರಾಧಿಕಾರದ ನೌಕರರ ಸಂಘಕ್ಕೆ ಕಳುಹಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ – ಅನುಬಂಧ 03).* ಅಂದರೆ ಸರ್ಕಾರದ ಆದೇಶದಲ್ಲಿ *"ಪ್ರಾಧಿಕಾರದ ನೌಕರ ಸಂಘಕ್ಕೆ ಅದರ ನೌಕರರಿಗೆ ನಿವೇಶನಗಳನ್ನು ಹಂಚುವ ಸಲುವಾಗಿ" ಎಂದು ಆದೇಶ ಮಾಡಿದ್ದು, ಇದು ಪ್ರಾಧಿಕಾರದ ಹಾಲಿ ಮತ್ತು ನಿವೃತ್ತ ನೌಕರರುಗಳಿಗೆ ಮಾತ್ರ ಅನ್ವಯವಾಗುತ್ತದೆ.* ಏಕೆಂದರೆ ಪ್ರಾಧಿಕಾರದ ನೌಕರರ ಸಂಘವು

ಸ್ಥಾಪನೆಯಾದಾಗಿನಿಂದಲೂ ಜಮೀನು ಹಂಚಿಕೆ ಮಾಡಬೇಕೆಂದು ಮನವಿ ಮಾಡುತ್ತಿದ್ದು, ಪ್ರಸ್ತುತ ನಾವುಗಳು ನಿವೃತ್ತರಾಗಿದ್ದು, ಹಿಂದೆ ನಾವು ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನಮ್ಮಗಳ ವೇತನದಲ್ಲಿಯೂ ಸಂಘದಿಂದ ಮಾಸಿಕ ಹಣವನ್ನು ಕಟಾವು ಮಾಡಲಾಗುತ್ತಿತ್ತು. ಮೇಲಾಗಿ ಪ್ರಾಧಿಕಾರದ ನೌಕರರು ನಿವೇಶನ ಹಂಚಿಕೆ ಮಾಡಬೇಕೆಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

ಈ ರೀತಿ ಪ್ರಾಧಿಕಾರದ ನೌಕರರುಗಳಿಗೆ ಮಾತ್ರ ರಿಯಾಯಿತಿ ದರದಲ್ಲಿ ನಿವೇಶನ ರಚಿಸಿ ಹಂಚಿಕೆ ಮಾಡಲು 45 ಎಕರೆ ಸಗಟು ಜಮೀನು ನೀಡಲು ಸರ್ಕಾರದಿಂದ ಅನುಮೋದನೆ ಪಡೆದ ನಂತರ, ಪ್ರಾಧಿಕಾರದ ಆಯುಕ್ತರು ಜೆ.ಪಿ. ನಗರ 9ನೇ ಹಂತದ ಬಡಾವಣೆ ನಿರ್ಮಾಣ ಮಾಡಲು ಪ್ರಾಧಿಕಾರವು ಸ್ವಾಧೀನಪಡಿಸಿಕೊಂಡಿದ್ದಂತಹ *ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.15(ಪಿ), 16(ಪಿ) ಮತ್ತು 17(ಪಿ)ಗಳಲ್ಲಿ ಒಟ್ಟು 33 ಎಕರೆ 02 ಗುಂಟೆ ಸರ್ಕಾರಿ ಗೋಮಾಳದ ಜಮೀನನ್ನು ನೌಕರರ ಸಂಘಕ್ಕೆ ದಿನಾಂಕ 04/09/2006ರಂದು ಬಿಡುಗಡೆ ಮಾಡಿ, ನಂತರ ಕ್ಷೇಮಾಭಿವೃದ್ಧಿ ಸಂಘಕ್ಕೆ ಪ್ರಾಧಿಕಾರದಿಂದ ಕ್ರಯಪತ್ರ ಮಾಡಿಕೊಡಲಾಗಿರುತ್ತದೆ. (ಪ್ರಾಧಿಕಾರದಿಂದ ಜಮೀನು ಬಿಡುಗಡೆಗೊಳಿಸಿದ ಪತ್ರದ ಪ್ರತಿ ಹಾಗೂ ಸ್ವಾಧೀನ ಪತ್ರದ ಪ್ರತಿಗಳನ್ನು ಲಗತ್ತಿಸಿದೆ – ಅನುಬಂಧ 04). ತದನಂತರ ಅಲ್ಲಿ ಲಭ್ಯವಿದ್ದ ಜಮೀನು 27 ಎಕರೆ 15½ ಗುಂಟೆ ಮಾತ್ರ ಎಂದು ದಿನಾಂಕ 12/06/2013ರಂದು ತಿದ್ದುಪಡಿ ಕ್ರಯಪತ್ರ ನೋಂದಣಿ ಮಾಡಿಕೊಡಲಾಗಿರುತ್ತದೆ. (ತಿದ್ದುಪಡಿ ಕ್ರಯಪತ್ರದ ಪ್ರತಿ ಲಗತ್ತಿಸಿದೆ – ಅನುಬಂಧ 05). ಈ ಜಮೀನಿನ ವಿಸ್ತೀರ್ಣದ ಲಭ್ಯತೆ ಕಡಿಮೆ ಇದೆ ಎಂದು ಯಾರು ಯಾವ ಆಧಾರದಲ್ಲಿ ನಿರ್ಣಯ ಮಾಡಿದ್ದಾರೆಂದು ತಿಳಿದು ಬರುತ್ತಿಲ್ಲ. ಈ ಜಮೀನಿನ ವಿಸ್ತೀರ್ಣವನ್ನು ಸರ್ವೆ ಮಾಡಿಸಿರುವ ಬಗ್ಗೆ ತಿಳಿಯುತ್ತಿಲ್ಲ. ಈ ತಿದ್ದುಪಡಿಯನ್ನು ಯಾವ ಆಧಾರದಲ್ಲಿ ಮಾಡಲಾಗಿದೆ ಮತ್ತು ಸರ್ವೆ ಮಾಡಿಸಲಾಗಿದೆಯೇ? ಎಂಬಿತ್ಯಾದಿ ಮಾಹಿತಿಗಳು ಲಭ್ಯವಿಲ್ಲ.*

ಜಮೀನು ಬಿಡುಗಡೆಯಾದ ನಂತರ *ಪ್ರಾಧಿಕಾರದ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸುತ್ತೋಲೆ ಹೊರಡಿಸಿ, ಸದಸ್ಯತ್ವ ಶುಲ್ಕ ರೂ.1,050/– ಮತ್ತು ಮೊದಲ ಕಂತು ರೂ.75,000/–ಗಳನ್ನು ಪಾವತಿ ಮಾಡಬೇಕೆಂದು ಹಾಗೂ ಲಾಟರಿ ಮೂಲಕ ಮೊದಲ ಹಂತದಲ್ಲಿ ಹಂಚಲಾಗುವ ನಿವೇಶನಗಳನ್ನು ನೀಡಲಾಗುವುದೆಂದು ದಿನಾಂಕ 6/10/2006ರಲ್ಲಿ ತಿಳಿಸಲಾಗಿರುತ್ತದೆ.* ಇದಾದ ನಂತರ ದಿನಾಂಕ 27/11/2006ರಂದು ಎರಡನೆ ಕಂತು ರೂ.75,000/–ಗಳನ್ನು ಪಾವತಿಸಬೇಕೆಂದು ಎರಡನೆ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. *(ಎರಡು ಬಾರಿ ಹೊರಡಿಸಿರುವ ಸುತ್ತೋಲೆಗಳ ಪ್ರತಿಗಳನ್ನು ಲಗತ್ತಿಸಿದೆ – ಅನುಬಂಧ 06).*

ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಹೊರಡಿಸಿದ ಸುತ್ತೋಲೆಯಂತೆ *ಆ ಸಮಯದಲ್ಲಿ ನಮ್ಮಲ್ಲಿ ಕೆಲವರು ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರು ಹಾಗೂ ಇನ್ನೂ ಕೆಲವರು ನಿವೃತ್ತರಾಗಿದ್ದವರೆಲ್ಲರೂ ಸದಸ್ಯತ್ವ ಶುಲ್ಕ*

ರೂ.1,050/- ಮತ್ತು ಎರಡು ಕಂತುಗಳ ಹಣ ಒಟ್ಟು ರೂ.1,50,000/-ಗಳನ್ನು ನಿವೇಶನಕ್ಕಾಗಿ ಅಸೋಸಿಯೇಷನ್‌ಗೆ ಪಾವತಿಸಿರುತ್ತೇವೆ. (ಸದಸ್ಯತ್ವ ಅರ್ಜಿ ಮತ್ತು ಹಣ ಪಾವತಿಸಿರುವ ರಸೀದಿಗಳನ್ನು ಲಗತ್ತಿಸಿದೆ – ಅನುಬಂಧ 07).

ಈ ನಡುವೆ ದಿನಾಂಕ 20/12/2006ರಲ್ಲಿ ಪ್ರಾಧಿಕಾರವು ನಿವೇಶನ ಹಂಚಿಕೆ ಮಾಡುವಾಗ " ಹಂಚಿಕೆ ಪತ್ರದಲ್ಲಿ 2 ಷರತ್ತುಗಳನ್ನು ವಿಧಿಸಿದ್ದು, ಮೊದಲನೆಯ ಷರತ್ತಾಗಿ ಹಂಚಿಕೆದಾರರ ಮತ್ತು ಪತ್ನಿಯ ಹೆಸರನ್ನು ಸೇರಿಸಿ ಹಂಚಿಕೆ ಪತ್ರವನ್ನು ನೀಡತಕ್ಕದ್ದು ಹಾಗೂ ಹಂಚಿಕೆದಾರಳಾಗಿದ್ದಲ್ಲಿ ಅವರ ಪತಿಯ ಹೆಸರನ್ನು ಸೇರಿಸಿ ಜಂಟಿ ಹೆಸರಿಗೆ ಹಂಚಿಕೆ ಪತ್ರವನ್ನು ನೀಡತಕ್ಕದ್ದು ಮತ್ತು 2ನೆಯ ಷರತ್ತಾಗಿ ಹತ್ತು ವರ್ಷಗಳ ಗುತ್ತಿಗೆ ಅವಧಿಯನ್ನು ನಿಗದಿಪಡಿಸುವುದು " ಎಂಬ ಎರಡು ಷರತ್ತುಗಳನ್ನು ವಿಧಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ – ಅನುಬಂಧ 08).

ದೊಡ್ಡಕಲ್ಲಸಂದ್ರ ಗ್ರಾಮದಲ್ಲಿ 27 ಎಕರೆ 15½ ಗುಂಟೆ ಸರ್ಕಾರಿ ಗೋಮಾಳದ ಜಮೀನನ್ನು ಪ್ರಾಧಿಕಾರದಿಂದ ಬಿಡುಗಡೆ ಮಾಡಲಾಗಿರುತ್ತದೆ. ಪ್ರಾಧಿಕಾರದ ಅಧಿಕೃತ ಅನುಮೋದಿತ ನಕ್ಷೆಯಂತೆ ದೊಡ್ಡಕಲ್ಲಸಂದ್ರ ಗ್ರಾಮದ 27 ಎಕರೆ 15½ ಗುಂಟೆ ಜಮೀನಿನಲ್ಲಿ ಪ್ರಾಧಿಕಾರದ ಅನುಮೋದಿತ ನಕ್ಷೆಯಂತೆ 9.14 x 12.20 ಮೀಟರ್ (30 x 40 ಅಡಿ) ಅಳತೆಯ 421 ನಿವೇಶನಗಳು, 7.62 x 12.20 ಮೀಟರ್ (25 x 40 ಅಡಿ) ಅಳತೆಯ 026 ನಿವೇಶನಗಳು, 7.62 x 9.14 ಮೀಟರ್ (25 x 40 ಅಡಿ) ಅಳತೆಯ 07 ನಿವೇಶನಗಳು ಮತ್ತು 113 ವಿವಿಧ ಅಳತೆಯ ಬೆಸ/ಕೋಚೆ/ಮೂಲೆ ನಿವೇಶನಗಳನ್ನು ಸೇರಿ ಒಟ್ಟು 567 ನಿವೇಶನಗಳನ್ನು ರಚಿಸಲಾಗಿರುತ್ತದೆ. ಪ್ರಾಧಿಕಾರದಿಂದ ರಿಯಾಯಿತಿ ದರದಲ್ಲಿ ಬಿಡುಗಡೆ ಮಾಡಿದ ಜಮೀನಿನಲ್ಲಿ ರಚಿತವಾದ ನಿವೇಶನಗಳನ್ನು ಕೇವಲ ಕೆಲವೇ ಪ್ರಾಧಿಕಾರದ ಅಧಿಕಾರಿ/ನೌಕರರಿಗೆ ಹಂಚಿಕೆ ಮಾಡಿ, ಬಹುತೇಕ ನಿವೇಶನಗಳನ್ನು ಅನರ್ಹರಿಗೆ ಹಂಚಿಕೆ ಮಾಡಲಾಗಿರುತ್ತದೆ. ಈ 27 ಎಕರೆ 15½ ಗುಂಟೆ ಜಮೀನಿನಲ್ಲಿ ಪ್ರಾಧಿಕಾರದ ಕಾನೂನಿನಂತೆ ಪಾರ್ಕ್, ಆಟದ ಮೈದಾನ, ಸಿ.ಎ ನಿವೇಶನವನ್ನು ಅಸೋಸಿಯೇಷನ್‌ನವರು ಬಿಟ್ಟಿರುವುದಿಲ್ಲ. ಆದರೆ ಈ ಜಾಗದಲ್ಲಿ ಬಿಡಬೇಕಾದ ಪಾರ್ಕ್ ಅನ್ನು ಪ್ರಾಧಿಕಾರವು ಸ್ವಾಧೀನಪಡಿಸಿಕೊಂಡಿದ್ದ ಸರ್ವೆ ನಂ.19ರ ಜಮೀನಿನಲ್ಲಿ ಬಿಡಲಾಗಿದೆ. ಈ ಸರ್ವೆ ನಂ.19 ಪ್ರಾಧಿಕಾರದ ವತಿಯಿಂದ ಅಸೋಸಿಯೇಷನ್‌ಗೆ ಇದುವರೆಗೂ ನೋಂದಣಿಯಾಗಿರುವುದಿಲ್ಲ. (ದೊಡ್ಡಕಲ್ಲಸಂದ್ರ ಗ್ರಾಮದ ಬಡಾವಣೆಯ ಪ್ರಸ್ತಾವಿತ ಮತ್ತು ಪರಿಷ್ಕೃತವಾಗಿ ಅನುಮೋದನೆಗೊಂಡಿರುವ ನಕ್ಷೆಗಳು – ಅನುಬಂಧ 09).

ನಂತರ ಪ್ರಾಧಿಕಾರದ ನಿವೃತ್ತ ನೌಕರರಿಗೆ ಮಾತ್ರ ಲಿಂಗಧೀರನಹಳ್ಳಿ ಗ್ರಾಮದಲ್ಲಿ ನಂತರದ ಹಂತಗಳಲ್ಲಿ ಬಿಡುಗಡೆಯಾಗುವ 7 ಎಕರೆ, 5 ಎಕರೆ ಮತ್ತು ನಂತರದ 3 ಎಕರೆ ಜಮೀನುಗಳಲ್ಲಿ ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಲಾಗುವುದು ಎಂಬ ಬಗ್ಗೆ ಸಂಘದ ವತಿಯಿಂದ ಹಿಂಬರಹ ನೀಡಲಾಗಿರುತ್ತದೆ. (ಅಸೋಸಿಯೇಷನ್ ವತಿಯಿಂದ ನಿವೃತ್ತ ನೌಕರರಿಗೆ ನೀಡಿರುವ ಹಿಂಬರಹಗಳ ಪ್ರತಿ ಲಗತ್ತಿಸಿದೆ – ಅನುಬಂಧ 10).

ಪ್ರಾಧಿಕಾರವು ಬನಶಂಕರಿ 6ನೇ ಹಂತದ ಬಡಾವಣೆ ನಿರ್ಮಾಣ ಮಾಡಲು ಸ್ವಾಧೀನಪಡಿಸಿಕೊಂಡಿದ್ದ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂ. 6, 6(ಪಿ) ಮತ್ತು 7(ಪಿ) ಗಳಲ್ಲಿ ಪ್ರಾಧಿಕಾರದ ವತಿಯಿಂದ ಮೊದಲನೆಯ ಹಂತವಾಗಿ 7 ಎಕರೆ, 2ನೇ ಹಂತವಾಗಿ 5 ಎಕರೆ ಮತ್ತು 3ನೇ ಹಂತದಲ್ಲಿ 3 ಎಕರೆ ಜಮೀನು ಸೇರಿ ಒಟ್ಟು 15 ಎಕರೆ ಸರ್ಕಾರಿ ಹಾಗೂ ಹಿಡುವಳಿ ಜಮೀನನ್ನು ಅಸೋಸಿಯೇಷನ್‌ಗೆ ಬಿಡುಗಡೆ ಮಾಡಲಾಗಿರುತ್ತದೆ. *(ಲಿಂಗಧೀರನಹಳ್ಳಿಯಲ್ಲಿ ಮೂರು ಹಂತಗಳಲ್ಲಿ ಬಿಡುಗಡೆಗೊಂಡ ಜಮೀನಿನ ಮೂರು ಸ್ವಾಧೀನ ಪತ್ರಗಳನ್ನು ಲಗತ್ತಿಸಿದೆ – ಅನುಬಂಧ 11).*

ಪ್ರಾಧಿಕಾರದ ಅಧಿಕೃತ ಅನುಮೋದಿತ ನಕ್ಷೆಯಂತೆ ಒಟ್ಟು ಲಿಂಗಧೀರನಹಳ್ಳಿ ಗ್ರಾಮದ 15 ಎಕರೆ ಸರ್ಕಾರಿ ಹಾಗೂ ಹಿಡುವಳಿ ಜಮೀನಿನಲ್ಲಿ 9.14 x 12.10 ಮೀಟರ್ (30 x 40 ಅಡಿ) ಅಳತೆಯ 221 ನಿವೇಶನಗಳು, 9.14 x 10.06 ಮೀಟರ್ (30 x 35 ಅಡಿ) ಅಳತೆಯ 032 ನಿವೇಶನಗಳು, 9.14 x 9.14 ಮೀಟರ್ (30 x 30 ಅಡಿ) ಅಳತೆಯ 08 ನಿವೇಶನಗಳು, 6.1 x 9.14 ಮೀಟರ್ (20 x 30 ಅಡಿ) ಅಳತೆಯ 039 ನಿವೇಶನಗಳು, 9.14 x 6.1 ಮೀಟರ್ (30 x 20 ಅಡಿ) ಅಳತೆಯ 010 ನಿವೇಶನಗಳು ಮತ್ತು 011 ವಿವಿಧ ಅಳತೆಯ ಬೆಸ/ಕೋಚೆ/ಮೂಲೆ ನಿವೇಶನಗಳನ್ನು ಸೇರಿ ಒಟ್ಟು 321 ನಿವೇಶನಗಳನ್ನು ರಚಿಸಲಾಗಿರುತ್ತದೆ. *ಈ ನಿವೇಶನಗಳ ಪೈಕಿ ಕೆಲವು ನಿವೇಶನಗಳನ್ನು ಪ್ರಾಧಿಕಾರವು ಸ್ವಾಧೀನಪಡಿಸಿಕೊಂಡಿದ್ದ ಸರ್ವೇ ನಂ.1/4, 7/1 ಹಾಗೂ ಇತರೆ ಸರ್ವೇ ನಂಬರ್‌ಗಳನ್ನು ಅನುಮೋದಿತ ನಕ್ಷೆಯಲ್ಲಿ ಸೇರಿಸಿಕೊಂಡು ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಲಾಗಿರುತ್ತದೆ. ಈ ಸರ್ವೆ ನಂಬರ್‌ಗಳು ಇದುವರೆಗೂ ಅಸೋಸಿಯೇಷನ್‌ಗೆ ನೋಂದಣಿಯಾಗಿರುವುದಿಲ್ಲ. (ಲಿಂಗಧೀರನಹಳ್ಳಿ ಗ್ರಾಮದ ಬಡಾವಣೆಯ ಪ್ರಸ್ತಾವಿತ ಮತ್ತು ಪರಿಷ್ಕೃತವಾಗಿ ಅನುಮೋದನೆಗೊಂಡಿರುವ ನಕ್ಷೆಗಳು – ಅನುಬಂಧ 12).*

ಲಿಂಗಧೀರನಹಳ್ಳಿ ಗ್ರಾಮದ ಮೂರನೆಯ ಹಂತದಲ್ಲಿ ಸರ್ವೆ ನಂಬರ್ 6/ಪಿ ಮತ್ತು 7/ಪಿ ಗಳಲ್ಲಿ 3 ಎಕರೆ ಜಮೀನನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಈ ಹಿಂದೆ ಇದ್ದಂತಹ ಪ್ರಾಧಿಕಾರದ ಆಯುಕ್ತರು ಅಸೋಸಿಯೇಷನ್ ಅಧ್ಯಕ್ಷರಿಂದ ಪ್ರಾಧಿಕಾರದ ಎರವಲು ಸೇವೆಯ ನೌಕರರಿಗೆ ನಿವೇಶನ ಹಂಚಿಕೆ ಮಾಡುವುದಿಲ್ಲವೆಂದು ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡಿರುವ ಬಗ್ಗೆ ಪ್ರಾಧಿಕಾರದಲ್ಲಿ 'ಬಿಡಿಎ ಎಂಪ್ಲಾಯಿಸ್ ವೆಲ್‌ಫೇರ್ ಅಸೋಸಿಯೇಷನ್' ಹೆಸರಿನ ಕಡತದ ಪುಟ 63ರ ಕಂಡಿಕೆ ಸಂಖ್ಯೆ 286ರಲ್ಲಿ ದಿನಾಂಕ 17/05/2011ರಂದು ದಾಖಲಾಗಿರುತ್ತದೆ. (ಕಡತದ ಮೂರು ಪುಟಗಳನ್ನು ಲಗತ್ತಿಸಿದೆ – *ಅನುಬಂಧ 13).* ಇದಾದ ನಂತರ ದಿನಾಂಕ 17/06/2011ರಂದು *" ಇನ್ನು ಮುಂದೆ ಪ್ರಾಧಿಕಾರದ ನೌಕರರಲ್ಲದೆ ಎರವಲು ಸೇವೆಯ ನೌಕರರಿಗೆ ನಿವೇಶನವನ್ನು ಹಂಚಿಕೆ ಮಾಡಬಾರದು"* ಮತ್ತು *ಇನ್ನು ಮುಂದೆ ಹಂಚಿಕೆ ಮಾಡುವ ನಿವೇಶನಗಳಿಗೆ 10 ವರ್ಷ*

ಪರಭಾರೆ ಮಾಡಬಾರದು ಹಾಗೂ ಈಗಾಗಲೇ ನಿವೇಶನ ಹಂಚಿಕೆಯಾಗಿರುವ ನೌಕರರಿಗೆ ಮತ್ತೊಮ್ಮೆ ನಿವೇಶನವನ್ನು ಹಂಚಿಕೆ ಮಾಡಬಾರದು" ಎಂದು ಆಯುಕ್ತರು ಮೂರು ಷರತ್ತುಗಳನ್ನು ವಿಧಿಸಿ ಆದೇಶ ಹೊರಡಿಸಿರುತ್ತಾರೆ. (3 ಎಕರೆ ಜಮೀನನ್ನು ಷರತ್ತು ವಿಧಿಸಿ ಬಿಡುಗಡೆ ಮಾಡಿದ ಆದೇಶದ ಪ್ರತಿ ಲಗತ್ತಿಸಿದೆ- ಅನುಬಂಧ 14). ಈ ಆದೇಶವನ್ನು ಹೊರಡಿಸಿದ ನಂತರವೂ ಎರವಲು ಸೇವೆ ಮೇಲೆ ಬಂದಿರುವ ಅಧಿಕಾರಿ/ನೌಕರರಿಗೆ ಹಾಗೂ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡಿ ನೋಂದಣಿ ಮಾಡಿಕೊಡಲಾಗಿರುತ್ತದೆ.

ಒಟ್ಟಾರೆಯಾಗಿ ದೊಡ್ಡಕಲ್ಲಸಂದ್ರ ಮತ್ತು ಲಿಂಗದೀರನಹಳ್ಳಿ ಗ್ರಾಮಗಳಲ್ಲಿ ಪ್ರಾಧಿಕಾರದಿಂದ ರಿಯಾಯಿತಿ ದರದಲ್ಲಿ ಬಿಡುಗಡೆ ಮಾಡಿದ ಒಟ್ಟು 42 ಎಕರೆ 15½ ಗುಂಟೆ ಸರ್ಕಾರಿ, ಗೋಮಾಳ ಹಾಗೂ ಹಿಡುವಳಿ ಜಮೀನಿನಲ್ಲಿ ರಚಿತವಾದ 888 ನಿವೇಶನಗಳನ್ನು ರಿಯಾಯಿತಿ ದರದಲ್ಲಿ ಸರ್ಕಾರದ ಆದೇಶದಂತೆ ಪ್ರಾಧಿಕಾರದ ನೌಕರರ ಸಂಘದ ಅದರ ನೌಕರರು ಅಂದರೆ, ಹಾಲಿ ಮತ್ತು ನಿವೃತ್ತ ನೌಕರರಿಗೆ ಮಾತ್ರ ಹಂಚಿಕೆ ಮಾಡಬೇಕಾಗಿತ್ತು. ಆದರೆ ಎರಡೂ ಗ್ರಾಮಗಳ ನಿವೇಶನಗಳನ್ನು, ಪ್ರಾಧಿಕಾರದಲ್ಲಿ ಎರವಲು ಸೇವೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿ/ನೌಕರರು, ಇತರೆ ಇಲಾಖೆಗಳ ಅಧಿಕಾರಿ/ನೌಕರರು, ಸಂಬಂಧಿಕರು, ನೆಂಟರಿಷ್ಟರಿಗೆ ಮತ್ತು ಸಾರ್ವಜನಿಕರಿಗೂ ಕಾನೂನುಬಾಹಿರವಾಗಿ, ಬೈಲಾವನ್ನು ಉಲ್ಲಂಘಿಸಿ, ಯಾರ ಅನುಮತಿಯನ್ನು ಪಡೆಯದೇ ಹಂಚಿಕೆ ಮಾಡಿ, ನೋಂದಣಿ ಮಾಡಿಕೊಟ್ಟಿರುತ್ತಾರೆ. ಅಲ್ಲದೇ ಪ್ರಾಧಿಕಾರದಲ್ಲಿ ಗುತ್ತಿಗೆ ಮತ್ತು ಹೊರಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅಧಿಕಾರಿ/ನೌಕರರುಗಳಿಗೆ ಸಹ ನಿವೇಶನಗಳನ್ನು ಹಂಚಿಕೆ ಮಾಡಿ ನೋಂದಣಿ ಮಾಡಿಕೊಡಲಾಗಿರುತ್ತದೆ. (ದೊಡ್ಡಕಲ್ಲಸಂದ್ರ ಮತ್ತು ಲಿಂಗಧೀರನಹಳ್ಳಿ ಗ್ರಾಮಗಳ ನಿವೇಶನಗಳನ್ನು ಅನರ್ಹರಿಗೆ ಹಂಚಿಕೆ ಮಾಡಿ ನೋಂದಣಿ ಮಾಡಿರುವ ಕ್ರಯಪತ್ರಗಳು ಮತ್ತು ಸ್ವಾಧೀನ ಪತ್ರಗಳ ಪ್ರತಿಗಳು ಹಾಗೂ ನಿವೇಶನಗಳ ಹಂಚಿಕೆಯ ಪಟ್ಟಿ ಲಗತ್ತಿಸಿದೆ. ಅನುಬಂಧ –15).

ಸುಮಾರು 25ರಿಂದ 35 ವರ್ಷಗಳವರೆಗೆ ಪ್ರಾಧಿಕಾರದಲ್ಲಿ ಅತ್ಯಂತ ಕಡಿಮೆ ಸಂಬಳಕ್ಕೆ ದುಡಿದು ನಿವೃತ್ತರಾದ ನೌಕರರಿಗೆ ನಿವೇಶನ ಹಂಚಿಕೆ ಮಾಡುವ ಬದಲು ಕೇವಲ ಒಂದೆರಡು ತಿಂಗಳು ಪ್ರಾಧಿಕಾರಕ್ಕೆ ಎರವಲು ಸೇವೆಯ ಮೇಲೆ ಬಂದ ಅಧಿಕಾರಿ/ನೌಕರರಿಗೆ ಯಾರ ಅನುಮತಿಯನ್ನು ಪಡೆಯದೇ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ, ಪ್ರಾಧಿಕಾರದ ಗುತ್ತಿಗೆ/ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿ/ನೌಕರರಿಗೆ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ ಮತ್ತು ಸಂಬಂಧವೇ ಇರದ ಸರ್ಕಾರದ ಇತರೆ ಇಲಾಖೆಗಳ ಅಧಿಕಾರಿ/ನೌಕರರು ಹಾಗೂ ಸಾರ್ವಜನಿಕರಿಗೆ ನಿವೇಶನಗಳನ್ನು ನೋಂದಣಿ ಮಾಡಿಕೊಡಲಾಗಿರುತ್ತದೆ. ಇದೆಲ್ಲವೂ ನಿಯಮಬಾಹಿರವಾಗಿದ್ದು, ಪ್ರಾಧಿಕಾರದ ಅಥವಾ ಸರ್ಕಾರದ ಅನುಮತಿ ಪಡೆದಿರುವುದಿಲ್ಲ ಮತ್ತು ಬೈಲಾದಲ್ಲಿಯೂ ಅವಕಾಶವಿರುವುದಿಲ್ಲ.

ಮೇಲಿನ ಉಲ್ಲೇಖಿತ ಪತ್ರ (1)ರ ಕಡೆಗೆ ತಮ್ಮ ದಯ ಗಮನವನ್ನು ಸೆಳೆಯುತ್ತಾ, ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದಲ್ಲಿ ನಡೆದಿರುವ ಅಕ್ರಮ-ಅವ್ಯವಹಾರಗಳ ಬಗ್ಗೆ ಹಣ ಪಾವತಿಸಿ ನಿವೇಶನ ಸಿಗದೇ ವಂಚಿತರಾಗಿದ್ದ ಶ್ರೀ

43

ಡಿ.ಟಿ.ಕೃಷ್ಣೇಗೌಡ, ಸಹಾಯಕ ಕಾನೂನು ಅಧಿಕಾರಿ, ಬಿಡಿಎ, ಇವರು ಲೋಕಾಯುಕ್ತಕ್ಕೆ ದೂರು ನೀಡಿದ್ದು, ಲೋಕಾಯುಕ್ತದವರು ಅಸೋಸಿಯೇಷನ್ ಅವ್ಯವಹಾರಗಳ ಬಗ್ಗೆ ತನಿಖೆ ಮಾಡಲು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರಿಗೆ ಆದೇಶ ನೀಡಿ, ಈ ಆದೇಶದನ್ವಯ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರು ಅಧಿಕ ಜಿಲ್ಲಾ ನೋಂದಣಾಧಿಕಾರಿಯವರಾದ ಶ್ರೀ ಶಿವನಂಜಯ್ಯ ನವರಿಂದ ತನಿಖೆ ನಡೆಸಿ, ಅವರು ಅಕ್ರಮ-ಅವ್ಯವಹಾರಗಳು ಸಾಬೀತಾಗಿವೆ ಎಂದು ವರದಿ ನೀಡಿದ್ದು, ಅದರಂತೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ರವರು ಅಸೋಸಿಯೇಷನ್‌ನಲ್ಲಿ ಅಕ್ರಮ-ಅವ್ಯವಹಾರಗಳು ನಡೆದಿದ್ದು, ಕೂಡಲೇ ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕೆಂದು ಸರ್ಕಾರಕ್ಕೆ ದಿನಾಂಕ 20/10/2015ರಂದು ಸಲ್ಲಿಸಿದ್ದು, ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಸರ್ಕಾರಕ್ಕೆ ವರದಿ ಕಳುಹಿಸಿರುವ ಬಗ್ಗೆ ದಿನಾಂಕ 28/10/2015ರಂದು ಲೋಕಾಯುಕ್ತಕ್ಕೆ ಪತ್ರ ಬರೆದಿರುತ್ತಾರೆ. (ಮಾನ್ಯ ಲೋಕಾಯುಕ್ತ ರವರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರಿಗೆ ಬರೆದ ಪತ್ರದ ನಕಲು ಮತ್ತು ಅಪರ ನೋಂದಣಾಧಿಕಾರಿಗಳಾದ ಶ್ರೀ ಶಿವನಂಜಯ್ಯನವರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರಿಗೆ ನೀಡಿರುವ ವಿಚಾರಣಾ ವರದಿ ಹಾಗೂ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ರವರು ಸರ್ಕಾರಕ್ಕೆ ಬರೆದಿರುವ ವರದಿಗಳ ಪ್ರತಿಗಳು ಲಗತ್ತಿಸಿದೆ (ಅನುಬಂಧ -16).

ಉಲ್ಲೇಖಿತ ಪತ್ರ (2)ರಲ್ಲಿ ತಿಳಿಸಿರುವಂತೆ ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದಲ್ಲಿ ನಡೆದಿರುವ ಅಕ್ರಮ-ಅವ್ಯವಹಾರಗಳ ಬಗ್ಗೆ ಪ್ರಾಧಿಕಾರದ ನಿವೃತ್ತ ನೌಕರರಾದ ನಾವು ನಿವೇಶನಕ್ಕಾಗಿ ಅಸೋಸಿಯೇಷನ್‌ಗೆ ಹಣ ಪಾವತಿಸಿದ್ದು, ನಮಗೆಲ್ಲರಿಗೂ ನಿವೇಶನ ಹಂಚಿಕೆ ಮಾಡದೇ ಅನ್ಯಾಯ ಮಾಡಿದ್ದು, ಈ ಬಗ್ಗೆ ನಾವು ಅನೇಕ ದೂರು ಅರ್ಜಿಗಳನ್ನು ದಾಖಲಾತಿಗಳೊಡನೆ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ಮತ್ತು ಕಂದಾಯ ಇಲಾಖೆಯ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರಿಗೆ ಸಲ್ಲಿಸಿರುತ್ತೇವೆ. ನಾವುಗಳು ನೀಡಿದ ದೂರಿನ ಅರ್ಜಿಗಳು ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರು ಮೇಲುನೋಟಕ್ಕೆ ಅಕ್ರಮ-ಅವ್ಯವಹಾರಗಳು ನಡೆದಿರುವ ಬಗ್ಗೆ ಮನಗಂಡು, ಅಸೋಸಿಯೇಷನ್ ನಿವೇಶನ ಹಂಚಿಕೆಯ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಲು ಹೆಸರುಘಟ್ಟದ ಉಪ ನೋಂದಣಾಧಿಕಾರಿಗಳಾದ ಶ್ರೀ ನಾರಾಯಣಪ್ಪನವರನ್ನು ದಿನಾಂಕ 14/08/2015ರಂದು ನೇಮಿಸಿ ಆದೇಶ ಹೊರಡಿಸಿರುತ್ತಾರೆ. ಈ ಆದೇಶದಂತೆ ಹೆಸರುಘಟ್ಟದ ಉಪ ನೋಂದಣಾಧಿಕಾರಿಗಳು ಅಸೋಸಿಯೇಷನ್‌ನಲ್ಲಿ ಅಕ್ರಮ-ಅವ್ಯವಹಾಗಳು ನಡೆದಿರುವುದು ಸಾಬೀತಾಗಿರುವುದರಿಂದ ಕೂಡಲೇ ಅಸೋಸಿಯೇಷನ್‌ಗೆ "ಆಡಳಿತಾಧಿಕಾರಿ" ಯನ್ನು ನೇಮಿಸಬೇಕೆಂದು ದಿನಾಂಕ 22/11/2015ರಂದು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರಿಗೆ ವರದಿ ನೀಡಿರುತ್ತಾರೆ. ಈ ಯಥಾ ವರದಿಯನ್ನು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರು ಸರ್ಕಾರಕ್ಕೆ ಸಲ್ಲಿಸಿ, ಕೂಡಲೇ ಅಸೋಸಿಯೇಷನ್‌ಗೆ ಆಡಳಿತಾಧಿಕಾರಿಯನ್ನು ನೇಮಿಸುವಂತೆ ದಿನಾಂಕ 09/12/2015ರಂದು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ. ಈ ಎರಡೂ ತನಿಖಾ ವರದಿಗಳಲ್ಲಿ ಅಕ್ರಮ-ಅವ್ಯವಹಾರಗಳು ಸ್ಪಷ್ಟವಾಗಿ ಸಾಬೀತಾಗಿರುತ್ತವೆ. (ಉಪ ನೋಂದಣಾಧಿಕಾರಿಗಳಾದ ಶ್ರೀ ನಾರಾಯಣಪ್ಪನವರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರಿಗೆ ನೀಡಿರುವ ವಿಚಾರಣಾ ವರದಿ ಹಾಗೂ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ರವರು ಸರ್ಕಾರಕ್ಕೆ ಬರೆದಿರುವ ವರದಿಗಳ ಪ್ರತಿಗಳನ್ನು ಲಗತ್ತಿಸಿದೆ ಅನುಬಂಧ -17).

ಈ ಎರಡೂ ವರದಿಗಳ ಆಧಾರದ ಮೇಲೆ ಕಂದಾಯ ಇಲಾಖೆಯ ಸೀಕಾಧಿಕಾರಿಯವರು ಅಸೋಸಿಯೇಷನ್‌ಗೆ ಕೂಡಲೇ ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕೆಂದು ಕಡತದಲ್ಲಿ ಲಿಖಿತವಾಗಿ ದಾಖಲಿಸಿದ್ದರೂ, ಉಪ ಕಾರ್ಯದರ್ಶಿಯವರು ಈ ಎರಡೂ ಸ್ಪಷ್ಟ ತನಿಖಾ ವರದಿಗಳನ್ನು ಪರಿಗಣಿಸದೇ, ಅಸೋಸಿಯೇಷನ್ ಅಧ್ಯಕ್ಷರೊಡನೆ ಶಾಮೀಲಾಗಿರುತ್ತಾರೆ. ಹೇಗೆಂದರೆ, ಅಸೋಸಿಯೇಷನ್‌ನವರು ನಿವೇಶನ ರಚಿಸಿ ಹಂಚಿಕೆ ಮಾಡಲು ಹೆಚ್ಚಿನ ಜಮೀನು ಉಪಯೋಗಿಸಿಕೊಂಡಿರುವ ಬಗ್ಗೆ ಮತ್ತು ಜೇಷ್ಠತೆ ಪಾಲನೆ ಮಾಡದೇ ಅನರ್ಹರಿಗೆ ನಿವೇಶನ ಹಂಚಿಕೆ ಮಾಡಿರುವ ಕುರಿತು ತನಿಖೆ ನಡೆಸಲು ನಗರಾಭಿವೃದ್ಧಿ ಇಲಾಖೆಯು ದಿನಾಂಕ 02/09/2013ರಂದು ಡಾ. ಹೆಚ್. ಶಶಿಧರ್, ನಿವೃತ್ತ ಐಎಎಸ್ ಅಧಿಕಾರಿ, ಇವರನ್ನು ನೇಮಿಸಿರುತ್ತಾರೆ. *(ತನಿಖಾ ಆದೇಶದ ಪ್ರತಿ ಲಗತ್ತಿಸಿದೆ - ಅನುಬಂಧ 18)* ಆದರೆ ಅಸೋಸಿಯೇಷನ್‌ನ ಅವ್ಯವಹಾರಗಳ ಬಗ್ಗೆ ತನಿಖೆ ಮಾಡುವ ಅಧಿಕಾರ ಕಂದಾಯ ಇಲಾಖೆಯ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ರವರಿಗೆ ಮಾತ್ರ ಇದೆ, ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಈ ಆದೇಶದ ವಿರುದ್ಧ ಅಸೋಸಿಯೇಷನ್‌ನವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಂಖ್ಯೆ 40081/2013 ಅನ್ನು ಸಲ್ಲಿಸಿ, 10/09/2013ರಂದು ಮಧ್ಯಂತರ ತಡೆಯಾಜ್ಞೆಯನ್ನು ತೆಗೆದುಕೊಂಡಿರುತ್ತಾರೆ. *(ಮಧ್ಯಂತರ ತಡೆಯಾಜ್ಞೆಯ ಪ್ರತಿ ಲಗತ್ತಿಸಿದೆ – ಅನುಬಂಧ 19)* *ಈ ಮಧ್ಯಂತರ ತಡೆಯಾಜ್ಞೆ ತೆಗೆದುಕೊಳ್ಳಲು ಸಹಕಾರ ಇಲಾಖೆಯಿಂದ ನಡೆಸಿದ ತನಿಖಾ ವರದಿಯನ್ನು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಆದರೆ ಈ ತನಿಖೆಯು ನಿಷ್ಪಕ್ಷಪಾತವಾಗಿ ನಡೆದಿರುವುದಿಲ್ಲ. ಯಾರೋ ಸಾರ್ವಜನಿಕರು ಪ್ರಾಧಿಕಾರದ ನೌಕರರ ಹೆಸರಿನಲ್ಲಿ ಅವರುಗಳು ಸಹಿ ಮಾಡಿ ದೂರು ಅರ್ಜಿಯನ್ನು ಮುಖ್ಯ ಮಂತ್ರಿಗಳಿಗೆ ಕಳುಹಿಸಿರುತ್ತಾರೆ. ಆದರೆ ಆ ದೂರು ಅರ್ಜಿಯ ಆಧಾರದ ಮೇಲೆ ಸಹಕಾರ ಇಲಾಖೆಯವರು ತನಿಖೆ ನಡೆಸಬೇಕಾದ ಅಗತ್ಯವಿರಲಿಲ್ಲ, ಏಕೆಂದರೆ ದೂರು ನೀಡಿರುವ ಅರ್ಜಿದಾರರೇ ಇಲ್ಲವೆಂದ ಮೇಲೆ ತನಿಖೆ ನಡೆಯಲು ಹೇಗೆ ಸಾಧ್ಯ? ಆದರೂ ಯಾರೋ ಅಪರಿಚಿತ ವ್ಯಕ್ತಿಗಳು ಪ್ರಾಧಿಕಾರದ ನೌಕರರ ಹೆಸರಿನಲ್ಲಿ ಸಹಿ ಮಾಡಿ ಕಳುಹಿಸಿದ ದೂರು ಅರ್ಜಿ ಮೇಲೆ ತನಿಖೆ ಮಾಡಬೇಕಾದ ಅಗತ್ಯವೇ ಇಲ್ಲ ಮತ್ತು ದೂರು ಅರ್ಜಿಯಲ್ಲಿ ಸಹಿ ಇದ್ದ ಪ್ರಾಧಿಕಾರದ ನೌಕರರನ್ನು ಸಹಕಾರ ಇಲಾಖೆಯ ವಿಚಾರಣಾಧಿಕಾರಿಯವರು ಕರೆದು ಅದರಲ್ಲಿರುವ ಸಹಿಗಳು ನಮ್ಮದಲ್ಲ ಎಂದು ಪ್ರಾಧಿಕಾರದ ನೌಕರರು ಮೌಖಿಕವಾಗಿ ಹೇಳಿದ ನಂತರ ತನಿಖೆಯನ್ನು ಮುಂದುವರೆಸುವ ಅಗತ್ಯವಿರಲಿಲ್ಲ. ಏಕೆಂದರೆ ಪಿರ್ಯಾದುದಾರರೇ ಇಲ್ಲವೆಂದ ಮೇಲೆ ಯಾರನ್ನು ಕೇಳಿ ತನಿಖೆ ನಡೆಸುವುದು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೂ ಪಿರ್ಯಾದುದಾರರು ಇಲ್ಲದೇ ಏಕಪಕ್ಷೀಯವಾಗಿ ತನಿಖೆಯನ್ನು ಸಹಕಾರ ಇಲಾಖೆಯವರು ನಡೆಸಿ ವರದಿಯನ್ನು ಕೊಟ್ಟಿರುತ್ತಾರೆ. ಇದರಲ್ಲಿ ಯಾವುದೇ ಹುರುಳಿರುವುದಿಲ್ಲ. (ಸಹಕಾರ ಇಲಾಖೆಯ ತನಿಖೆಯ ಪ್ರತಿ ಲಗತ್ತಿಸಿದೆ – ಅನುಬಂಧ 20).* ಈ ತನಿಖಾ ವರದಿಯನ್ನು ಅಸೋಸಿಯೇಷನ್‌ನವರು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿ ಮಧ್ಯಂತರ ತಡೆಯಾಜ್ಞೆ ತೆಗೆದುಕೊಂಡಿದ್ದು, ಇದು ಇಲ್ಲಿಯವರೆವಿಗೂ ಇತ್ಯರ್ಥವಾಗಿರುವುದಿಲ್ಲ. *ಕಂದಾಯ ಉಪ ಕಾರ್ಯದರ್ಶಿಯವರು ನಗರಾಭಿವೃದ್ಧಿ ಇಲಾಖೆಯ ತನಿಖಾದೇಶಕ್ಕೆ ನೀಡಿರುವ ಮಧ್ಯಂತರ ತಡೆಯಾಜ್ಞೆಯನ್ನು* ***interpretation*** *ಮಾಡಿಕೊಂಡು, ಇಂತಹ ಸಂದರ್ಭದಲ್ಲಿ ಕಂದಾಯ ಇಲಾಖೆಯು ಅಸೋಸಿಯೇಷನ್‌ಗೆ ಆಡಳಿತಾಧಿಕಾರಿಯನ್ನು ನೇಮಿಸುವದು* **Sub-Judice** *ಆಗುತ್ತದೆ ಎಂದು ಅಭಿಪ್ರಾಯ ಕೊಟ್ಟು*

*ಕಡತವನ್ನು ಕಾನೂನು ಇಲಾಖೆಗೆ ಕಳುಹಿಸಿರುತ್ತಾರೆ.* ಆದರೆ ಕಾನೂನು ಇಲಾಖೆಯವರು *"ಗೌ॥ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 40081/2013 ವಿಚಾರಣೆಗಾಗಿ ಬಾಕಿ ಇರುವ ಹಿನ್ನೆಲೆಯಲ್ಲಿ ಆಡಳಿತಾಧಿಕಾರಿ ನೇಮಿಸಿದಲ್ಲಿ* **Sub-Judice** *ಆಗುತ್ತದೆಂದು ಹೇಳಲಾಗುವುದಿಲ್ಲ"* ಎಂದು ಸ್ಪಷ್ಟ ಅಭಿಪ್ರಾಯವನ್ನು ನೀಡಿದ್ದರೂ, ಕಂದಾಯ ಇಲಾಖೆಯ *ಉಪ ಕಾರ್ಯದರ್ಶಿಯವರು ಅಸೋಸಿಯೇಷನ್‌ನವರೊಡನೆ ಶಾಮೀಲಾಗಿ ಆಡಳಿತಾಧಿಕಾರಿಯನ್ನು ನೇಮಿಸುವ ಬದಲಾಗಿ ಅಸೋಸಿಯೇಷನ್ ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಲು ಪ್ರಾಧಿಕಾರದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಶ್ರೀ ಇಂದೂಧರ್ ಎಂಬುವವರನ್ನು ಉಲ್ಲೇಖ (3)ರಲ್ಲಿ ತಿಳಿಸಿರುವಂತೆ ದಿನಾಂಕ 20/04/2016ರಂದು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ* ಆದೇಶ ಹೊರಡಿಸಿರುತ್ತಾರೆ. *(ಆದೇಶದ ಪ್ರತಿ ಲಗತ್ತಿಸಿದೆ – ಅನುಬಂಧ 21).*

*ಪ್ರಾಧಿಕಾರದಲ್ಲಿಯೇ ಸಹಾಯಕ ಕಾನೂನು ಅಧಿಕಾರಿಯಾಗಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಇಂದೂಧರ್ ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದಾಗ, ಅವರು ಪ್ರಾಧಿಕಾರದಲ್ಲಿಯೇ ಇದ್ದುಕೊಂಡು ಅಸೋಸಿಯೇಷನ್‌ನವರೊಡನೆ ಶಾಮೀಲಾಗುವ ಸಾಧ್ಯತೆ ಹೆಚ್ಚಾಗಿರುವುದರಿಂದ, ಈ ವಿಚಾರಣಾ ಆದೇಶವನ್ನು ರದ್ದು ಮಾಡುವಂತೆ ಕೋರಿ ನಾವು ಉಲ್ಲೇಖ (4)ರಲ್ಲಿ ತಿಳಿಸಿರುವಂತೆ ಕಂದಾಯ ಇಲಾಖೆಗೆ ಪತ್ರವನ್ನು ನೀಡಿರುತ್ತೇವೆ. (ಅರ್ಜಿಯ ಪ್ರತಿ ಲಗತ್ತಿಸಿದೆ – ಅನುಬಂಧ 22.* ಇಷ್ಟಾದರೂ ಈ ಆದೇಶವನ್ನು ಕಂದಾಯ ಇಲಾಖೆಯವರು ರದ್ದು ಮಾಡಿರುವುದಿಲ್ಲ.

ಈ ಹಿಂದೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರು ನ್ಯಾಯಸಮ್ಮತವಾಗಿ ಎರಡು ವಿಚಾರಣೆಗಳನ್ನು ಕೈಗೊಂಡು, ಕೂಡಲೇ ಆಡಳಿತಾಧಿಕಾರಿಯನ್ನು ನೇಮಿಸಿಬೇಕೆಂದು ವರದಿ ಕೊಟ್ಟಿದ್ದು, ನಾವುಗಳು ವಿಚಾರಣಾಧಿಕಾರಿಯವರಾದ ಶ್ರೀ ಎಸ್.ಇಂಧುದರ್ ರವರನ್ನು ಪ್ರಾಧಿಕಾರದ ಅವರ ಕಛೇರಿಯಲ್ಲಿ ಖುದ್ದಾಗಿ ಭೇಟಿ ಮಾಡಿ ವಿಚಾರಿಸಲಾಗಿ, ಅಗ ಅವರು ನಿವೃತ್ತ ನೌಕರರಾದ ನಮಗೆ ದಿನಾಂಕ 11/05/2016ರಂದು ನೋಟಿಸ್ ಕೊಟ್ಟು, ದಿನಾಂಕ 17/5/2016ರೊಳಗೆ ದಾಖಲಾತಿಗಳನ್ನು ಕೊಡುವ ಬಗ್ಗೆ ತಿಳಿಸಿದ್ದು, *ಅದರಂತೆ ನಾವು 137 ಪುಟಗಳ ದಾಖಲಾತಿಗಳನ್ನು ಹಾಗೂ ಅಸೋಸಿಯೇಷನ್ ವಿರುದ್ಧ 29 ಆರೋಪಗಳ ಪಟ್ಟಿಯನ್ನು ನೀಡಿರುತ್ತೇವೆ ಮತ್ತು ಅಸೋಸಿಯೇಷನ್‌ನವರೊಡನೆ ಸಮಕ್ಷಮ ವಿಚಾರಣೆ ನಡೆಸಬೇಕೆಂದು ಮನವಿ ಮಾಡಿರುತ್ತೇವೆ. ಆದರೆ ವಿಚಾರಣಾಧಿಕಾರಿಯಾದ ಶ್ರೀ ಎಸ್. ಇಂಧುದರ್ ರವರು ನಮ್ಮಿಂದ ದಾಖಲಾತಿಗಳನ್ನು ಪಡೆದು, ಮಂಡನಾಧಿಕಾರಿಯಾದ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಅವರನ್ನು ಕರೆಸಿ, ಅವರೊಡನೆ ಯಾವ ವಿಷಯದ ಬಗ್ಗೆಯೂ ಚರ್ಚಿಸಿರುವುದಿಲ್ಲ. ಅಲ್ಲದೇ ವಿಚಾರಣಾ ವರದಿಗಳನ್ನು ನೀಡಿದ ಶ್ರೀ ಶಿವನಂಜಯ್ಯ ಹಾಗೂ ಶ್ರೀ ನಾರಾಯಣಪ್ಪನವರೊಡನೆ ಯಾವ ವಿಷಯವನ್ನು ಚರ್ಚಿಸದೇ, ನಮ್ಮ ಸಮಕ್ಷಮ ಅಸೋಸಿಯೇಷನ್ ಅಧ್ಯಕ್ಷರನ್ನೂ ಕರೆಸಿ ಚರ್ಚಿಸಿದೇ, ಅಸೋಸಿಯೇಷನ್ ಅಧ್ಯಕ್ಷರೊಡನೆ ಶಾಮೀಲಾಗಿ, ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡು, "ಅಸೋಸಿಯೇಷನ್‌ನಲ್ಲಿ ಅವ್ಯವಹಾರ ನಡೆದಿಲ್ಲ ಮತ್ತು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ರವರು ತನಿಖೆ ನಡೆಸಿ ನೀಡಿರುವ ವರದಿಯಲ್ಲಿ*

ಸತ್ಯಾಂಶವಿಲ್ಲವೆಂದು" ನೀಡಿರುವ ವರದಿಯ ಆಧಾರದ ಮೇಲೆ ಕಂದಾಯ ಇಲಾಖೆಯು ದಿನಾಂಕ 28/05/2016ರಂದು ಉಲ್ಲೇಖ (5)ರಲ್ಲಿ ತಿಳಿಸಿರುವ ಆದೇಶವನ್ನು ಹೊರಡಿಸಲಾಗಿದೆ. *(ಆದೇಶದ ಪ್ರತಿ ಲಗತ್ತಿಸಿದೆ – ಅನುಬಂಧ 23).*

ಆದುದರಿಂದ, ಶ್ರೀ ಇಂದೂಧರ್ ರವರು ಸಲ್ಲಿಸಿದ ವಿಚಾರಣಾ ವರದಿಯ *ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳದೇ, ಕಂದಾಯ ಇಲಾಖೆ ದಿನಾಂಕ 28/05/2016ರಂದು ಹೊರಡಿಸಿರುವ ಆದೇಶವನ್ನು ರದ್ದುಮಾಡಿ, ಮತ್ತೊಮ್ಮೆ ಕಡತವನ್ನು ಪರಿಶೀಲಿಸಿ, ಕಾನೂನುಬದ್ಧ ಅಧಿಕಾರಿಯಾದ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ರವರು ಎರಡು ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿ ಅಕ್ರಮ–ಅವ್ಯವಹಾರಗಳು ಸಾಬೀತಾಗಿದೆ ಎಂದು ವರದಿ ನೀಡಿರುವುದರಿಂದ, ದಯಮಾಡಿ ಕೂಡಲೇ ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಅಥವಾ ಅಗತ್ಯವೆನಿಸಿದಲ್ಲಿ ಮತ್ತೊಮ್ಮೆ ದಕ್ಷ ವಿಚಾರಣಾಧಿಕಾರಿಯನ್ನು ನೇಮಿಸಿ ತನಿಖೆ ನಡೆಸಿ, ಪ್ರಾಧಿಕಾರದ ನಿವೃತ್ತ ನೌಕರರು ಹಾಗೂ ಹಿರಿಯ ನಾಗರಿಕರಾದ ನಮಗೆ ನ್ಯಾಯ ಒದಗಿಸಲು ಸೂಕ್ತ ಕ್ರಮ* ಕೈಗೊಳ್ಳಬೇಕೆಂದು ಕೋರುತ್ತೇವೆ.

ಈ ಮೇಲಿನ ವಿಷಯಗಳನ್ನು ಹಾಗೂ ಉಲ್ಲೇಖಿತ ಪತ್ರಗಳ ಬಗ್ಗೆ ತಮ್ಮ ಘನ ಅವಗಾಹನೆಗೆ ತರುತ್ತಾ, ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದಲ್ಲಿ ಸ್ಪಷ್ಟವಾಗಿ ಮತ್ತು ಖಂಡಿತವಾಗಿಯೂ ಅವ್ಯವಹಾರ ನಡೆದಿದೆ ಎಂಬುದಕ್ಕೆ ಕೆಳಕಂಡ ಆರೋಪಗಳನ್ನು ತಮ್ಮ ಸನ್ನಿಧಾನದಲ್ಲಿ ಪ್ರಸ್ತುತಪಡಿಸಬಯಸುತ್ತೇವೆ.

## *ಆರೋಪಗಳು*

ಆರೋಪ–01 ಬಿಡಿಎ ನೌಕರರ ಸಂಘ ಮತ್ತು ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘಗಳೆರಡಕ್ಕೂ **ಬೈಲಾಗಳ ಪ್ರಕಾರ ಪ್ರಾಧಿಕಾರದ ಹಾಲಿ ಮತ್ತು ನಿವೃತ್ತ ನೌಕರರನ್ನು ಹೊರತುಪಡಿಸಿ ಇತರೆಯವರ್‍ಯಾರೂ ಸದಸ್ಯರಾಗಲು ಅವಕಾಶವಿಲ್ಲ.** ಈ ನಿಯಮವನ್ನು ಉಲ್ಲಂಘನೆ ಮಾಡಿ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ. (ಅನುಬಂಧ –1ರಲ್ಲಿ ಲಗತ್ತಿಸಿದೆ).

ಆರೋಪ–02 ಪ್ರಾಧಿಕಾರದ *ಅಧಿಕಾರಿ/ನೌಕರರಿಗೆ ನಿವೇಶನ ಹಂಚಿಕೆ ಮಾಡುವಾಗ ಜೇಷ್ಠತೆಯನ್ನು ಪಾಲನೆ ಮಾಡಿರುವುದಿಲ್ಲ.*

ಆರೋಪ–03 ಅಸೋಸಿಯೇಷನ್ ಹೊರಡಿಸಿದ ಸುತ್ತೋಲೆಯಲ್ಲಿ ಲಾಟರಿ ತೆಗೆಯುವ ಮೂಲಕ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ ತಿಳಿಸಿದ್ದು, ಇದನ್ನು ಪಾಲನೆ ಮಾಡದೇ ಉಲ್ಲಂಘಿಸಿರಲಾಗಿರುತ್ತದೆ. (ಅನುಬಂಧ–6ರಲ್ಲಿ ಸುತ್ತೋಲೆಗಳ ಪ್ರತಿಗಳನ್ನು ಲಗತ್ತಿಸಿದೆ). ನಂತರ ತೋಟಗಾರರು, ಡಿ ಗುಂಪಿನ ನೌಕರರು ಲಾಟರಿ ತೆಗೆಯುವ ಮೂಲಕ ನಿವೇಶನ ಹಂಚಿಕೆ ಮಾಡಿದರೆ ಅವರುಗಳ ಹೆಸರು ಬರದೇ ಇದ್ದರೆ ಅನ್ಯಾಯವಾಗುತ್ತದೆ ಎಂದು ಅಸೋಸಿಯೇಷನ್‌ಗೆ ಮನವಿ ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ ಅವರ ಮನವಿಯನ್ನು ಪರಿಗಣಿಸುವುದಾದರೆ ಅಸೋಸಿಯೇಷನ್‌ನವರು ಸರ್ಕಾರ ಅಥವಾ ಪ್ರಾಧಿಕಾರದ ಗಮನಕ್ಕೆ ತಂದು

ಲಾಟರಿ ತೆಗೆಯುವ ಮೂಲಕ ನಿವೇಶನಗಳನ್ನು ಹಂಚಿಕೆ ಮಾಡುವುದನ್ನು ರದ್ದುಮಾಡುವ ಬಗ್ಗೆ ಅನುಮತಿಯನ್ನು ಪಡೆದಿಲ್ಲ. ಕೇವಲ ಏಕಾಏಕಿ ನಿರ್ಧಾರ ತೆಗೆದುಕೊಂಡು ಅವ್ಯವಹಾರ ಮಾಡಲು ಅನುಕೂಲ ಮಾಡಿಕೊಂಡಿರುತ್ತಾರೆ. ಅಲ್ಲದೇ ***ತೋಟಗಾರರು ಮತ್ತು ಡಿ ಗುಂಪಿನ ನೌಕರರಿಗೆ ಮೊದಲು ಹಂಚಿಕೆ ಮಾಡಿರುವುದಿಲ್ಲ. ಎ, ಬಿ ಮತ್ತು ಸಿ ಗುಂಪಿನ ನೌಕರರು ಮತ್ತು ತೋಟಗಾರರು ಹಾಗೂ ಡಿ ಗುಂಪಿನ ನೌಕರರಿಗೂ ಒಂದೇ ದಿನಾಂಕದಲ್ಲಿ ನಿವೇಶನ ಹಂಚಿಕೆ ಮಾಡಿರುತ್ತಾರೆ. ಅಸೋಸಿಯೇಷನ್ ಹಂಚಿಕೆಯ ಪಟ್ಟಿಯಲ್ಲಿ ಎಲ್ಲರಿಗೂ ಒಂದೇ ದಿನಾಂಕದಲ್ಲಿ ಹಂಚಿಕೆ ಮಾಡಲಾಗಿರುತ್ತದೆ. (ಹಂಚಿಕೆಯ ಪಟ್ಟಿಯ ಪ್ರತಿಗಳನ್ನು ಲಗತ್ತಿಸಿದೆ – ಅನುಬಂಧ-24)***

ಆರೋಪ-04 ದಿನಾಂಕ 20/12/2006ರಲ್ಲಿ ಪ್ರಾಧಿಕಾರವು " ಹಂಚಿಕೆ ಪತ್ರದಲ್ಲಿ ಹಂಚಿಕೆದಾರರ ಮತ್ತು ಪತ್ನಿಯ ಹೆಸರನ್ನು ಸೇರಿಸಿ ಹಂಚಿಕೆ ಪತ್ರವನ್ನು ನೀಡತಕ್ಕದ್ದು ಹಾಗೂ ಹಂಚಿಕೆದಾರರಳಾಗಿದ್ದಲ್ಲಿ ಅವರ ಪತಿಯ ಹೆಸರನ್ನು ಸೇರಿಸಿ ಜಂಟಿ ಹೆಸರಿಗೆ ಹಂಚಿಕೆ ಪತ್ರವನ್ನು ನೀಡತಕ್ಕದ್ದು ಎಂದು ಷರತ್ತು ವಿಧಿಸಿ ಆದೇಶ ಹೊರಡಿಸಿರುತ್ತದೆ. ಆದರೆ ***ಅಸೋಸಿಯೇಷನ್‌ನವರು ಹಂಚಿಕೆದಾರರೆಲ್ಲರಿಗೂ ಜಂಟಿ ಹಂಚಿಕೆ ಪತ್ರವನ್ನು ನೀಡಿದೇ ಆದೇಶ ಉಲ್ಲಂಘನೆ ಮಾಡಿರುತ್ತಾರೆ ಮತ್ತು ಅಸೋಸಿಯೇಷನ್‌ನವರು 10 ವರ್ಷಗಳ ಪರಭಾರೆ ವಿಧಿಸಿರುವುದಿಲ್ಲ.*** (ಅನುಬಂಧ-8ರಲ್ಲಿ ಪ್ರತಿ ಲಗತ್ತಿಸಿದೆ).

ಆರೋಪ-05 ದೊಡ್ಡಕಲ್ಲಸಂದ್ರ ಮತ್ತು ಲಿಂಗಧೀರನಹಳ್ಳಿ ಗ್ರಾಮಗಳಲ್ಲಿ ಪ್ರಾಧಿಕಾರದ ಅದರ ನೌಕರರಿಗೆ ನಿವೇಶನ ರಚಿಸಿ ಹಂಚಿಕೆ ಮಾಡಲು, ಪ್ರಾಧಿಕಾರದಿಂದ ರಿಯಾಯಿತಿ ದರದಲ್ಲಿ ಬಿಡುಗಡೆ ಮಾಡಿದ ಜಮೀನಿನಲ್ಲಿ ರಚಿತವಾದ ನಿವೇಶನಗಳನ್ನು ರಿಯಾಯಿತಿ ದರದಲ್ಲಿ ಸರ್ಕಾರದ ಆದೇಶದಂತೆ ಪ್ರಾಧಿಕಾರದ ನೌಕರರ ಸಂಘದ ಅದರ ನೌಕರರು ಅಂದರೆ ಹಾಲಿ ಮತ್ತು ನಿವೃತ್ತ ನೌಕರರಿಗೆ ಮಾತ್ರ ಹಂಚಿಕೆ ಮಾಡಬೇಕಾಗಿತ್ತು. ಆದರೆ ***ಬಿಡಿಎ ನ ಎರವಲು ಸೇವಾ ಅಧಿಕಾರಿ/ನೌಕರರು, ಇತರೆ ಇಲಾಖೆಗಳ ಅಧಿಕಾರಿ/ನೌಕರರು, ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಬಂದಿರುವವರಿಗೆ ಮತ್ತು ಸಾರ್ವಜನಿಕರಿಗೆ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ. ಈ ರೀತಿ ನಿವೇಶನ ಹಂಚಿಕೆ ಮಾಡಲು ಪ್ರಾಧಿಕಾರ ಅಥವಾ ಸರ್ಕಾರದ ಅನುಮತಿಯನ್ನು ಪಡೆದಿರುವುದಿಲ್ಲ ಹಾಗೂ ಸಂಘದ ಬೈಲಾದಲ್ಲಿ ಅವಕಾಶವಿಲ್ಲ.*** (ಅನುಬಂಧ – 15ರಲ್ಲಿ ಕ್ರಯಪತ್ರ ಮತ್ತು ಸ್ವಾಧೀನ ಪತ್ರಗಳನ್ನು ಲಗತ್ತಿಸಿದೆ).

ಆರೋಪ-06 ಲಿಂಗಧೀರನಹಳ್ಳಿ ಗ್ರಾಮದ ಮೂರನೆಯ ಹಂತದಲ್ಲಿ ಸರ್ವೆ ನಂಬರ್ 6/ಪಿ ಮತ್ತು 7/ಪಿ ಗಳಲ್ಲಿ 3 ಎಕರೆ ಜಮೀನನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಆಯುಕ್ತರು ಅಸೋಸಿಯೇಷನ್ ಅಧ್ಯಕ್ಷರಿಂದ ಪ್ರಮಾಣ ಪತ್ರ ಪಡೆದು, ನಂತರ ದಿನಾಂಕ 17/06/2011ರಂದು " ಇನ್ನು ಮುಂದೆ ಪ್ರಾಧಿಕಾರದ ನೌಕರರಲ್ಲದೆ ಎರವಲು ಸೇವೆಯ ನೌಕರರಿಗೆ ನಿವೇಶನಗಳನ್ನು ಹಂಚಿಕೆ ಮಾಡಬಾರದು" ಎಂದು ಪ್ರಾಧಿಕಾರದ ಆಯುಕ್ತರು ಷರತ್ತನ್ನು ವಿಧಿಸಿ ಆದೇಶ ಹೊರಡಿಸಿರುತ್ತಾರೆ. ಈ ಆದೇಶ ಹೊರಡಿಸಿದ ದಿನಾಂಕದ ನಂತರವೂ ಅನೇಕ ನಿವೇಶನಗಳನ್ನು ಎರವಲು ಸೇವಾ ಅಧಿಕಾರಿ/ನೌಕರರಿಗೆ ನೋಂದಣಿ ಮಾಡಿಕೊಡಲಾಗಿದೆ

ಪ್ರಾಧಿಕಾರದ ಕೆಲವು ಹಾಲಿ ಮತ್ತು ನಿವೃತ್ತರಾಗಿದ್ದ ನೌಕರರು 2006ರಲ್ಲಿ ಸದಸ್ಯತ್ವ ಪಡೆದು ನಿವೇಶನಕ್ಕೆ ಹಣ ಪಾವತಿಸಿದ್ದರೂ, ಇವರಿಗೆ ಹಂಚಿಕೆಯಾಗಬೇಕಾದ ನಿವೇಶನಗಳನ್ನು ಪ್ರಾಧಿಕಾರದ, *ಸರ್ಕಾರದ ಹಾಗೂ ಬೈಲಾದಲ್ಲಿರುವ ನಿಯಮಗಳನ್ನು ಉಲ್ಲಂಘಿಸಿ 2006ರಿಂದ 2016ರವರೆಗಿನ ವಿವಿಧ ವರ್ಷಗಳ ಅವಧಿಯಲ್ಲಿ ಪ್ರಾಧಿಕಾರಕ್ಕೆ ಎರವಲು ಸೇವೆ ಮೇಲೆ ಬಂದ ಅಧಿಕಾರಿ/ನೌಕರರಿಗೆ, ಗುತ್ತಿಗೆ/ಹೊರಗುತ್ತಿಗೆ ನೌಕರರಿಗೆ ಹಾಗೂ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ/ನೌಕರರಿಗೆ ಮತ್ತು ಸಾರ್ವಜನಿಕರಿಗೆ ಹೆಚ್ಚಿನ ಹಣ ಪಡೆದುಕೊಂಡು ನಿವೇಶನಗಳನ್ನು ಹಂಚಿಕೆ ಮಾಡಿ ನೋಂದಣಿ ಮಾಡಿಕೊಟ್ಟಿರುತ್ತಾರೆ.* (ಅನುಬಂಧ -15ರಲ್ಲಿ ಕ್ರಯಪತ್ರ ಮತ್ತು ಸ್ವಾಧೀನ ಪತ್ರಗಳನ್ನು ಲಗತ್ತಿಸಿದೆ). ಈಗಿನ ಪ್ರಾಧಿಕಾರದ ಆಯುಕ್ತರು ಅಸೋಸಿಯೇಷನ್‌ನವರೊಡನೆ ಶಾಮೀಲಾಗಿ ಇತ್ತೀಚೆಗೆ ಎರವಲು ಸೇವಾ ಅಧಿಕಾರಿ/ನೌಕರರನ್ನು ಪ್ರಾಧಿಕಾರದ ನೌಕರರಂತೆ ಪರಿಗಣಿಸಿ, ನಿವೇಶನ ಹಂಚಿಕೆ ಮಾಡಬಹುದೆಂದು ಆದೇಶ ಮಾಡಿರುವುದಾಗಿ ತಿಳಿದು ಬಂದಿರುತ್ತದೆ.

ಆರೋಪ-07 ಪ್ರಾಧಿಕಾರದ ನಿವೃತ್ತ ನೌಕರರಿಗೆ ಮಾತ್ರ *ಲಿಂಗಧೀರನಹಳ್ಳಿ ಗ್ರಾಮದಲ್ಲಿ ನಂತರದ ಹಂತಗಳಲ್ಲಿ ಬಿಡುಗಡೆಯಾಗುವ 7 ಎಕರೆ, 5 ಎಕರೆ ಮತ್ತು ನಂತರದ 3 ಎಕರೆ ಜಮೀನುಗಳಲ್ಲಿ ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಲಾಗುವುದು ಎಂಬ ಬಗ್ಗೆ ಸಂಘದ ವತಿಯಿಂದ ಹಿಂಬರಹ ನೀಡಲಾಗಿದ್ದರೂ, ಇಲ್ಲಿಯವರೆಗೂ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.* (ಅನುಬಂಧ -10ರಲ್ಲಿ ಹಿಂಬರಹ ನೀಡಿದ ಪ್ರತಿಗಳನ್ನು ಲಗತ್ತಿಸಿದೆ).

ಆರೋಪ-08 ಪ್ರಾಧಿಕಾರದ ದಿನಾಂಕ 17/06/2011ರಂದು ಪ್ರಾಧಿಕಾರದ ಎರವಲು ಸೇವೆಯ ನೌಕರರಿಗೆ ಇನ್ನು ಮುಂದೆ ನಿವೇಶನ ಹಂಚಿಕೆ ಮಾಡಬಾರದು ಮತ್ತು ಇನ್ನು ಮುಂದೆ ಹಂಚಿಕೆ ಮಾಡುವ ನಿವೇಶನಗಳಿಗೆ 10 ವರ್ಷ ಪರಭಾರೆ ಮಾಡಬಾರದು ಹಾಗೂ ಈಗಾಗಲೇ ನಿವೇಶನ ಹಂಚಿಕೆಯಾಗಿರುವ ನೌಕರರಿಗೆ ಮತ್ತೊಮ್ಮೆ ನಿವೇಶನವನ್ನು ಹಂಚಿಕೆ ಮಾಡಬಾರದು ಎಂದು ಆಯುಕ್ತರು ಮೂರು ಷರತ್ತುಗಳನ್ನು ವಿಧಿಸಿ ಆದೇಶ ಹೊರಡಿಸಿರುತ್ತಾರೆ. ಆದರೆ *ಪ್ರಾಧಿಕಾರದ ನೌಕರರಿಗೆ ಒಂದು ನಿವೇಶನ ಮತ್ತು ಅವರ ಕುಟುಂಬ ವರ್ಗದವರಿಗೆ ಮತ್ತೊಂದು ನಿವೇಶನವನ್ನು ನೀಡಿ ಈ ಷರತ್ತನ್ನು ಉಲ್ಲಂಘಿಸಲಾಗಿರುತ್ತದೆ ಹಾಗೂ ಕೆಲವರಿಗೆ 10 ವರ್ಷಗಳ ಪರಭಾರೆ ಮಾಡಬಾರದು ಎಂಬ ನಿಯಮವನ್ನು ವಿಧಿಸದೇ ಸ್ವಾಧೀನ ಪತ್ರ ನೀಡಲಾಗಿರುತ್ತದೆ.*

ಆರೋಪ-09 ಪ್ರಾಧಿಕಾರದ ಬಹುತೇಕ *ಅಧಿಕಾರಿ/ನೌಕರರಿಗೆ 20X30, 20X40 ನಿವೇಶನಗಳನ್ನು ಹಂಚಿಕೆ ಮಾಡಿ, ಎರವಲು ಸೇವೆಯ ನೌಕರರಿಗೆ, ವಿವಿಧ ಇಲಾಖೆಗಳ ನೌಕರರಿಗೆ ಮತ್ತು ಸಾರ್ವಜನಿಕರಿಗೆ ಬಹುಪಾಲು 30X40 ಹಾಗೂ ಹೆಚ್ಚಿನ ಅಳತೆಯ ನಿವೇಶನಗಳನ್ನು* ಹಂಚಿಕೆ ಮಾಡಲಾಗಿರುತ್ತದೆ.

ಆರೋಪ-10 ಶ್ರೀ ಡಿ.ಟಿ. ಕೃಷ್ಣೇಗೌಡ, ಸಹಾಯಕ ಕಾನೂನು ಅಧಿಕಾರಿ, ಬಿಡಿಎ. ಇವರು ಅಸೋಸಿಯೇಷನ್ ವಿರುದ್ಧ ಹೈಕೋರ್ಟ್‌ನಲ್ಲಿ ಹೂಡಿದ್ದ ದಾವೆ ಸಂಖ್ಯೆ:18658/2009 ರಲ್ಲಿ ಅಸೋಸಿಯೇಷನ್ ದಾಖಲಾತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಉಚ್ಚ ನ್ಯಾಯಾಲಯವು ದಿನಾಂಕ

**10/01/2012**ರಂದು ತೀರ್ಪನ್ನು ನೀಡಿರುತ್ತದೆ. ನಂತರ ಶ್ರೀ ಡಿ.ಟಿ. ಕೃಷ್ಣೇಗೌಡ ರವರಿಗೆ ಅಸೋಸಿಯೇಷನ್‌ನವರು ನಿವೇಶನ ಹಂಚಿಕೆ ಮಾಡಿದ ತರುವಾಯ ಶ್ರೀ ಡಿ.ಟಿ. ಕೃಷ್ಣೇಗೌಡ ರವರು ದಿನಾಂಕ **02/08/2014**ರಂದು ದಾವೆಯನ್ನು ವಾಪಸ್ಸು ತೆಗೆದುಕೊಂಡಿರುತ್ತಾರೆ. ಈ ಮಧ್ಯೆ ಅಂದರೆ ದಿನಾಂಕ *10/01/2012ರಿಂದ 02/08/2014ರೊಳಗೆ ದಾಖಲಾತಿಗಳನ್ನು ನ್ಯಾಯಾಲಯವು ಮುಟ್ಟುಗೋಲು ಹಾಕಿಕೊಂಡಿದ್ದರೂ, ಅಸೋಸಿಯೇಷನ್ ವತಿಯಿಂದ ನಿವೇಶನಗಳನ್ನು ನೋಂದಣಿ ಮಾಡಿಕೊಟ್ಟು ನ್ಯಾಯಾಲಯ ನಿಂದನೆ ಎಸಗಿರಲಾಗಿರುತ್ತದೆ. (ಈ ಅವಧಿಯಲ್ಲಿ ನೋಂದಣಿ ಮಾಡಿಕೊಟ್ಟಿರುವ ಕ್ರಯಪತ್ರವನ್ನು ಲಗತ್ತಿಸಿದೆ – ಅನುಬಂಧ 25).*

ಆರೋಪ–11

ಶ್ರೀ ಡಿ.ಟಿ. ಕೃಷ್ಣೇಗೌಡ, ಸಹಾಯಕ ಕಾನೂನು ಅಧಿಕಾರಿ, ಬಿಡಿಎ, ಇವರ ರಿಟ್ ಅರ್ಜಿ ಸಂಖ್ಯೆ: 18658/2009ಕ್ಕೆ ಸಂಬಂಧಿಸಿದಂತೆ ಅಸೋಸಿಯೇಷನ್ ವತಿಯಿಂದ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ. 16/ಪಿ ರ ಬಗ್ಗೆ *ಸಿವಿಲ್ ನ್ಯಾಯಾಲಯದಲ್ಲಿ OS NO. 6292/07 ರಂತೆ ದಾವೆ ಇದ್ದುದ್ದರಿಂದ, ನಿವೇಶನ ಸಂಖ್ಯೆ 46ರಿಂದ 67ರವರೆಗೆ ಒಟ್ಟು 22 ನಿವೇಶನಗಳಿಗೆ ಹಂಚಿಕೆ ಪತ್ರ ಸಿದ್ಧಪಡಿಸಿದ್ದರೂ, ಹಂಚಿಕೆ ಪತ್ರ ನೀಡಿರುವುದಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಲಾಗಿರುತ್ತದೆ. ಈ ಹಂಚಿಕೆ ಪಟ್ಟಿಯಲ್ಲಿ ಅರ್ಜಿದಾರರಾದ ನಮ್ಮಗಳ ಹೆಸರುಗಳನ್ನು ಸೇರಿಸಲಾಗಿರುತ್ತದೆ. (ನ್ಯಾಯಾಲಯಕ್ಕೆ ಸಲ್ಲಿಸಿರುವ ಪಟ್ಟಿ ಲಗತ್ತಿಸಿದೆ- ಅನುಬಂಧ 26).* ಈ ನಿವೇಶನಗಳನ್ನು ಪ್ರಾಧಿಕಾರದ ಪ್ರಸ್ತಾವಿತ ಅನುಮೋದಿತ ನಕ್ಷೆಯಲ್ಲಿ ಸೇರಿಸಿದ್ದು, ನಂತರ ತಿದ್ದುಪಡಿಯಾದ ಅನುಮೋದಿತ ನಕ್ಷೆಯಲ್ಲಿ ಸೇರಿಸಿರುವುದಿಲ್ಲ. ಆದರೆ *ಈ ಜಮೀನಿಗೆ ಸಂಬಂಧಪಟ್ಟ ಸಿವಿಲ್ ನ್ಯಾಯಾಲಯದ OS NO. 6292/07 ರ ದಾವೆಯು 2007ರಲ್ಲಿಯೇ ಇತ್ಯರ್ಥಗೊಂಡಿದ್ದು, ಈ ಜಮೀನಿನ ಜಾಗದಲ್ಲಿ ಒಳಗೊಳ್ಳುವ ನಿವೇಶನ ಸಂಖ್ಯೆ: 64 ನ್ನು 40 x 60 ಅಡಿ ಅಳತೆಯ ನಿವೇಶನವನ್ನಾಗಿ ರಚಿಸಿ ಸಾರ್ವಜನಿಕರಾದ ಶ್ರೀ ಶಿವನಂಜಯ್ಯ ಎಂಬುವವರಿಗೆ ಅಸೋಸಿಯೇಷನ್ ವತಿಯಿಂದ ದಿನಾಂಕ 10/03/2015ರಲ್ಲಿ ಕಾನೂನುಬಾಹಿರವಾಗಿ ನೋಂದಣಿ ಮಾಡಿಕೊಡಲಾಗಿರುತ್ತದೆ. (ನಿವೇಶನ ಸಂಖ್ಯೆ 64ರ ಕ್ರಯಪತ್ರದ ಪ್ರತಿ ಲಗತ್ತಿಸಿದೆ ಅನುಬಂಧ–27).* ಆದರೆ *ನ್ಯಾಯಾಲಯಕ್ಕೆ ನೀಡಿದ ಹಂಚಿಕೆ ಪಟ್ಟಿಯಲ್ಲಿ ಪ್ರಾಧಿಕಾರದ ನೌಕರರಾದ ಶ್ರೀ ಗುಂಡೂರಾವ್ ಹೆಸರು ಇರುತ್ತದೆ. ಈ ಜಾಗದಲ್ಲಿ ಬರುವ ಉಳಿದ 21 ನಿವೇಶನಗಳನ್ನು, ಯಾರ್‍ಯಾರಿಗೆ ಹಂಚಿಕೆ ಮಾಡಿದ್ದಾರೆಂದು ತಿಳಿದುಬರುತ್ತಿಲ್ಲ.* ಅಸೋಸಿಯೇಷನ್ ತನ್ನ ಸದಸ್ಯರಿಗೆ ಗರಿಷ್ಠ 30X40 ಅಡಿ ಅಳತೆಯ ನಿವೇಶನಗಳನ್ನು ಮಾತ್ರ ಹಂಚಿಕೆ ಮಾಡಬಹುದಾಗಿದ್ದು, ದೊಡ್ಡಕಲ್ಲಸಂದ್ರ ಗ್ರಾಮದ ಸ.ನಂ.16/ಪಿ ಜಮೀನಿನ ಬಗ್ಗೆ ನ್ಯಾಯಾಲಯದಲ್ಲಿ ವಿವಾದವಿದೆ ಎಂದು ತಿಳಿಸಿ, ಈ ಜಮೀನಿನಲ್ಲಿ ನಿವೇಶನ ಸಂಖ್ಯೆ 64ನ್ನು 40X60 ಅಡಿ ಅಳತೆಯ ನಿವೇಶನವನ್ನಾಗಿ ರಚಿಸಿ, ಕಾನೂನುಬಾಹಿರವಾಗಿ ಸಾರ್ವಜನಿಕ ವ್ಯಕ್ತಿಗೆ ನೋಂದಣಿ ಮಾಡಲಾಗಿರುತ್ತದೆ.

ಆರೋಪ–12

ದೊಡ್ಡಕಲ್ಲಸಂದ್ರ ಗ್ರಾಮದ *ಪ್ರಾಧಿಕಾರದ ಅಧಿಕೃತ ಅನುಮೋದಿತ ನಕ್ಷೆಯಲ್ಲಿ ಇಲ್ಲದ ನಿವೇಶನ ಸಂಖ್ಯೆ 5(D1) ಮತ್ತು 5(Y) ನಿವೇಶನಗಳನ್ನು ಅನಧಿಕೃತವಾಗಿ ರಚಿಸಿ,* ಕ್ರಮವಾಗಿ ಶ್ರೀ ಆರ್. ಸಾಗರ್ ಹಾಗೂ ಶ್ರೀಮತಿ ಆರ್. ಶೈಲಶ್ರೀ ಎಂಬ

ಸಾರ್ವಜನಿಕರಿಗೆ ನೋಂದಣಿ ಮಾಡಿಕೊಟ್ಟು ನಿಯಮ ಉಲ್ಲಂಘನೆ ಮಾಡಲಾಗಿರುತ್ತದೆ. *(ನಿವೇಶನ ಸಂಖ್ಯೆ 5(D1) ಮತ್ತು 5(Y) ಗಳ ಕ್ರಯಪತ್ರದ ಪ್ರತಿ ಲಗತ್ತಿಸಿದೆ. ಅನುಬಂಧ–28)*

ಆರೋಪ–13 ದೊಡ್ಡಕಲ್ಲಸಂದ್ರ ಗ್ರಾಮದ ಪ್ರಾಧಿಕಾರದ *ಅಧಿಕೃತ ಅನುಮೋದಿತ ನಕ್ಷೆಯಲ್ಲಿ ನಿವೇಶನ ಸಂಖ್ಯೆ 334 ಈ ನಿಂದ ಪ್ರಾರಂಭವಾಗಿದ್ದು, 334 A,B,C,D ಮತ್ತು E ಸೇರಿ 5 ನಿವೇಶನಗಳ ಮಾಹಿತಿ ಇರುವುದಿಲ್ಲ.* (ಅನುಬಂಧ –9ರಲ್ಲಿ, ಪ್ರಾಧಿಕಾರದಿಂದ ಅನುಮೋದನೆಗೊಂಡ ಪರಿಷ್ಕೃತ ನಕ್ಷೆಯಲ್ಲಿ ಪರಿಶೀಲಿಸಬಹುದಾಗಿದೆ)

ಆರೋಪ–14 ಲಿಂಗಧೀರನಹಳ್ಳಿ ಗ್ರಾಮದ ಅನುಮೋದಿತ ಬಡಾವಣೆ ನಕ್ಷೆಯಲ್ಲಿ ಸರ್ವೆ ನಂ. 6(ಪಿ) ರಲ್ಲಿ *ನಾಗರಿಕ ಸೌಲಭ್ಯ (Civic Amienties) ದ ನಿವೇಶನ ಸಂಖ್ಯೆ 1(ಎ) ಸುಮಾರು 1 (ಒಂದು) ಎಕರೆ (3833.92 ಚದರ ಮೀಟರ್) ನಿವೇಶನವನ್ನು* ***ಪ್ರಾಧಿಕಾರಕ್ಕೆ ದಿನಾಂಕ 10/01/2008ರಂದು ರಿಲಿಕ್ವಿಷ್‌ಮೆಂಟ್ ಡೀಡ್ (Relinquishment Deed) ಮುಖಾಂತರ ಹಸ್ತಾಂತರಿಸಿದ್ದರೂ, ಅಕ್ರಮವಾಗಿ ಈ ಸಿ.ಎ ನಿವೇಶನವನ್ನು ಅಸೋಸಿಯೇಷನ್ ಅಧ್ಯಕ್ಷರಾದ ಶ್ರೀ ಡಿ.ಎನ್. ಬೆಟ್ಟೇಗೌಡ ಮತ್ತು ಉಪಾಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಎಂ. ಮಲ್ಲಣ್ಣನವರು ಸಾರ್ವಜನಿಕರಾದ ಶ್ರೀ ಉದಯ್ ಎಂಬುವವರಿಗೆ ದಿನಾಂಕ 04/11/2015ರಂದು ನೋಂದಣಿ ಮಾಡಿಕೊಟ್ಟು ಕಾನೂನು ಉಲ್ಲಂಘನೆ ಮಾಡಿರುತ್ತಾರೆ. (Relinquishment Deed ಮತ್ತು ಕ್ರಯಪತ್ರದ ಪ್ರತಿ ಲಗತ್ತಿಸಿದೆ. ಅನುಬಂಧ– 29).***

ಆರೋಪ–15 ಪ್ರಾಧಿಕಾರದ ಪರಿಷ್ಕೃತ ಮಾಸ್ಟರ್ ಪ್ಲಾನ್ 2015 (ವಲಯ ನಿಯಂತ್ರಣ)ದ ಕಾನೂನಿನಂತೆ ***ರಸ್ತೆ, ಆಟದ ಮೈದಾನ, ಪಾರ್ಕ್ ಮತ್ತು ನಾಗರಿಕ ಸೌಲಭ್ಯಗಳಿಗೆ ಜಾಗಗಳನ್ನು ಮೀಸಲಿಟ್ಟಿರುವುದಿಲ್ಲ. (ಪ್ರತಿ ಲಗತ್ತಿಸಿದೆ. ಅನುಬಂಧ– 30).*** ನಿಯಮಾವಳಿಗಳ ಪ್ರಕಾರ ಮಂಜೂರಾಗಿರುವ ನಕ್ಷೆ ಪ್ರಕಾರ ಸಿ.ಎ ನಿವೇಶನ ಬಿಟ್ಟಿರುವುದಿಲ್ಲ. (ಅನುಬಂಧ 9 ಮತ್ತು 12ರಲ್ಲಿರುವ ಪ್ರಾಧಿಕಾರದ ಪರಿಷ್ಕೃತ ನಕ್ಷೆಯಲ್ಲಿ ಪರಿಶೀಲಿಸಬಹುದಾಗಿದೆ)

ಆರೋಪ–16 ಪ್ರಾಧಿಕಾರದ *ಅಧಿಕೃತ ಅನುಮೋದಿತ ನಕ್ಷೆಯಲ್ಲಿ ನಿಗದಿಗೊಳಿಸಿರುವ ನಿವೇಶನಗಳ ವಿಸ್ತೀರ್ಣವನ್ನು ಹೆಚ್ಚು ಮಾಡಿ ರಸ್ತೆಗಳನ್ನು ಒತ್ತುವರಿ ಮಾಡಿಕೊಂಡು ನಿಯಮ ಉಲ್ಲಂಘಿಸಲಾಗಿರುತ್ತದೆ.* ರಸ್ತೆಗಳನ್ನು, ಬಿಡಿಎ ಟೌನ್ ಪ್ಲಾನಿಂಗ್ ಆಕ್ಟ್‌ನ ಪ್ರಕಾರವಾಗಿ ರಚಿಸದೇ ಪ್ರಾಧಿಕಾರದ ಅನುಮೋದಿತ ನಕ್ಷೆಯಲ್ಲಿ ತೋರಿಸಿರುವ ಅಳತೆಯ ರಸ್ತೆಗಳನ್ನು ರಚಿಸದೇ ನಿವೇಶನಗಳ ವಿಸ್ತೀರ್ಣವನ್ನು ಹೆಚ್ಚುಗೊಳಿಸಿ, ರಸ್ತೆಗಳ ವಿಸ್ತೀರ್ಣವನ್ನು ಕಡಿಮೆಗೊಳಿಸಿ ಕಾನೂನು ಉಲ್ಲಂಘನೆ ಮಾಡಲಾಗಿರುತ್ತದೆ. ಉದಾಹರಣೆ *ಲಿಂಗಧೀರನಹಳ್ಳಿ ಗ್ರಾಮದಲ್ಲಿ ಪ್ರಾಧಿಕಾರದ ಅಧಿಕೃತ ಅನುಮೋದಿತ ನಕ್ಷೆಯಲ್ಲಿ ನಿವೇಶನ ಸಂಖ್ಯೆ 313ರ ಅಳತೆಯು 9.14 x 6.1 ಮೀಟರ್ (30 x 20 ಅಡಿ) ಇದ್ದು, ಈ ನಿವೇಶನವನ್ನು ಶ್ರೀ ಅಭಿಷೇಕ್ ಎಂ.*

ಮಠಪತಿ ಎಂಬ ಸಾರ್ವಜನಿಕರಿಗೆ ಜಯನಗರ (ಕೆಂಗೇರಿ) ಹಿರಿಯ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ದಾಸ್ತಾವೇಜು ಸಂಖ್ಯೆ:ಏಇಓ-1-02689-2015-16 ದಿನಾಂಕ: 17/06/2015 ರಲ್ಲಿ 9.14 x 12.19 ಮೀಟರ್ (30 x 40 ಅಡಿ) ಅಳತೆ ನಿವೇಶನವನ್ನಾಗಿ ರಚಿಸಿ ನೋಂದಣಿ ಮಾಡಿಕೊಡಲಾಗಿರುತ್ತದೆ. (ಕ್ರಯಪತ್ರದ ಪ್ರತಿ ಲಗತ್ತಿಸಿದೆ. ಅನುಬಂಧ - 31). ಇದೇ ರೀತಿ ಲಿಂಗಧೀರನಹಳ್ಳಿಯ ನಿವೇಶನ ಸಂಖ್ಯೆ 299, 301, 309, 313 ನಿವೇಶನಗಳು ಸೇರಿದಂತೆ ಅನೇಕ ನಿವೇಶನಗಳನ್ನು ಪ್ರಾಧಿಕಾರದ ಅಧಿಕೃತ ಅನುಮೋದಿತ ನಕ್ಷೆಯಲ್ಲಿ ಸೂಚಿಸಿರುವಂತಹ ಅಳತೆಯ ನಿವೇಶನಗಳನ್ನಾಗಿ ರಚನೆ ಮಾಡಿರುವುದಿಲ್ಲ.

ಈ ರೀತಿ ದೊಡ್ಡಕಲ್ಲಸಂದ್ರ ಮತ್ತು ಲಿಂಗಧೀರನಹಳ್ಳಿ ಗ್ರಾಮಗಳಲ್ಲಿ ಅಧಿಕೃತ ಅನುಮೋದಿತ ಬಡಾವಣೆಯ ನಕ್ಷೆಯಲ್ಲಿ 20X30 ಅಡಿ ಅಳತೆಯ ನಿವೇಶನಗಳನ್ನು 20X40 ಅಡಿಗಳಾಗಿ, 30X30 ಅಡಿ ಅಳತೆಯ ನಿವೇಶನಗಳನ್ನು 30X40 ಅಡಿಗಳಾಗಿ, 30X20 ಅಡಿ ಅಳತೆಯ ನಿವೇಶನಗಳನ್ನು 25X40 ಅಡಿ ನಿವೇಶನಗಳನ್ನಾಗಿ ರಸ್ತೆಯನ್ನು ಅಕ್ರಮವಾಗಿ ಒತ್ತುವರಿ ಮಾಡಿ ನೋಂದಣಿ ಮಾಡಿಕೊಟ್ಟಿರುತ್ತಾರೆ.

ಆರೋಪ-17 ಬಡಾವಣೆ ರಚನೆ ಮಾಡುವ ಸಂದರ್ಭದಲ್ಲಿ ರೈತರು ಸುತ್ತಮುತ್ತಲಿನ ಗ್ರಾಮಸ್ಥರು ಮುಖಂಡರು ಮತ್ತು ನೌಕರರ ಸಂಘದವರು ಕರಾರು ಒಪ್ಪಂದದಂತೆ ಒಂದು ಎಕರೆಗೆ ನಿವೇಶನವನ್ನು ಮುಕ್ತಟೆ ನೀಡಬೇಕೆಂದು ಅಥವಾ ಅವರು ತಿಳಿಸುವ ವ್ಯಕ್ತಿಗೆ ಒಂದು ನಿವೇಶನವನ್ನು ನೀಡಬೇಕೆಂದು ಸಂಘದವರು ಮಾಡಿಕೊಂಡಿರುವ ಒಪ್ಪಂದವು ಕಾನೂನುಬಾಹಿರವಾಗಿರುತ್ತದೆ. (ಕರಾರು ಒಪ್ಪಂದ ಪತ್ರವನ್ನು ಲಗತ್ತಿಸಿದೆ - ಅನುಬಂಧ 32) ಏಕೆಂದರೆ ಪ್ರಾಧಿಕಾರವು ಅಸೋಸಿಯೇಷನ್‌ಗೆ ನೀಡಿರುವ ದೊಡ್ಡಕಲ್ಲಸಂದ್ರ ಗ್ರಾಮದ 15(ಪಿ), 16(ಪಿ) ಮತ್ತು 17(ಪಿ) ಗಳನ್ನು ಜೆ.ಪಿ. ನಗರ 9ನೇ ಹಂತದ ಬಡಾವಣೆ ನಿರ್ಮಾಣ ಮಾಡಲು ಹಾಗೂ ಲಿಂಗಧೀರನಹಳ್ಳಿ ಗ್ರಾಮದ ಕೆಲವು ಸರ್ವೆ ನಂಬರ್‌ಗಳ ಜಮೀನುಗಳನ್ನು ಬನಶಂಕರಿ 6ನೇ ಹಂತದ ಬಡಾವಣೆ ನಿರ್ಮಾಣ ಮಾಡಲು ಸ್ವಾಧೀನಪಡಿಸಿಕೊಂಡಿರುತ್ತದೆ. ಈ ರೀತಿ ಸರ್ಕಾರದ ನಿಯಮಾವಳಿಗಳಂತೆ ಸ್ವಾಧೀನಪಡಿಸಿಕೊಂಡು ನೀಡಿದ ಜಮೀನುಗಳಲ್ಲಿ ಬಡಾವಣೆ ನಿರ್ಮಾಣ ಮಾಡುವಾಗ ಸುತ್ತಮುತ್ತಲಿನ ಗ್ರಾಮಸ್ಥರು, ಮುಖಂಡರು ಅಡ್ಡಿಪಡಿಸಿದರೆಂದು ಏಕಾಏಕಿ ಕೆಲವೇ ವ್ಯಕ್ತಿಗಳು ಕರಾರು ಒಪ್ಪಂದ ಅಥವಾ ಒಳ ಒಪ್ಪಂದ ಮಾಡಿಕೊಂಡಿರುವುದಾಗಿ ತಿಳಿದುಬಂದಿರುತ್ತದೆ. ಆದರೆ ಈ ಒಳ ಒಪ್ಪಂದಕ್ಕೆ ಮಾನ್ಯತೆ ಇರುವುದಿಲ್ಲ ಮತ್ತು ಈ ಕರಾರು ಒಪ್ಪಂದವು ನೋಂದಣಿಯಾಗಿರುವುದಿಲ್ಲ. ಏಕೆಂದರೆ ಸರ್ಕಾರದಿಂದ ಜಮೀನನ್ನು ನೀಡಲು ಅನುಮತಿ ಪಡೆದು, ರಿಯಾಯಿತಿ ದರದಲ್ಲಿ ಪ್ರಾಧಿಕಾರವು ತನ್ನ ನೌಕರರಿಗೆ ನಿವೇಶನ ಹಂಚಿಕೆ ಮಾಡಲು ಪ್ರಾಧಿಕಾರವು ಸ್ವಾಧೀನಪಡಿಸಿಕೊಂಡಿದ್ದ ಸರ್ಕಾರಿ ಜಮೀನನ್ನು ಸಂಘಕ್ಕೆ ನೀಡಿರುತ್ತದೆ. ಬಡಾವಣೆ ನಿರ್ಮಾಣ ಮಾಡುವ ಸಮಯದಲ್ಲಿ ಅಡ್ಡಿಯುಂಟಾದ ವಿಚಾರವನ್ನು ಪ್ರಾಧಿಕಾರ ಅಥವಾ ಸರ್ಕಾರದ ಗಮನಕ್ಕೆ ಅಸೋಸಿಯೇಷನ್‌ನವರು ತಂದು ಮುಂದಿನ ಕ್ರಮ ಕೈಗೊಳ್ಳಬಹುದಾಗಿತ್ತು. ಇದಲ್ಲದೇ ಪೊಲೀಸರ ರಕ್ಷಣೆ ಪಡೆದು ಬಡಾವಣೆ

ನಿರ್ಮಾಣ ಕಾರ್ಯ ಕೈಗೊಳ್ಳಬಹುದಾಗಿತ್ತು. ಇಲ್ಲವೇ ಸಂಘದವರು ಜಮೀನನ್ನು ವಾಪಸ್ಸು ಪ್ರಾಧಿಕಾರಕ್ಕೆ ನೀಡಬಹುದಾಗಿತ್ತು. ಸರ್ಕಾರದಿಂದ ರಿಯಾಯಿತಿ ದರದಲ್ಲಿ ಅಂದರೆ ದೊಡ್ಡಕಲ್ಲಸಂದ್ರದಲ್ಲಿ ಒಂದು ಎಕರೆಗೆ ರೂ.1,86,452ಗಳನ್ನು ಅಸೋಸಿಯೇಷನ್ ಪಾವತಿಸಿ, ಗ್ರಾಮಸ್ಥರಿಗೆ ಅಥವಾ ಅವರು ಸೂಚಿಸಿದ ವ್ಯಕ್ತಿಗಳಿಗೆ ನಿವೇಶನ ಹಂಚಿಕೆ ಮಾಡಲು ತೀರ್ಮಾನ ಅಥವಾ ಒಪ್ಪಂದ ಮಾಡಿಕೊಳ್ಳುವ ಅಧಿಕಾರ ಸರ್ವ ಸದಸ್ಯರ ಸಭೆಗೂ ಇರುವುದಿಲ್ಲ ಹಾಗೂ ಪ್ರಾಧಿಕಾರವು ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಕಾನೂನಿನ ಪ್ರಕಾರ ಇತರರು ಅಡ್ಡಿಪಡಿಸಲು ಸಾಧ್ಯವಿಲ್ಲ. ಈ ಎಲ್ಲಾ ಆಗುಹೋಗುಗಳನ್ನು ಪ್ರಾಧಿಕಾರ ಅಥವಾ ಸರ್ಕಾರದ ಗಮನಕ್ಕೆ ತಂದು ನಂತರ ಸರ್ಕಾರದ ಅನುಮತಿ ಪಡೆದು ಕ್ರಮ ಕೈಗೊಳ್ಳಬೇಕಾಗಿರುತ್ತದೆ

ಆರೋಪ–18 ಅಸೋಸಿಯೇಷನ್‌ನವರು ನಿವೇಶನಗಳನ್ನು ನೋಂದಣಿ ಮಾಡಿಕೊಡುವಾಗ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಕೆಲವರು ಹೀಗೆ ಇಷ್ಟಬಂದಹಾಗೆ ಕ್ರಯಪತ್ರದಲ್ಲಿ ಸಹಿ ಮಾಡಿರುತ್ತಾರೆ. ಈ ರೀತಿ ಅವ್ಯವಹಾರ ಎಸಗಲು ನಿರ್ದಿಷ್ಟವಾಗಿ ಇಂತಹವರು ಸಹಿ ಮಾಡಬೇಕು ಎಂದು ಜವಾಬ್ದಾರಿ ನಿಗದಿಪಡಿಸಿರುವುದಿಲ್ಲ.

ಆರೋಪ–19 ಪ್ರಾಧಿಕಾರದಲ್ಲಿ ಬಿಡಿಎ ನೌಕರರ ಸಂಘ ಮತ್ತು ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘ ಎಂದು ಎರಡು ಸಂಘಗಳಿದ್ದು, ಬಿಡಿಎ ನೌಕರರ ಸಂಘಕ್ಕೆ ಮಾತ್ರ ಬೈಲಾ ಪ್ರಕಾರ ಕಾಲಕಾಲಕ್ಕೆ ಸರಿಯಾಗಿ ಚುನಾವಣೆಗಳು ನಡೆಯುತ್ತಿರುತ್ತದೆ. ಆದರೆ ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘವು ನೋಂದಣಿಯಾದಾಗಿನಿಂದ ಇಲ್ಲಿಯವರೆಗೂ ಚುನಾವಣೆಗಳು ನಡೆದಿಲ್ಲ, ಸರ್ವಸದಸ್ಯರ ಮತ್ತು ವಿಶೇಷ ಸರ್ವ ಸದಸ್ಯರ ಸಭೆಗಳು ನಡೆದಿಲ್ಲ ಹಾಗೂ ಎಲ್ಲಾ ಸದಸ್ಯರುಗಳಿಗೆ ಅಜೆಂಡಾ ಮತ್ತು ಸಭಾಸೂಚನಾ ಪತ್ರವನ್ನು ಕಳುಹಿಸಿರುವುದಿಲ್ಲ. ಎರಡು ಸಂಘಗಳಿಗೂ ಒಬ್ಬರೇ ಅಧ್ಯಕ್ಷರಾಗಿದ್ದುಕೊಂಡು ಪ್ರಾಧಿಕಾರದ ನೌಕರರ ಸಂಘದ ದಾಖಲಾತಿಗಳನ್ನೇ ಪ್ರಾಧಿಕಾರದ ಕ್ಷೇಮಾಭಿವೃದ್ಧಿ ಸಂಘಕ್ಕೂ ಅನ್ವಯಿಸುವಂತೆ ಸಲ್ಲಿಸಿರುತ್ತಾರೆ.

ಆರೋಪ–20 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಕ್ಷೇಮಾಭಿವೃದ್ಧಿ ಸಂಘವು 20ನೇ ಅಕ್ಟೋಬರ್ 2001ರಂದು ಕರ್ನಾಟಕ ಸೊಸೈಟೀಸ್ ಆಕ್ಟ್, 1960ರಂತೆ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿಯಾಗಿದ್ದು, ಪ್ರಥಮವಾಗಿ ಶ್ರೀ ಕೆ. ದಿವಾಕರ್ ಎಂಬುವವರು ಅಧ್ಯಕ್ಷರಾಗಿದ್ದರು. ಬೈಲಾ ಪ್ರಕಾರ ಮೂರು ವರ್ಷಗಳಿಗೊಮ್ಮೆ ಅಸೋಸಿಯೇಷನ್‌ಗೆ ಚುನಾವಣೆ ನಡೆಸಬೇಕಾಗಿರುತ್ತದೆ ಮತ್ತು ಪ್ರತಿ ವರ್ಷವೂ 30ನೇ ಸೆಪ್ಟೆಂಬರ್‌ನೊಳಗೆ ವಾರ್ಷಿಕ ಸರ್ವಸದಸ್ಯರ ಸಭೆ ಕರೆಯಬೇಕಾಗಿರುತ್ತದೆ. ಶ್ರೀ ಡಿ.ಎನ್. ಬೆಟ್ಟೇಗೌಡರು 2002–03ರಿಂದ ಅಸೋಸಿಯೇಷನ್ ಅಧ್ಯಕ್ಷರಾಗಿದ್ದು, ಶ್ರೀ ಕೆ ದಿವಾಕರ್‌ರವರ 3 ವರ್ಷಗಳ ಅಧ್ಯಕ್ಷ ಅವಧಿ ಮುಕ್ತಾಯಗೊಳ್ಳುವ ಪೂರ್ವದಲ್ಲಿ ಶ್ರೀ ಡಿ.ಎನ್. ಬೆಟ್ಟೇಗೌಡರು ಹೇಗೆ ಅಧ್ಯಕ್ಷರಾದರು ಎಂಬುದು ಅತಿಶಯೋಕ್ತಿಯ ಸಂಗತಿಯಾಗಿದೆ. ಶ್ರೀ ಡಿ.ಎನ್. ಬೆಟ್ಟೇಗೌಡರು ಯಾವ ಚುನಾವಣೆ ಎದುರಿಸಿ ಏಕಾಏಕಿ ಅಧ್ಯಕ್ಷರಾದರು ಎಂಬುದು ಬಹಳ ನಿಗೂಢವಾದ ಸಂಗತಿಯಾಗಿರುತ್ತದೆ.

ಆರೋಪ–21 *ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ಸಹಿಗಳ ಕೆಳಗೆ ಬರೆದಿರುವ ದಿನಾಂಕ, ತಿಂಗಳು ಮತ್ತು ವರ್ಷಗಳ ವ್ಯತ್ಯಾಸವಿರುವುದು ಕಂಡುಬರುತ್ತದೆ. ಸದಸ್ಯರ ಸಹಿಗಳುಳ್ಳ ಪಟ್ಟಿಯನ್ನು ಇತರ ಎಲ್ಲಾ ವರ್ಷಗಳ ಪಟ್ಟಿಗೆ ಲಗತ್ತಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅಂದರೆ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನೇ ನಡೆಸದೇ ರೆಕಾರ್ಡ್ ಸೃಷ್ಟಿಮಾಡಿರುವ ಬಗ್ಗೆ ದಾಖಲಾತಿಗಳಿಂದ ಸ್ಪಷ್ಟವಾಗುತ್ತದೆ.*

ಸದರಿ ಎಲ್ಲಾ ಸರ್ವಸದಸ್ಯರ ಸಭೆ ಮತ್ತು ವಿಶೇಷ ಸರ್ವಸದಸ್ಯರ ಸಭೆಯಲ್ಲಿ ತೆಗೆದುಕೊಂಡ *ಸಹಿ ಪಟ್ಟಿಯಲ್ಲಿ ಸಹಿ ಕೆಳಗೆ ಇರುವ ದಿನಾಂಕಗಳನ್ನು ಪರಿಶೀಲಿಸಿದಾಗ ದಾಖಲಾತಿಗಳನ್ನು ವಿರೂಪಗೊಳಿಸಲಾಗಿದ್ದು {Record Tamper} ಮೂಲ ದಾಖಲಾತಿಗಳನ್ನು ಪರಿಶೀಲಿಸಿದಾಗ ನೈಜ ಸ್ಥಿತಿ ಕಂಡುಬರುತ್ತದೆ ಹಾಗೂ ಯಾವುದೇ ಸರ್ವಸದಸ್ಯರ ಅಥವಾ ವಿಶೇಷ ಸರ್ವಸದಸ್ಯರ ಸಭೆ ನಡೆಸದೇ ದಾಖಲಾತಿಗಳನ್ನು ಸೃಷ್ಟಿಮಾಡಿರುವ ಸಂಗತಿ ತಿಳಿದುಬರುತ್ತದೆ. ಇದಲ್ಲದೇ ಸರ್ವ ಸದಸ್ಯರ ಸಭೆಯಲ್ಲಿ ಹಾಜರಿದ್ದ ಒಟ್ಟು ಸದಸ್ಯರು ಹಾಗೂ ಸಹಿ ಮಾಡಿರುವ ಸದಸ್ಯರ ಸಂಖ್ಯೆಯಲ್ಲಿ ವ್ಯತ್ಯಾಸವಿರುವುದು ಕಂಡು ಬರುತ್ತದೆ.* ಪ್ರಾಧಿಕಾರ ಸ್ವಾಧೀನಪಡಿಸಿಕೊಂಡು, ಪ್ರಾಧಿಕಾರದ ಹಾಲಿ ಮತ್ತು ನಿವೃತ್ತ ನೌಕರರಿಗೆ ರಿಯಾಯಿತಿ ದರದಲ್ಲಿ ನಿವೇಶನ ನೀಡಬೇಕೆಂಬ ಒಳ್ಳೆಯ ಉದ್ದೇಶದಿಂದ ಸಂಘಕ್ಕೆ ಜಮೀನನ್ನು ನೀಡಿದ್ದು, ಈ ನಿವೇಶನಗಳನ್ನು ಯಾರಿಗೆ ಬೇಕಾದರೂ ಹಂಚಿಕೆ ಮಾಡಬಹುದೆಂದು ತೀರ್ಮಾನ ಕೈಗೊಳ್ಳುವ ಅಧಿಕಾರವು ನೌಕರರ ಸರ್ವಸದಸ್ಯರ ಸಭೆಗೂ ಇರುವುದಿಲ್ಲ.

ಆರೋಪ–22 ಅಸೋಸಿಯೇಷನ್‌ನವರು ಕಾರ್ಯಕಾರಿ ಸಮಿತಿ ಪಟ್ಟಿ ಮತ್ತು ಪ್ರತಿ ವರ್ಷಕ್ಕೆ ಒಮ್ಮೆ ಲೆಕ್ಕಪತ್ರಗಳ ಆಡಿಟ್ ವರದಿ ಹಾಗೂ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಹಿಯನ್ನು ಒಳಗೊಂಡ ಪಟ್ಟಿಯನ್ನು ಸಂಘಗಳ ನೋಂದಣಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕಾಗಿರುತ್ತದೆ. ಆದರೆ *ಶ್ರೀ ಡಿ.ಎಸ್. ಬೆಟ್ಟೇಗೌಡರು 2002–03 ರಿಂದ ಅಧ್ಯಕ್ಷರಾದ ನಂತರ ನಿಯಮಗಳನ್ನು ಉಲ್ಲಂಘಿಸಿ ದಿನಾಂಕ 20/10/2001ರಿಂದ 31/03/2006ರವರೆಗಿನ ವಾರ್ಷಿಕ ಲೆಕ್ಕಪತ್ರಗಳು, ಆಡಿಟ್ ವರದಿ ಮತ್ತು ಕಾರ್ಯಕಾರಿ ಸಮಿತಿ ಪಟ್ಟಿಗಳು ಹಾಗೂ ಸರ್ವಸದಸ್ಯರ ಸಹಿ ಒಳಗೊಂಡ ಪಟ್ಟಿಗಳನ್ನು ಒಂದೇ ಬಾರಿಗೆ ಸಲ್ಲಿಸಿ, ದಾಖಲಿಸಿ ಕಾನೂನು ಉಲ್ಲಂಘನೆ ಮಾಡಿರುತ್ತಾರೆ.* ಇವುಗಳನ್ನು *ಪರಿಶೀಲಿಸಿದಾಗ ಕೇವಲ ದಿನಾಂಕ ಮತ್ತು ವರ್ಷಗಳ ಬದಲಾವಣೆ ಮಾಡಿಕೊಂಡು ಒಂದೇ ದಿನಾಂಕದಲ್ಲಿ ಎಲ್ಲ ವರ್ಷಗಳ ದಾಖಲೆಗಳನ್ನು ಸಂಘಗಳ ನೋಂದಣಾಧಿಕಾರಿಗಳ ಕಛೇರಿಗೆ ಸಲ್ಲಿಸಲಾಗಿರುತ್ತದೆ.*

ಆರೋಪ–23 ಅಸೋಸಿಯೇಷನ್ ವತಿಯಿಂದ ದಿನಾಂಕ 31/03/2009ರವರೆಗೆ ಮಾತ್ರ ವಾರ್ಷಿಕ ಲೆಕ್ಕಪತ್ರ ಹಾಗೂ ಕಾರ್ಯಕಾರಿ ಸಮಿತಿ ಪಟ್ಟಿಯನ್ನು ದಾಖಲಿಸಿದ್ದು, *ನಂತರದ ಅವಧಿಗೆ ಯಾವುದೇ ದಾಖಲಾತಿಗಳನ್ನು ಸಂಘಗಳ ನೋಂದಣಾಧಿಕಾರಿ ಕಛೇರಿಗೆ ಸಲ್ಲಿಸಿರುವುದಿಲ್ಲ ಎಂದು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರು ನಮಗೆ ಪತ್ರ ಮುಖೇನ ತಿಳಿಸಿದ್ದು,*

ನಿಯಮಾವಳಿಗಳನ್ನು ಪಾಲನ ಮಾಡಿರುವುದಿಲ್ಲ. *(ಪ್ರತಿ ಲಗತ್ತಿಸಿದೆ – ಅನುಬಂಧ-33)*

ಆರೋಪ-24 ಬಿಡಿಎ ನೌಕರರ ಸಂಘದ ಕಾರ್ಯಕಾರಿ ಸಮಿತಿ ಪಟ್ಟಿ ಮತ್ತು *ಪ್ರತಿ ವರ್ಷಕ್ಕೆ ಒಮ್ಮೆ ಲೆಕ್ಕಪತ್ರಗಳ ಆಡಿಟ್ ವರದಿ ಹಾಗೂ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಹಿಯನ್ನು ಒಳಗೊಂಡ ಪಟ್ಟಿಯನ್ನು ಸಂಘಗಳ ನೋಂದಣಾಧಿಕಾರಿಗಳ ಕಛೇರಿಗೆ ಸಲ್ಲಿಸದೇ,* ಆದರೆ ಈ ನಿಯಮ ಉಲ್ಲಂಘಿಸಲಾಗಿರುತ್ತದೆ.

ಆರೋಪ-25 ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ *ಕಂದಾಯ ಇಲಾಖೆಯಡಿ ನೋಂದಾಯಿತವಾಗಿದ್ದು, ಇತರ ಗೃಹ ನಿರ್ಮಾಣ ಸಂಘಗಳಂತೆ ನಿವೇಶನ ರಚಿಸಿ ಹಂಚಿಕೆ ಮಾಡಲು ಮತ್ತು ಒಟ್ಟು ಸದಸ್ಯರ ಶೇಕಡ 10ರಷ್ಟು ಸಹ ಸದಸ್ಯರನ್ನು ಹೊಂದಿ ನಿವೇಶನ ಹಂಚಿಕೆ ಮಾಡಲು ಬೈಲಾದಲ್ಲಿ ಅವಕಾಶವಿರುವುದಿಲ್ಲ* ಎಂದು ಕಂದಾಯ ಇಲಾಖೆಯು ಪತ್ರವನ್ನು ನೀಡಿರುತ್ತದೆ. *(ಪ್ರತಿ ಲಗತ್ತಿಸಿದೆ – ಅನುಬಂಧ 34).*

ಆರೋಪ-26 ಬಡಾವಣೆ ನಿರ್ಮಾಣಕ್ಕೆ *ಪಾರದರ್ಶಕವಾಗಿ ಯಾವುದೇ ಟೆಂಡರ್ ಕರೆಯದೇ ನಿಯಮಗಳನ್ನು ಉಲ್ಲಂಘಿಸಲಾಗಿರುತ್ತದೆ ಮತ್ತು ಸಂಬಂಧಪಟ್ಟ ಗುತ್ತಿಗೆದಾರರು ಯಾರೆಂದು ತಿಳಿಸಿರುವುದಿಲ್ಲ ಹಾಗೂ ಹಣ ದುರುಪಯೋಗ ಮಾಡಿಕೊಂಡು ನಿಯಮಗಳನ್ನು ಉಲ್ಲಂಘನೆ ಮಾಡಲಾಗಿರುತ್ತದೆ. ಈ ಮಾಹಿತಿಗಳನ್ನು ಸರ್ವಸದಸ್ಯರ ಸಭೆ ಅಥವಾ ವಿಶೇಷ ಸರ್ವಸದಸ್ಯರ ಸಭೆಗಳಲ್ಲಿ ಪ್ರಸ್ತಾಪಿಸಿರುವುದಿಲ್ಲ ಮತ್ತು ಮೇಲಾಗಿ ಅಜೆಂಡಾ ಮತ್ತು ಸಭಾ ಸೂಚನಾ ಪತ್ರವನ್ನೇ ಎಲ್ಲಾ ಸದಸ್ಯರಿಗೂ ಕಳುಹಿಸಿರುವುದಿಲ್ಲ.*

ಆರೋಪ-27 ಬಡಾವಣೆ ಖರ್ಚು-ವೆಚ್ಚಗಳ ಬಗ್ಗೆ ಸದಸ್ಯರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಖರ್ಚು-ವೆಚ್ಚಗಳ ಬಗ್ಗೆ ಸರ್ವಸದಸ್ಯರ ಅಥವಾ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದಿಲ್ಲ. *ಸರ್ವಸದಸ್ಯರ ಸಭೆ ಮತ್ತು ವಿಶೇಷ ಸರ್ವ ಸದಸ್ಯರ ಸಭೆಗಳು ನಡೆದಾಗ ಸದಸ್ಯರಿಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಾನೂನಿನಂತೆ 21 ದಿನಗಳ ಮುಂದೆ ಸಭಾ ನೋಟೀಸ್ ಅನ್ನು ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಿರುವುದಿಲ್ಲ ಮತ್ತು ಅಜೆಂಡಾ ಕಳುಹಿಸಿರುವುದಿಲ್ಲ.*

ಆರೋಪ-28 ಎರಡೂ ಸಂಘಗಳ ಬೈಲಾಗಳಲ್ಲಿ ಹಾಲಿ ಸೇವೆಯಲ್ಲಿರುವ ನೌಕರರು ಮಾತ್ರ ಮುಂದುವರೆಯಲು ಅವಕಾಶವಿರುತ್ತದೆ. ಆದರೆ *ಶ್ರೀ ಡಿ.ಎನ್. ಬೆಟ್ಟೇಗೌಡ ಇವರು ನಿವೃತ್ತಿಯಾಗಿದ್ದರೂ ಕ್ಷೇಮಾಭಿವೃದ್ಧಿ ಸಂಘದಲ್ಲಿ ಅಧ್ಯಕ್ಷರಾಗಿ ಮುಂದುವರೆಯುತ್ತಿದ್ದಾರೆ.*

ಆರೋಪ-29 ಪ್ರಾಧಿಕಾರದ ಆಯುಕ್ತರು ನೌಕರರ ಸಂಘಕ್ಕೆ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.15(ಪಿ), 16(ಪಿ) ಮತ್ತು 17(ಪಿ)ಗಳಲ್ಲಿ ಒಟ್ಟು 33 ಎಕರೆ 02 ಗುಂಟೆ ಜಮೀನನ್ನು ತದನಂತರ ಲಭ್ಯವಿದ್ದ ಜಮೀನು *27 ಎಕರೆ 15½ ಗುಂಟೆ ಮಾತ್ರ ಎಂದು ದಿನಾಂಕ 12/06/2013ರಂದು ತಿದ್ದುಪಡಿ ಕ್ರಯಪತ್ರ ನೋಂದಣಿ ಮಾಡಿಕೊಡಲಾಗಿರುತ್ತದೆ. ಈ ಜಮೀನಿನ ವಿಸ್ತೀರ್ಣದ ಲಭ್ಯತೆ ಕಡಿಮೆ ಇದೆ ಎಂದು ಯಾರು ಯಾವ ಆಧಾರದಲ್ಲಿ* ನಿರ್ಣಯ *ಮಾಡಿದ್ದಾರೆಂದು ತಿಳಿದು ಬರುತ್ತಿಲ್ಲ. ಈ ಜಮೀನಿನ ವಿಸ್ತೀರ್ಣವನ್ನು ಸರ್ವೆ ಮಾಡಿಸಿರುವ ಬಗ್ಗೆ ತಿಳಿಯುತ್ತಿಲ್ಲ. ಈ ತಿದ್ದುಪಡಿಯನ್ನು ಯಾವ ಆಧಾರದಲ್ಲಿ ಮಾಡಲಾಗಿದೆ ಮತ್ತು ಸರ್ವೆ ಮಾಡಿಸಲಾಗಿದೆಯೇ?* ಎಂಬಿತ್ಯಾದಿ *ಮಾಹಿತಿಗಳು ಲಭ್ಯವಿಲ್ಲ.* ವಾಸ್ತವವಾಗಿ ದೊಡ್ಡಕಲ್ಲಸಂದ್ರ ಗ್ರಾಮದಲ್ಲಿ 33 ಎಕರೆ 02 ಗುಂಟೆ ಜಮೀನು

ಲಭ್ಯವಿರುತ್ತದೆ. <u>*(ಅನುಬಂಧ-5ರಲ್ಲಿ ತಿದ್ದುಪಡಿ ಕ್ರಯಪತ್ರ ಲಗತ್ತಿಸಿದೆ).*</u>

**ಆರೋಪ-30** ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ. 15(ಪಿ), 16(ಪಿ) ಮತ್ತು 17(ಪಿ) ರ 27 ಎಕರೆ 15½ ಗುಂಟೆ ಜಮೀನಿಗೆ ಪ್ರಾಧಿಕಾರದಿಂದ ಅಧಿಕೃತ ನಕ್ಷೆ ಮಂಜೂರಾತಿ ಮಾಡುವಾಗ ಸರ್ವೆ ನಂ. 19(ಪಿ)ರಲ್ಲಿನ 1 ಎಕರೆ 28 ಗುಂಟೆ ಜಮೀನನ್ನು ಪಾರ್ಕ್ ನಿರ್ಮಾಣ ಮಾಡಲು ನಕ್ಷೆಯಲ್ಲಿ ಸೇರಿಸಿ, ನಕ್ಷೆ ತಯಾರು ಮಾಡಲಾಗಿರುತ್ತದೆ. ಈ ಅನುಮೋದಿತ ನಕ್ಷೆಗೆ ಪ್ರಾಧಿಕಾರದ ಆಯುಕ್ತರು, ನಗರ ಯೋಜನಾ ಸದಸ್ಯರು ಹಾಗೂ ಪ್ರಾಧಿಕಾರದ ಇತರ ಅಧಿಕಾರಿಗಳು ಸಹಿ ಮಾಡಿರುತ್ತಾರೆ. ಆದರೆ <u>***ಸರ್ವೆ ನಂ.19(ಪಿ) ರ 1 ಎಕರೆ 28 ಗುಂಟೆ ಜಮೀನನ್ನು ಅಸೋಸಿಯೇಷನ್‌ಗೆ ಪ್ರಾಧಿಕಾರವು ಈವರೆವಿಗೂ ನೋಂದಣಿ ಮಾಡಿಕೊಟ್ಟಿರುವುದಿಲ್ಲ ಮತ್ತು ಈ ಜಮೀನನ್ನು ಅಸೋಸಿಯೇಷನ್‌ಗೆ ಬಿಡುಗಡೆ ಮಾಡಿರುವ ದಾಖಲಾತಿಗಳು ಲಭ್ಯವಿಲ್ಲವೆಂದು ಪ್ರಾಧಿಕಾರದಿಂದ ದಿನಾಂಕ 7/6/2016ರಂದು ಹಿಂಬರಹ ನೀಡಲಾಗಿರುತ್ತದೆ. (ಹಿಂಬರಹದ ಪ್ರತಿ ಲಗತ್ತಿಸಿದೆ- ಅನುಬಂಧ-35).***</u> ಅಸೋಸಿಯೇಷನ್‌ಗೆ ಬಿಡುಗಡೆಯಾದ ಸರ್ವೆ ನಂ. 15(ಪಿ), 16(ಪಿ) ಮತ್ತು 17(ಪಿ) ರ 27 ಎಕರೆ 15½ ಗುಂಟೆ ಜಮೀನಿನಲ್ಲಿ ನಿಯಮಾವಳಿಗಳಂತೆ ನಿರ್ಮಾಣ ಮಾಡಬೇಕಾದ ಪಾರ್ಕ್ ಅನ್ನು ನಿರ್ಮಾಣ ಮಾಡದೇ, ಅನಧಿಕೃತವಾಗಿ ಸರ್ವೆ ನಂ.19(ಪಿ) ರಲ್ಲಿ 1 ಎಕರೆ 28 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ನಿರ್ಮಾಣ ಮಾಡಲಾಗಿದೆ. <u>***ಈ ಜಾಗವನ್ನು ಅಸೋಸಿಯೇಷನ್‌ನವರು ಅಕ್ರಮವಾಗಿ ಉಪಯೋಗಿಸಿಕೊಂಡಿದ್ದು, ಈ ಹೆಚ್ಚುವರಿ ಜಾಗವನ್ನು ಕ್ರಯಪತ್ರದ ಮುಖಾಂತರ ಅಸೋಸಿಯೇಷನ್‌ಗೆ ನೋಂದಣಿ ಮಾಡಿಕೊಡದೇ ಕಾನೂನು ಉಲ್ಲಂಘನೆ ಮಾಡಿ ಪಾರ್ಕ್ ಮಾಡಲಾಗಿರುತ್ತದೆ.***</u>

**ಆರೋಪ-31** ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂ. 1/4, 7/1, 7/5, 7/6 7/8ಪಿ ಮತ್ತು 7/9ರ ಜಮೀನುಗಳಲ್ಲಿ ಅನೇಕ ನಿವೇಶನಗಳನ್ನು ಅಸೋಸಿಯೇಷನ್‌ನವರು ರಚಿಸಿ ಪ್ರಾಧಿಕಾರದ ನೌಕರರು ಸೇರಿದಂತೆ ಇತರ ಕೆಲವು ಅನರ್ಹರಿಗೂ ಹಂಚಿಕೆ ಮಾಡಿರುತ್ತಾರೆ. ಆದರೆ <u>***ಈ ಸರ್ವೆ ನಂಬರ್‌ಗಳ ಜಮೀನುಗಳನ್ನು ಅಸೋಸಿಯೇಷನ್‌ಗೆ ಕ್ರಯಪತ್ರ ಮಾಡಿಕೊಟ್ಟ ದಾಖಲಾತಿಗಳು ಲಭ್ಯವಿಲ್ಲವೆಂದು ಪ್ರಾಧಿಕಾರದಿಂದ ದಿನಾಂಕ 7/6/2016ರಂದು ಹಿಂಬರಹ ನೀಡಲಾಗಿರುತ್ತದೆ.***</u> ನಿವೇಶನಗಳನ್ನು ಪ್ರಾಧಿಕಾರದ ಪರಿಷ್ಕೃತ ಅನುಮೋದಿತ ಬಡಾವಣೆ ನಕ್ಷೆಯಲ್ಲಿ ಸೇರಿಸಿ ಮಂಜೂರು ಮಾಡಲಾಗಿರುತ್ತದೆ. <u>*(ಪ್ರತಿ ಲಗತ್ತಿಸಿದೆ – ಅನುಬಂಧ-36).*</u> ಆದರೆ ಇದುವರೆವಿಗೂ ಈ ಸರ್ವೆ ನಂಬರ್‌ಗಳಲ್ಲಿನ ಜಮೀನುಗಳನ್ನು ಅಸೋಸಿಯೇಷನ್‌ಗೆ ಪ್ರಾಧಿಕಾರದ ವತಿಯಿಂದ ನೋಂದಣಿ ಮಾಡಿರುವುದಿಲ್ಲ ಮತ್ತು ಈ ಜಮೀನನ್ನು ಬಿಡುಗಡೆ ಮಾಡಿರುವುದಿಲ್ಲ. ಈ ಜಮೀನಿನ ಕ್ರಯಪತ್ರ ನೋಂದಣಿಯಾದ ನಂತರ ಬಡಾವಣೆ ನಕ್ಷೆಯಲ್ಲಿ ಸೇರಿಸಿ ಅನುಮೋದನೆ ಮಾಡಬೇಕಾಗಿರುತ್ತದೆ. ಆದರೆ ಜಮೀನಿನ ಕ್ರಯಪತ್ರವನ್ನು ಮಾಡಿಕೊಡದೇ ಬಡಾವಣೆ ನಕ್ಷೆಯಲ್ಲಿ ಈ ಜಮೀನನ್ನು ಸೇರಿಸಿಕೊಂಡು ನಿವೇಶನ ರಚಿಸಿ ಹಂಚಿಕೆ ಮಾಡಿ ಕಾನೂನನ್ನು ಉಲ್ಲಂಘನೆ ಮಾಡಿರುತ್ತಾರೆ.

ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಹೆಸರಿನಲ್ಲಿ ರಿಯಲ್ ಎಸ್ಟೇಟ್ ದಂಧೆಯನ್ನು ನಡೆಸುತ್ತಿದ್ದು, ಅಪಾರವಾದ ಹಣ ಗಳಿಕೆಯ [illegible] ತೊಡಗಿದ್ದಾರೆ. ಇದರಲ್ಲಿ <u>ಅನೇಕ ಕೋಟಿ ರೂಪಾಯಿಗಳ</u>

ಹಗರಣ ನಡೆದಿರುವುದು ಕಂಡುಬರುತ್ತಿದೆ. ಈ ಅಸೋಸಿಯೇಷನ್ ವಿರುದ್ಧ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು, ಬಿಡಿಎ ಅಧಿಕಾರಿಗಳಿಗೆ ಅನೇಕ ದೂರು ಅರ್ಜಿಗಳನ್ನು ನೀಡಿದರೂ ಕಣ್ಣು ಮುಚ್ಚಿ ಕುಳಿತು, ದಂಧೆಗೆ ಸಹಕಾರ ನೀಡುತ್ತಿದ್ದಾರೆ ಪ್ರಾಧಿಕಾರದ ನಿವೇಶನ ಹಂಚಿಕೆಯಾಗದಿರುವ ಕೆಲವು ಹಾಲಿ ಮತ್ತು ನಿವೃತ್ತ ನೌಕರರ ಬಗ್ಗೆ ಯಾರೂ ಆಸಕ್ತಿ ತೆಗೆದುಕೊಳ್ಳುತ್ತಿಲ್ಲ.

ಆದ್ದರಿಂದ ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘವು ಸರ್ಕಾರಿ ನಿಯಮಗಳನ್ನು ಗಾಳಿಗೆ ತೂರಿ ಇಷ್ಟಬಂದಂತೆ ನಿವೇಶನಗಳನ್ನು ಹಂಚಿಕೆ ಮಾಡಿರುವುದು ದಾಖಲಾತಿಗಳಿಂದ ಕಂಡುಬರುತ್ತದೆ. ಈ ಸಂಘದಲ್ಲಿ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ ನಡೆದಿರುವುದು ಸ್ಫಟಿಕದಷ್ಟೇ ಸತ್ಯವಾಗಿರುತ್ತದೆ. ಇನ್ನೂ ಅನೇಕ ಸದಸ್ಯರು ನಿವೇಶನ ದೊರೆಯುದಂತೆ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದು, ಸಂಘದಿಂದ ವಂಚನೆಗೊಳಗಾಗಿರುತ್ತಾರೆ. ಆದರೆ ಸಂಘದವರು ಸಂಬಂಧಪಡದ ಯಾರ್‍ಯಾರಿಗೋ ನಿವೇಶನಗಳನ್ನು ಹೆಚ್ಚಿನ ಹಣಕ್ಕೆ ಮಾರಿಕೊಂಡು ಲೂಟಿ ಹೊಡೆಯುತ್ತಿದ್ದಾರೆ. ನ್ಯಾಯವಾಗಿ ನಿವೇಶನ ದೊರೆಯಬೇಕಾದವರಿಗೆ ನಿವೇಶನ ನೀಡದೇ ಕಾನೂನುಬಾಹಿರವಾಗಿ ಇತರರಿಗೆ ನಿವೇಶನ ಹಂಚಿಕೆ ಮಾಡಿ ಸದಸ್ಯರಿಗೆ ಮೋಸ ಮಾಡಿರುತ್ತಾರೆ. ಪ್ರಾಧಿಕಾರದ ನೌಕರರನ್ನು ಹೊರತುಪಡಿಸಿ, ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ಕಾನೂನುಬಾಹಿರವಾಗಿ ನಿವೇಶನ ಹಂಚಿಕೆ ಮಾಡಿರುವುದನ್ನು ರದ್ದು ಮಾಡಬೇಕು. ಪ್ರಾಧಿಕಾರದಲ್ಲಿ ಬಹಳ ಹಿಂದಿನಿಂದಲೂ ಅತ್ಯಂತ ಕಡಿಮೆ ಸಂಬಳಕ್ಕೆ ನಿಷ್ಠೆಯಿಂದ ದುಡಿದು ನಿವೃತ್ತರಾಗಿರುವ ಮತ್ತು ಹಿರಿಯ ನಾಗರಿಕರೂ ಆಗಿರುವ ನಮಗೆಲ್ಲರಿಗೂ ತಾವುಗಳು ನಿವೇಶನವನ್ನು ಹಂಚಿಕೆ ಮಾಡಲೇಬೇಕಾಗಿರುತ್ತದೆ. ಶ್ರೀ ಡಿ.ಎನ್. ಬೆಟ್ಟೇಗೌಡ, ಅಧ್ಯಕ್ಷರು ಮತ್ತು ಶ್ರೀ ಎಂ.ಮಲ್ಲಣ್ಣ, ಉಪಾಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿ, ಇವರುಗಳು ಸರ್ಕಾರಿ ನೌಕರರಾಗಿದ್ದುಕೊಂಡು ಸುಮಾರು ರೂ.200ರಿಂದ 300 ಕೋಟಿಗಳ ಅಕ್ರಮ-ಅವ್ಯವಹಾರಗಳನ್ನು ಸಂಘದಲ್ಲಿ ನಡೆಸಿ ಪ್ರಸ್ತುತ ನಿವೃತ್ತರಾಗಿರುತ್ತಾರೆ ಮತ್ತು ಇಷ್ಟೆಲ್ಲಾ ಅವ್ಯವಹಾರಗಳನ್ನು ಮಾಡಿದ್ದರೂ ನಿವೃತ್ತಿ ನಂತರ ಪ್ರಾಧಿಕಾರದಿಂದ ಬರಬೇಕಾದ ಎಲ್ಲಾ ಸವಲತ್ತುಗಳನ್ನು ಪಡೆದುಕೊಂಡು, ಇನ್ನು ಪ್ರಾಧಿಕಾರದಿಂದ ಬಿಡುಗಡೆಯಾಗದೇ ಉಳಿದಿರುವ ವಸಂತಪುರ ಗ್ರಾಮದ 03 ಜಮೀನನ್ನು ಬಿಡುಗಡೆ ಮಾಡಿಸಿಕೊಳ್ಳಲು ಅಸೋಸಿಯೇಷನ್‌ನಲ್ಲಿಯೇ ಮುಂದುವರೆದಿರುವುದಾಗಿ ಸುತ್ತೋಲೆ ಹೊರಡಿಸಿರುತ್ತಾರೆ.

ಆದ್ದರಿಂದ, ಈ ಕೂಡಲೇ ಅಸೋಸಿಯೇಷನ್ ಅನ್ನು ಸೂಪರ್‌ಸೀಡ್ ಮಾಡಿ ಆಡಳಿತಾಧಿಕಾರಿಯನ್ನು ನೇಮಿಸಿ ಅಥವಾ ಕಂದಾಯ ಇಲಾಖೆ ಹೊರಡಿಸಿರುವ ದಿನಾಂಕ 28/05/2016ರ ಆದೇಶವನ್ನು ರದ್ದುಮಾಡಿ, ಅಗತ್ಯವೆನಿಸಿದಲ್ಲಿ ಮತ್ತೊಮ್ಮೆ ಅಸೋಸಿಯೇಷನ್‌ನ ಸಮಗ್ರ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಬೇಕು. ಅಸೋಸಿಯೇಷನ್ ಬ್ಯಾಂಕ್‌ನಲ್ಲಿರುವ ಇಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಹಣಕಾಸಿನ ಅವ್ಯವಹಾರಗಳ ಬಗ್ಗೆ ಸಹ ತನಿಖೆ ನಡೆಸಬೇಕು ಉಳಿದಿರುವ ನಿವೇಶನಗಳನ್ನು ಈ ದಿನಾಂಕದಿಂದ ಯಾರಿಗೂ ನೋಂದಣಿ ಮಾಡಿಕೊಡದಂತೆ ತಡೆಮಾಡಬೇಕು ಮತ್ತು ಅಂತಿಮವಾಗಿ ಉಳಿದಿರುವ ವಸಂತಪುರ ಗ್ರಾಮದ 03 ಎಕರೆ ಜಮೀನನ್ನು ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ

<u>ಬಿಡುಗಡೆ ಮಾಡದಂತೆ ತಡೆಹಿಡಿಯಬೇಕು</u> ಎಂದು ನಾವುಗಳು ಸ್ವಮನಸ್ಸಿನಿಂದ ಯಾವ ಒತ್ತಾಯವೂ ಇಲ್ಲದೇ ಖುದ್ದು ನಾವುಗಳು ಹೇಳಿಕೆಯನ್ನು ನೀಡುತ್ತಾ, ಸವಿನಯವಾಗಿ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇವೆ.

(ನಾವು ಕೆಲವು ದಾಖಲಾತಿಗಳನ್ನು, ಈ ಪತ್ರದೊಡನೆ ಸಲ್ಲಿಸಿದ್ದು, ತಾವು ಅಪೇಕ್ಷಿಸಿದಲ್ಲಿ ಆರೋಪಗಳಿಗೆ ಸಂಬಂಧಪಟ್ಟ ಹೆಚ್ಚಿನ ಹಾಗೂ ಪೂರ್ಣ ದಾಖಲಾತಿಗಳನ್ನು ಸಲ್ಲಿಸುತ್ತೇವೆ).

ಗೌರವಪೂರ್ವಕವಾದ ನಮಸ್ಕಾರಗಳೊಂದಿಗೆ,

ತಮ್ಮ ವಿಶ್ವಾಸಿಗಳು,
ಪ್ರಾಧಿಕಾರದ ನೊಂದ ನಿವೃತ್ತ ನೌಕರರು.

ಲಗತ್ತು:- ಪುಟ 01 ರಿಂದ 192ರವರೆಗಿನ ಪುಟಗಳು.

<u>ಯಥಾ ಪ್ರತಿಯನ್ನು:-</u> 1) ಮಾನ್ಯ ಪ್ರಧಾನ ಕಾರ್ಯದರ್ಶಿಯವರು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇವರಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

2) ಮಾನ್ಯ ನಿಬಂಧಕರು, ಸಹಕಾರ ಇಲಾಖೆ, ಬೆಂಗಳೂರು, ಇವರಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

B.M. ಚಿಕ್ಕಯ್ಯ ಮತ್ತು ಇತರರು

B. M. Chikkaiah [9448270203]
P. Muni Thimmaiah
S. V. ...
... Rao
V. Lakshmi Narasimha Murthy
V. Aswathanarayana
M. Rangathamaiah
R. ... Swamy

M. ... Murthy
S. Lakshmidevi
ಶಾರದಮ್ಮ
ಮುನಿರಾಜು
ಕೆಂಪಯ್ಯ

28

5] ಆರೋಪ 5 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಾಲಿ ಮತ್ತು ನಿವೃತ್ತ ನೌಕರರನ್ನು ಹೊರತುಪಡಿಸಿ ಬೇರೆಯವರನ್ನು ಸದಸ್ಯರನ್ನಾಗಿ ನೌಕರರ ಕ್ಷೇಮಾಭಿವೃದ್ಧಿ ಸಂಘ ಮಾಡಿಕೊಂಡಿದೆಯೇ? ಎಂಬುವುದನ್ನು ನೋಡಬೇಕಾಗಿದೆ. ಆರೋಪ 5 ರಲ್ಲಿ ಐರವಲು ಸೇವೆ ನೌಕರರಿಗೆ ಮತ್ತು ಇತರೆ ಇಲಾಖೆ ನೌಕರರಿಗೆ, ಸಾರ್ವಜನಿಕರಿಗೆ ಕ್ಷೇಮಾಭಿವೃದ್ಧಿ ಸಂಘದವು ನಿವೇಶಗಳನ್ನು ಹಂಚಿಕೆ ಮಾಡಿದೆಯೇ? ಎಂಬುವುದನ್ನು ನೋಡಬೇಕಾಗಿದೆ. ಆರೋಪ 6 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕರದ ಅಯುಕ್ತರ ದಿನಾಂಕ: 17/06/2011 ನ್ನು ಪಾಲಿಸದೇ ಐರವಲು ಸೇವೆಯ ನೌಕರರಿಗೆ ಅಂಗಧೀರನ ಹಳ್ಳಿ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ ಎಂಬುವುದನ್ನು ನೋಡಬೇಕಾಗಿದೆ. ಆರೋಪ 11 ರಲ್ಲಿ ಸಾರ್ವಜನಿಕರಾದ ಶ್ರೀ ಶಿವನಂಜಯ್ಯ ಇವರಿಗೆ ದೊಡ್ಡಕಲ್ಲಸಂದ್ರ ಗ್ರಾಮದ ನಿವೇಶನ ಸಂಖ್ಯೆ 64 ನ್ನು ಕ್ಷೇಮಾಭಿವೃದ್ಧಿ ಸಂಘವು ಮಂಜೂರ ಮಾಡಿದೆಯೇ? ಎಂಬುವುದನ್ನು ನೋಡಬೇಕಾಗಿದೆ. ಈ ಆರೋಪ 1, 5, 6, 11 ಒಂದೇ ತೆರನಾಗಿವೆ. ಕಾರಣ ಇವುಗಳನ್ನು ಜಂಟಿಯಾಗಿ ವಿಶ್ಲೇಷಣೆಗೆ ಎತ್ತಿಕೊಂಡಿದ್ದೇನೆ. ಈ ಆರೋಪಗಳಿಗೆ ಸಂಬಂಧಿಸಿದಂತೆ ಶ್ರೀ. ಬಿ.ಎಮ್. ಚಿಕ್ಕಯ್ಯ ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ಶ್ರೀ. ಪಾಂಡುರಂಗರಾವ್ ತಮ್ಮ ಹೇಳಿಕೆಯನ್ನು ಕೊಟ್ಟಿಲ್ಲ. ಶ್ರೀ. ಚಿಕ್ಕಯ್ಯ ಇವರ ಹೇಳಿಕೆಯನ್ನು ಅವರಿಗೆ ವರದಿ ಸಲ್ಲಿಸಲು ಕೋರಿದ್ದಾರೆ. ಶ್ರೀ. ಬಿ.ಎಮ್. ಚಿಕ್ಕಯ್ಯ ತಮ್ಮ ಹೇಳಿಕೆಯಲ್ಲಿ "ಅಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ದಿನಾಂಕ: 12/01/2016 ರಂದು 5161.2 ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖ ಬೆಂಗಳೂರು ಇವರಿಗೆ ಪತ್ರ ಬರೆದು ಕರ್ನಾಟಕ ಸುವರ್ಣ ರಾಜ್ಯೋತ್ಸವದ ಪ್ರಯುಕ್ತ ಹಂಚಿಕೆ ನಿಯಾಮವಳಿಗಳನ್ನು ಸಡಿಲಿಸಿ ರಿಯಾಯಿತಿ ದರದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲು ಮತ್ತು ಪ್ರಾಧಿಕಾರದಿಂದ ನೌಕರರ ಕ್ಷೇಮಾಭಿವೃದ್ಧಿ ಸಂಘದ ಪರವಾಗಿ ಯಾವುದಾದರೂ ಬಡಾವಣೆಯಲ್ಲಿ 45 ಎಕರೆ ಜಮೀನನ್ನು ಸಗಟಾಗಿ ಹಂಚಿಕೆ ಮಾಡಲು ಸರ್ಕಾರದ ಅನುಮತಿಯನ್ನು ಕೋರಿದ್ದಾರೆ. ಆ ಪತ್ರದ ಪ್ರತಿ ಹಾಜರಪಡಿಸಿದ್ದು ಅದು ನಿಶಾನೆ ಪಿ-1 ರಂತೆ ಇದೆ. ಆ ಪತ್ರಕ್ಕೆ ಅನುಗುಣವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಬೆಂಗಳೂರು. ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಇವರಿಗೆ ಪತ್ರ ಬರೆದು ಪ್ರಾಧಿಕಾರದ ನೌಕರರ ಸಂಘಕ್ಕೆ ಅದರ ನೌಕರರಿಗೆ ನಿವೇಶನಗಳನ್ನು ಹಂಚುವ ಸಲುವಾಗಿ ಜಮೀನನ್ನು ಸಗಟಾಗಿ ಹಂಚಿಕೆ ಮಾಡುವ ಪ್ರಸ್ತಾವನೆಗೆ ಸರ್ಕಾರ ತಾತ್ವಿಕ ಅನುಮೋದನೆ ನೀಡಿದೆ. ಎಂದು ದಿನಾಂಕ: 19/04/2006 ರಂದು ಪತ್ರ ಬರೆದಿದ್ದಾರೆ. ಆ ಪತ್ರದ ಪತ್ರಿ ~~ಅನುಮೋದನೆ ನೀಡಿದೆ.~~ ಎಂದು ದಿನಾಂಕ: 19/04/2006 ರಂದು ಪತ್ರ ಬರೆದಿದ್ದಾರೆ. ಆ ಪತ್ರದ ಪತ್ರಿ ನಿಶಾನೆ ಪಿ-2 ರಂತೆ ಇದೆ, ದಿನಾಂಕ: 04/09/2006 ರಂದು ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ

ಸಂಘಕ್ಕೆ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ಸಂಖ್ಯೆ: 15,16,17 ಇವುಗಳಲ್ಲಿ ಒಟ್ಟು 40 ಎಕರೆ 05 ಗುಂಟೆ ಜಮೀನನ್ನು ಪ್ರಾಧಿಕಾರವು ಸ್ವಾಧೀನ ಪಡಿಸಿಕೊಂಡಿದ್ದು ಸಗಟು ಹಂಚಿಕೆ ಮಾಡಲಾಗಿದೆ. ಆ ಷರತ್ತುಗಳಲ್ಲಿ ನಿವೇಶನಗಳನ್ನು ಹಾಲಿ ಪ್ರಾಧಿಕಾರದ ಸೇವೆಯಲ್ಲಿರುವ ಅಧಿಕಾರಿ ಮತ್ತು ನೌಕರರಿಗೆ ಮಾತ್ರ ಹಂಚಿಕೆ ಮಾಡತಕ್ಕದೆಂದು ಇದೆ ಆ ಪತ್ರದ ಪ್ರತಿ ನಿಶಾನೆ- ಪಿ3 ರಂತೆ ಇದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈ 33 ಎಕರೆ 02 ಗುಂಟೆ ಜಮೀನನ್ನು ~~ನೌಕರರ ಸಂಘಕ್ಕೆ ಬಿಡುಗಡೆ ಮಾಡಿದೆ~~ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ನೋಂದಣಿ ಮಾಡಿ ಬಿಡುಗಡೆ ಮಾಡಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ 33 ಎಕರೆ 02 ಗುಂಟೆ ಜಮೀನಿಗೆ ಸ್ವಾಧೀನ ಪತ್ರವನ್ನು ಕೊಟ್ಟಿದೆ. ಆ ಪತ್ರದ ಪ್ರತಿ ಹಾಜರುಪಡಿಸಿದ್ದು ಅದು ನಿಶಾನೆ ಪಿ-4 ರಂತೆ ಇದೆ. ದಿನಾಂಕ: 12/06/2013 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು, ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ತಿದ್ದುಪಡಿ ಪತ್ರವನ್ನು ಬರೆದುಕೊಟ್ಟಿದೆ. ಅದರಲ್ಲಿ 33 ಎಕರೆ 02 ಗುಂಟೆ ಬದಲಾಗಿ ವಾಸ್ತವವಾಗಿ ಲಭ್ಯವಿರುವ 27 ಎಕರೆ 15 1/2 ಗುಂಟೆ ಜಮೀನಿಗೆ ನೋಂದಣಿಯನ್ನು ನಿರ್ಬಂಧಿಲಸಾಗಿದೆ ಆ ಪತ್ರದ ಪ್ರತಿ ನಿಶಾನೆ ಪಿ-5 ರಂತೆ ಇದೆ. ನೌಕರರ ಕ್ಷೇಮಾಭಿವೃದ್ಧಿ ಸಂಘವು 27 ಎಕರೆ 15 1/2 ಗುಂಟೆ ಜಮೀನಿನಲ್ಲಿ 567 ವಿವಿಧ ರೀತಿಯ ಅಳತೆಯ ನಿವೇಶನಗಳನ್ನು ರಚಿಸಿದೆ ನೌಕರರ ಕ್ಷೇಮಾಭೀವೃದ್ಧಿ ಸಂಘವು ಆ ನಿವೇಶನಗಳನ್ನು ಪ್ರಾಧಿಕರದ ಅಧಿಕಾರಿಗಳು, ನೌಕರರಿಗೆ, ನಿವೃತ್ತ ನೌಕರರಿಗೆ ಮಾತ್ರ ಹಂಚಿಕೆ ಮಾಡಬೇಕಾಗಿತ್ತು ಆದರೆ 205 ರಿಂದ 300 ನಿವೇಶನಗಳನ್ನು ನೌಕರರ ಕ್ಷೇಮಾಭಿವೃದ್ಧಿ ಸಂಘವು ಸದಸ್ಯತ್ವ ಪಡೆದಿರುವ ಪ್ರಾಧಿಕಾರದ ನೌಕರರಲ್ಲದ ಎರವಲು ಸೇವೆಯ ನೌಕರರಿಗೆ, ಬ್ಯಾಂಕ್, ಇತರೆ ಇಲಾಖೆಯ ನೌಕರರಿಗೆ ಸಾರ್ವಜನಿಕರಿಗೆ ಹಾಗೂ ಅಧ್ಯಕ್ಷರ ಸಂಬಂಧಿಕರಿಗೆ ನಿವೇಶನಗಳನ್ನು ಮಂಜೂರು ಮಾಡಿದ್ದಾರೆ" ಎಂದು ಹೇಳಿದ್ದಾರೆ. ಮುಂದುವರೆದು "ಪ್ರಾಧಿಕಾರವು ಕ್ಷೇಮಾಭಿವೃದ್ಧಿ ಸಂಘಕ್ಕೆ ಲಿಂಗಧೀರಹಳ್ಳಿ ಸರ್ವೆ ಸಂಖೆಯ 6(ಪಿ) ಕ್ಷೇತ್ರ 07 ಎಕರೆ ಹಂಚಿಕೆಗಾಗಿ ಸಂಘಕ್ಕೆ ಖರೀದಿಗೆ ಕೊಟ್ಟಿದೆ. ಖರೀದಿ ಪತ್ರದ ಪ್ರತಿ ನಿಶಾನೆ ಪಿ-20 ರಂತೆ ಇದೆ. ಪ್ರಾಧಿಕಾರವು ಲಿಂಗಧೀರನಹಳ್ಳಿ 6(ಪಿ) ಕ್ಷೇತ್ರ 07 ಎಕರೆ ಜಮೀನಿನ ಸ್ವಾಧೀನ ಪತ್ರ ಸಂಘಕ್ಕೆ ಕೊಟ್ಟಿದೆ. ಸ್ವಾಧೀನ ಪತ್ರದ ಪ್ರತಿ ನಿಶಾನೆ ಪಿ-21 ರಂತೆ ಇದೆ. ಪ್ರಾಧಿಕಾರವು ಲಿಂಗಧೀರಹಳ್ಳಿ ಸರ್ವೆ ಸಂಖ್ಯೆ : 6(ಪಿ) ಇದರಲ್ಲಿ 07 ಎಕರೆ ಕ್ಷೇಮಾಭಿವೃದ್ಧಿ ಸಂಘಕ್ಕೆ ಕೊಟ್ಟಿದ್ದು ಉಳಿದ ಭಾಗ 6(ಪಿ) ಮತ್ತು 7(ಪಿ) ಸೇರಿಸಿ 05 ಎಕರೆ ಮಂಜೂರು ಮಾಡಿ ಸ್ವಾಧೀನ ಪತ್ರ ಕೊಟ್ಟಿದೆ. ಆ ಸ್ವಾಧೀನ ಪತ್ರ ಪ್ರತಿ ನಿಶಾನೆ ಪಿ-22 ರಮತೆ ಇದೆ. 6(ಪಿ) ಮತ್ತು 7 (ಪಿ) ಗಳಲ್ಲಿ ಇನ್ನು ಉಳಿದ ಕ್ಷೇತ್ರ 03 ಎಕರೆ ಮಂಜುರು ಮಾಡಿ ಸ್ವಾಧೀನ ಪತ್ರ ಕ್ಷೇಮಾಭಿವೃದ್ಧಿ ಸಂಘಕ್ಕೆ ಕೊಟ್ಟಿದೆ ಅದರ ಪ್ರತಿ ನಿಶಾನೆ ಪಿ-23 ರಂತೆ ಇದೆ. ಹೀಗೆ ಒಟ್ಟು 15 ಎಕರೆ ಜಮೀನನ್ನು

ಅಂಗಧೀರಹಳ್ಳಿ ಸರ್ವೆ ಸಂಖ್ಯೆ 6 (ಪಿ) ಮತ್ತು 7(ಪಿ) ನಲ್ಲಿ ಪ್ರಾಧಿಕಾರವು ಕ್ಷೇಮಾಭಿವೃದ್ಧಿ ಸಂಘಕ್ಕೆ ನಿಯಮದಂತೆ ಹಂಚಿಕೆಗಾಗಿ ಕೊಟ್ಟಿದೆ. 15 ಎಕರ ಜಮೀನಿನಲ್ಲಿ ಕ್ಷೇಮಾಭಿವೃದ್ಧಿ ಸಂಘವು 321 ನಿವೇಶನಗಳನ್ನು ಮಾಡಿದೆ. ಅವುಗಳನ್ನು ಸಹ ನಿಯಮದಂತೆ ಹಂಚಿಕೆ ಮಾಡಿಲ್ಲ, ಪ್ರಾಧಿಕಾರದ ನೌಕರರಲ್ಲದವರಿಗೆ ಹಂಚಿಕೆ ಮಾಡಿದ್ದಾರೆ. ಶ್ರೀಮತಿ. ಕೆ. ಶಾಂತಿ ಪ್ರಾಧಿಕಾರದ ನೌಕರರಲ್ಲ ಅವಳಿಗೆ ಅಂಗಧೀರಹಳ್ಳಿ ನಿವೇಶನ ಸಂಖ್ಯೆ 311 ಮಂಜೂರು ಮಾಡಿ ಕ್ರಯಪತ್ರವನ್ನು ಸಂಘವು ಬರೆದುಕೊಟ್ಟಿದೆ" ಕ್ರಯಪತ್ರ ಪ್ರತಿ ನಿಶಾನೆ ಪಿ-24 ರಂತೆ ಇದೆ. ಅದರಂತೆ ನಿಯಮ ಉಲ್ಲಂಘಿಸಿ ಶ್ರೀಮತಿ ಸಾವಿತ್ರಿ ಇವರಿಗೆ ಅಂಗಧೀರನಹಳ್ಳಿ ನಿವೇಶನ ಸಂಖ್ಯೆ 132 ಕ್ಕೆ ಕ್ರಯ ಮಾಡಿ ಕೊಟ್ಟಿದ್ದಾರೆ. ಕ್ರಯಪತ್ರದ ಪ್ರತಿ ನಿಶಾನೆ ಪಿ-25 ರಂತೆ ಇದೆ. ಶ್ರೀ ವಸಂತಕುಮಾರ್ ಇವರು ಪ್ರಾಧಿಕಾರದ ನೌಕರರಲ್ಲದ ಇವರಿಗೆ ಅಂಗಧೀರನಹಳ್ಳಿ ನಿವೇಶನ ಸಂಖ್ಯೆ 296 ಕ್ರಯಕ್ಕೆ ಕೊಟ್ಟಿದ್ದಾರೆ. ಕ್ರಯಪತ್ರದ ಪ್ರತಿ ನಿಶಾನೆ ಪಿ-26 ರಂತೆ ಇದೆ. ಶ್ರೀ. ಕೆ.ಬಿ. ಬೈರಹನುಮಯಯ್ಯ, ಇವರು ಪ್ರಾಧಿಕಾರದ ನೌಕರರಲ್ಲ ಅವರಿಗೆ ಅಂಗಧೀರನಹಳ್ಳಿ ನಿವೇಶನ ಸಂಖ್ಯೆ 321 ಮಂಜೂರು ಮಾಡಿ ಕ್ರಯಪತ್ರವನ್ನು ಬರೆದುಕೊಟ್ಟಿದ್ದಾರೆ. ಕ್ರಯಪತ್ರದ ಪ್ರತಿ ನಿಶಾನೆ ಪಿ-28 ರಂತೆ ಇದೆ. ಶ್ರೀ. ಹೆಚ್. ಆರ್ ರಂಗನಾಥಸ್ವಾಮಿ ಪ್ರಾಧಿಕಾರದ ನೌಕರರಲ್ಲ ಅವರಿಗೆ ಅಂಗಧೀರನಹಳ್ಳಿ ನಿವೇಶನ ಸಂಖ್ಯೆ 314 ಮಂಜೂರು ಮಾಡಿ ಕ್ರಯಪತ್ರ ಬರೆದುಕೊಟ್ಟಿದ್ದರೆ. ಕ್ರಯಪತ್ರದ ಪ್ರತಿ ಹಾಜರು ಪಡಿಸಿದ್ದು ಅದು ನಿಶಾನೆ ಪಿ-29 ರಂತೆ ಇದೆ. ಶ್ರೀ. ಅಭಿಷೇಕ್ ಪ್ರಾಧಿಕಾರದ ನೌಕರರಲ್ಲ. ಅವರಿಗೆ ಅಂಗಧೀರನಹಳ್ಳಿ ನಿವೇಶನ ಸಂಖ್ಯೆ 313 ಮಂಜೂರು ಮಾಡಿ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ. ಕ್ರಯ ಪತ್ರದ ಪ್ರತಿ ಹಾಜರು ಪಡಿಸಿದ್ದು ಅದು ನಿಶಾನೆ ಪಿ-30 ರಂತೆ ಇದೆ. ಶ್ರೀ. ಹೆಚ್. ವೆಂಕಟೇಶ ಪ್ರಾಧಿಕಾರದ ನೌಕರರಲ್ಲ, ಅವರಿಗೆ ಅಂಗಧೀರಹಳ್ಳಿ ನಿವೇಶನ ಸಂಖ್ಯೆ 309 ಮಂಜೂರು ಮಾಡಿ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ. ಕ್ರಯ ಪತ್ರದ ಪ್ರತಿ ನಿಶಾನೆ ಪಿ-31 ರಂತೆ ಇದೆ". ಎಂದು ವಿವರಿಸಿದ್ದಾರೆ. ಮೇಲಿನ ಹೇಳಿಕೆ ಮತ್ತು ಉಲ್ಲೇಖಿತ ದಸ್ತಾವೇಜುಗಳನ್ನು ನಾನು ಕೂಲಂಕುಷವಾಗಿ ಪರಿಶೀಲಿಸಿದೆ. ಮೇಲಿನ ಹೇಳಿಕೆಯು ಉಲ್ಲೇಖಿತ ದಸ್ತಾವೇಜುಗಳಿಂದ ದೃಢಪಟ್ಟಿದೆ. ಕಾರಣ ಆರೋಪ 1, 5,6. 11 ಇವುಗಳಲ್ಲಿ ಸತ್ಯಾಂಶ ಇದೆ ಎಂದು ಅಭಿಪ್ರಾಯಪಟ್ಟಿದ್ದೇನೆ.

6) ಆರೋಪ 2 ರಲ್ಲಿ ಕ್ಷೇಮಾಭಿವೃದ್ಧಿ ಸಂಘವು ನಿವೇಶನಗಳನ್ನು ಹಂಚಿಕೆ ಮಾಡುವಾಗ ಜೇಷ್ಠ್ಯತೆಯನ್ನು ಪಾಲನೆ ಮಾಡಿರುವುದಿಲ್ಲವೇ ಎಂಬುವುದನ್ನು ನೋಡಬೇಕಾಗಿದೆ. ಶ್ರೀ. ಬಿ.ಎಮ್. ಚಿಕ್ಕಯ್ಯ ತಮ್ಮ ಹೇಳಿಕೆಯಲ್ಲಿ "ನಾನು ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ದಿನಾಂಕ: 10/11/2006 ರಂದು ಸದಸ್ಯನಾಗಿದ್ದೇನೆ. ಸದಸ್ಯತ್ವ ಫೀಜು ರೂ. 1,050 ಸಂದಾಯ ಮಾಡಿದ್ದೇನೆ ರಸೀದಿಯ ಪ್ರತಿ ನಿಶಾನೆ ಪಿ-6 ರಂತೆ ಇದೆ. ನಾನು ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿದ್ದು ಅದರ ಅರ್ಜಿ ಪ್ರತಿ ನಿಶಾನೆ ಪಿ-7 ರಂತೆ ಇದೆ. ನಾನು ಸಂಘಕ್ಕೆ ರೂ.

75,000/- ಹಣ ದಿನಾಂಕ: 10/11/2006 ಸಂದಾಯ ಮಾಡಿದ್ದೇನೆ. ಸ್ವೀಕೃತಿ ಪತ್ರದ ಪ್ರತಿ ನಿಶಾನೆ ಪಿ-8 ರಂತೆ ಇದೆ. ದಿನಾಂಕ: 21/12/2006 ರಂದು ಪುನಃ ರೂ. 75,000/- ಸಂಘಕ್ಕೆ ಸಂದಾಯ ಮಾಡಿದ್ದೇನೆ ಸ್ವೀಕೃತಿ ಪತ್ರದ ಪ್ರತಿ ನಿಶಾನೆ ಪಿ-9 ರಂತೆ ಇದೆ. ನಾನು ನಿವೇಶನ ಪಡೆದುಕೊಳ್ಳಲು ಅರ್ಹನಾಗಿ ಇದ್ದರೂ ಸಹ ಸಂಘವು ನಿವೇಶನವನ್ನು ಮಂಜೂರು ಮಾಡಿಲ್ಲ ನನ್ನಂತೆ ಬಹಳಷ್ಟು ಜನ ಪ್ರಾಧಿಕಾರದ ಹಾಲಿ ನೌಕರರಿಗೆ ಮತ್ತು ನಿವೃತ್ತ ನೌಕರರಿಗೆ ಅನ್ಯಾಯವಾಗಿದೆ. ನನ್ನಂತೆ ಶ್ರೀ ಶಿವರಾಮಯ್ಯ, ನಾರಾಯಣಪ್ಪ, ಹೆಚ್.ವಿ. ಕೃಷ್ಣಪ್ಪ, ಭೈಲಪ್ಪ ಆರ್, ವಿ. ಲಕ್ಷ್ಮೀನರಸಿಂಹಮೂರ್ತಿ ಹಾಗೂ ಇನ್ನೂ ಅನೇಕರು ನಿವೃತ್ತ ನೌಕರರು ಅರ್ಜಿಗಳನ್ನು ಸಲ್ಲಿಸಿ ಕಂತುಗಳ ಹಣ ತುಂಬಿದ್ದರೂ ಅವರಿಗೂ ಸಹ ನಿವೇಶನಗಳನ್ನು ಮಂಜೂರು ಮಾಡಿಲ್ಲ. ಪ್ರಾಧಿಕಾರದ ನೌಕರರಿಗೆ ಮತ್ತು ಅಧಿಕಾರಿಗಳಿಗೆ ನಿವೇಶನ ಹಂಚಿಕೆ ಮಾಡುವಾಗ ಜೇಷ್ಠತೆಯನ್ನು ಪಾಲನೆ ಮಾಡಿರುವುದಿಲ್ಲ. ನಾನು ಮತ್ತು ಇತರರು, ನೌಕರರು 2006 ರಲ್ಲಿ ಹಂಚಿಕೆಗೆ ಅರ್ಜಿ ಸಲ್ಲಿಸಿ ನಿಯಮದಂತೆ ಕಂತುಗಳಲ್ಲಿ ನಿರ್ಧಾರಿತ ಹಣವನ್ನು ಜಮೆ ಮಾಡಿದಾಗಲೂ ಸಹ ನಮಗೆ ನಿವೇಶನ ಹಂಚಿಕೆ ಮಾಡದೇ 2010-11 ರಲ್ಲಿ ಅರ್ಜಿ ಸಲ್ಲಿಸಿ ಕಂತು ಹಣ ಕಟ್ಟಿದವರಿಗೆ ನಿವೇಶನಗಳನ್ನು ಹಂಚಿಕೆ ಮಾಡಿ ಕ್ರಯ ಪತ್ರಗಳನ್ನು ಸಂಘವು ಮಾಡಿಕೊಟ್ಟಿದೆ". ಎಂದು ಹೇಳಿದ್ದಾರೆ. ನಾನು ಮೇಲಿನ ಹೇಳಿಕೆಯನ್ನು ಮತ್ತು ಮೇಲೆ ವಿವರಿಸಿದ ದಸ್ತಾವೇಜುಗಳನ್ನು ಪರಿಶೀಲಿಸಲಾಗಿ ಕ್ಷೇಮಾಭಿವೃದ್ಧಿ ಸಂಘವು ನಿವೇಶನಗಳನ್ನು ಹಂಚಿಕೆ ಮಾಡುವಾಗ ಜೇಷ್ಠತೆಯನ್ನು ಪಾಲನೆ ಮಾಡದೇ ಇರುವುದು ಕಂಡು ಬರುತ್ತದೆ. ಕಾರಣ ಆರೋಪ 2 ರಲ್ಲಿ ಸತ್ಯಾಂಶ ಇದೆ ಎಂದು ಅಭಿಪ್ರಾಯ ಪಟ್ಟಿದ್ದೇನೆ.

7] ಆರೋಪ 3 ರಲ್ಲಿ ಕ್ಷೇಮಾಭಿವೃದ್ಧಿ ಸಂಘವು ಲಾಟರಿ ತೆಗೆಯುವ ಮೂಲಕ ನಿವೇಶನಗಳನ್ನು ತನ್ನ ಸುತ್ತೋಲೆಯಂತೆ ಹಂಚಿಕೆ ಮಾಡಬೇಕಾಗಿತ್ತು. ಆದರೆ ಲಾಟರಿ ತೆಗೆಯದೆ ಮನೋ ಇಚ್ಛೆಯಾಗಿ ನಿವೇಶನಗಳನ್ನು ಹಂಚಿಕೆ ಮಾಡಿದಿದೆಯೇ? ಎಂಬುವುದನ್ನು ನೋಡಬೇಕಾಗಿದೆ. ಶ್ರೀ. ಬಿ.ಎಮ್. ಚಿಕ್ಕಣ್ಣಸ್ವಾಮಿ ಹೇಳಿಕೆಯಲ್ಲಿ ಪಿ(12) ಸುತ್ತೋಲೆಯಲ್ಲಿ ಲಾಟರಿ ಮೂಲಕ ನಿವೇಶನಗಳನ್ನು ಹಂಚಲಾಗುವುದೆಂದು ವಿಶೇಷ ಸೂಚನೆ ಹೊರಡಿಸಲಾಗಿದೆ. ಅದನ್ನು ಸಂಘವು ಉಲ್ಲಂಘನೆ ಮಾಡಿದೆ. ಸಂಘವು ಲಾಟರಿ ದಿನಾಂಕವನ್ನು ನಿಗಧಿಪಡಿಸಿ ಪ್ರಕಟನೆಯನ್ನು ಹೊರಡಿಸಿಲ್ಲ ಮತ್ತು ಸದಸ್ಯರಿಗೆ ಈ ಬಗ್ಗೆ ನೋಟೀಸ್‌ಗಳನ್ನು ಸ್ವತಃ ಆಗಲೀ, ದಿನ ಪತ್ರಿಕೆ ಮೂಲಕವಾಗಲೀ ತಿಳಿಸಿಲ್ಲ. ಹಂಚಿಕೆ ಪತ್ರದಲ್ಲಿ ಎಲ್ಲಾ ಹಂಚಿಕೆದಾರರ ಪತ್ನಿಯರ ಹೆಸರನ್ನು ಸೇರಿಸಿಲ್ಲ ಇದು ಹಂಚಿಕೆಯ ನಿಯಮಕ್ಕೆ ವಿರುದ್ಧವಾಗಿದೆ, ಎಂದು ಹೇಳಿದ್ದಾರೆ. ನಾನು ನಿಶಾನೆ ಪಿ12 ನ್ನು ಮತ್ತು ಹೇಳಿಕೆಯನ್ನು ಪರಿಶೀಲಿಸಿದೆ. ಹೇಳಿಕೆಯಲ್ಲಿ ಸತ್ಯಾಂಶ ಇರುವುದು ಕಂಡು ಬಂದಿದ ನಿಶಾನೆ ಪಿ12 ಸುತ್ತೋಲೆಯಲ್ಲಿ ಹೇಳಿದಂತೆ ಕ್ಷೇಮಾಭಿವೃದ್ಧಿ ಸಂಘವು ನಿವೇಶನಗಳನ್ನು

24

ಲಾಟರಿ ಮೂಲಕ ಹಂಚದೆ ಅಧ್ಯಕ್ಷರ ಮನೋ ಇಚ್ಛೆಯಂತೆ ಹಂಚಿದ್ದು ಕಂಡು ಬರುತ್ತದೆ. ಕಾರಣ ಆರೋಪ 3 ರಲ್ಲಿ ಸತ್ಯಾಂಶ ಇದೆ ಎಂದು ಅಭಿಪ್ರಾಯ ಪಟ್ಟಿದ್ದೇನೆ.

8] ಆರೋಪ 4 ರಲ್ಲಿ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರ ದಿನಾಂಕ: 20/12/2006 ರಂತೆ ಹಂಚಿಕೆ ಪತ್ರಗಳಲ್ಲಿ ಹಂಚಿಕೆದಾರರ ಪತ್ನಿ/ ಗಂಡನ ಹೆಸರನ್ನು ಸೇರಿಸಿ ಹಂಚಿಕೆ ಪತ್ರವನ್ನು ನೀಡಬೇಕಾಗಿತ್ತು. ಕ್ಷೇಮಾಭಿವೃದ್ಧಿ ಸಂಘವು ಈ ಸೂಚನೆಯನ್ನು ಉಲ್ಲಂಘನೆ ಮಾಡಿದೆ ಮತ್ತು 10 ವರ್ಷಗಳ ಅವಧಿಗೆ ಹಸ್ತಾಂತರವನ್ನು ನಿರ್ಭಧಿಸಿಲ್ಲವೆಂಬುವುದನ್ನು ನೋಡಬೇಕಾಗಿದೆ. ಶ್ರೀ. ಬಿ.ಎಮ್. ಚಿಕ್ಕಯ್ಯ ತಮ್ಮ ಹೇಳಿಕೆಯಲ್ಲಿ "ದಿನಾಂಕ: 20/12/2006 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಪತ್ರ ಬರೆದು ಗುತ್ತಿಗೆ ಅವಧಿಯನ್ನು 10 ವರ್ಷ ನಿಗಧಿಪಡಿಸಲು ಸೂಚಿಸಿದೆ. ಮತ್ತು ಹಂಚಿಕೆ ಪತ್ರದಲ್ಲಿ ಹಂಚಿಕೆದಾರರ ಮತ್ತು ಅವರ ಪತ್ನಿ ಹೆಸರನ್ನು ಸೇರಿಸಲು ಸೂಚಿಸಿದೆ ನೌಕರರ ಕ್ಷೇಮಾಭಿವೃದ್ಧಿ ಸಂಘವು ಈ ಸೂಚನೆಯನ್ನು ಉಲ್ಲಂಘಿಸಿದೆ". ಎಂದು ಹೇಳಿದ್ದಾರೆ. ನಾನು ಆಯುಕ್ತರ ಪತ್ರದ ಪ್ರತಿ ನಿಶಾನೆ 10 ಮತ್ತು ಈ ಪ್ರಕರಣದಲ್ಲಿ ಸಲ್ಲಿಸಿದ ಕ್ರಯ ಪತ್ರದ ಪ್ರತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದೆ. ನಿಶಾನೆ ಪಿ10 ಉಪ ಕಾರ್ಯದರ್ಶಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ದಿನಾಂಕ: 20/12/2006 ರಂದು ಪತ್ರ ಬರೆದಿದ್ದಾರೆ, ಅದರಲ್ಲಿ ಮಾನ್ಯ ಆಯುಕ್ತರ ಆದೇಶದಂತೆ ಈ ಕೆಳಕಂಡ ಸೂಚನೆಗಳನ್ನು ಪಾಲಿಸಬೇಕೆಂದು ಸೂಚಿಸಿದ್ದಾರೆ.

1) ಹಂಚಿಕೆ ಪತ್ರದಲ್ಲಿ ಹಂಚಿಕೆದಾರರ ಮತ್ತು ಪತ್ನಿಯ ಹೆಸರನ್ನು ಸೇರಿಸಿ ಹಂಚಿಕೆ ಪತ್ರವನ್ನು ನೀಡತಕ್ಕದ್ದು. ಹಾಗೂ ಹಂಚಿಕೆದಾರಳಾಗಿದ್ದಲ್ಲಿ ಅವರ ಪತಿಯ ಹೆಸರನ್ನು ಸೇರಿಸಿ ಜಂಟಿ ಹೆಸರಿಗೆ ಹಂಚಿಕೆ ಪತ್ರವನ್ನು ನೀಡತಕ್ಕದ್ದು.

2) ಹತ್ತು ವರ್ಷಗಳ ಗುತ್ತಿಗೆ ಅವಧಿಯನ್ನು ನಿಗಧಿಪಡಿಸುವುದು.

ನಾನು ಈ ಪ್ರಕರಣದಲ್ಲಿ ಹಾಜರಪಡಿಸಿದ ಕ್ರಯ ಪತ್ರದ ಪ್ರತಿಗಳನ್ನು ಮತ್ತು ಸ್ವಾಧೀನ ಪತ್ರದ ಪ್ರತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದೆ, ಕ್ರಯ ಪತ್ರಗಳಲ್ಲಿ ಹಂಚಿಕೆದಾರರ ಗಂಡ/ ಪತ್ನಿ ಇಬ್ಬರ ಹೆಸರನ್ನು ನಮೂದಿಸಿಲ್ಲ. ಆದರೆ ಕ್ರಯ ಪತ್ರಗಳ ಖಂಡಿಕೆ 14 ರಲ್ಲಿ "ಕ್ರಯದಾರರು ತಮಗೆ ಹಂಚಿಕೆಯಾಗಿರುವ ನಿವೇಶನಕ್ಕಾಗಲೀ ಅಥವಾ ಕಟ್ಟಿರುವ ಕಟ್ಟವನ್ನಾಗಲೀ 10 ವರ್ಷಗಳವರೆಗೆ ಯಾರಿಗೂ ಪರಭಾರೆ/ ಮಾರಾಟ ಮಾಡತಕ್ಕಧ್ದಲ್ಲ. ಷರತ್ತು ಉಲ್ಲಂಘಿಸಿದ್ದಲ್ಲಿ ಕ್ರಮ ಜರುಗಿಸಲಾಗುವುದೆಂದು ವಿವರಿಸಿದ್ದಾರೆ. ಕಾರಣ ಕ್ಷೇಮಾಭಿವೃದ್ಧಿ ಸಂಘವು ಗಂಡ/ಹೆಂಡತಿ ಇಬ್ಬರ ಹೆಸರಿನಿಂದ ಜಂಟಿ ಹಂಚಿಕೆ ಪತ್ರ ನೀಡದೇ ಪ್ರಾಧಿಕಾರದ ಸೂಚನೆಯನ್ನು ಉಲ್ಲಂಘಿಸಿರುವುದು ಕಂಡು ಬರುತ್ತದೆ. ಆದರೆ ಹತ್ತು ವರ್ಷಗಳ ಒಳಗೆ ಹಸ್ತಾಂತರವನ್ನು ನಿರ್ಬಂಧಿಸಿದೆ. ಕಾರಣ ಈ ಆರೋಪ 4

ರಲ್ಲಿ ಭಾಗಶಃ ಸತ್ಯಾಂಶ ಇದೆ ಎಂದು ಅಭಿಪ್ರಾಯ ಪಟ್ಟಿದ್ದೇನೆ. ಆರೋಪ 7 ರಲ್ಲಿ ಕ್ಷೇಮಾಭಿವೃದ್ಧಿ ಸಂಘವು ಪ್ರಾಧಿಕಾರದ ನಿವೃತ್ತ ನೌಕರರಿಗೆ ಅಂಗಧೀರನಹಳ್ಳಿ ಬಡವಾಣೆಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು ಎಂದು ಹಿಂಬರಹ ನೀಡಲಾಗಿದೇಯೇ? ಎಂಬುವುದನ್ನು ನೋಡಬೇಕಾಗಿದೆ. ನಿವೃತ್ತ ನೌಕರರಿಗೆ ಕ್ಷೇಮಾಭಿವೃದ್ಧಿ ಸಂಘವು ನೀಡಿದೆ ಎನ್ನಲಾದ ಹಿಂಬರಹವನ್ನು ಹಾಜರಪಡಿಸಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶ ಇಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

8] ಆರೋಪ 8 ರಲ್ಲಿ ಪ್ರಾಧಿಕಾರದ ನೌಕರರಿಗೆ ಒಂದು ನಿವೇಶನ ಮತ್ತು ಅವರ ಕುಟುಂಬದ ವರ್ಗದವರಿಗೆ ಮತ್ತೊಂದು ನಿವೇಶನವನ್ನು ನೀಡಿ ಪ್ರಾಧಿಕಾರದ 17/06/2011 ರ ಸೂಚನೆಯನ್ನು ಕ್ಷೇಮಾಭಿವೃದ್ಧಿ ಸಂಘವು ಉಲ್ಲಂಘಿಸಿದೇಯೇ ಎಂಬುವುದನ್ನು ನೋಡೋಣ. ಶ್ರೀ. ಬಿ.ಎಮ್ ಚಿಕ್ಕಯ್ಯ ತಮ್ಮ ಹೇಳಿಕೆಯಲ್ಲಿ ಅಂತಹ ಯಾವುದೇ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಕೊಂಡಿಲ್ಲ. ಅಣ್ಣ ಮತ್ತು ತಮ್ಮನಿಗೆ ನಿವೇಶನಗಳನ್ನು ಮಂಜೂರು ಮಾಡಿದಲ್ಲಿ, ಅವರು ಆಗ ಜಂಟಿ ಕುಟುಂಬದಲ್ಲಿ ಇದ್ದರೆಂದು ತೋರಿಸಬೇಕಾಗುತ್ತದೆ. ನಿವೇಶನ ಮಂಜೂರು ಮಾಡುವ ಪೂರ್ವದಲ್ಲಿ ಅವರು ವಿಭಾಗ ಮಾಡಿಕೊಂಡು ಬೇರೆ ಬೇರೆಯಾಗಿ ವಾಸ ಮಾಡಿಕೊಂಡಿದ್ದಲ್ಲಿ ಅವರು ಇರ್ವರು ಕುಟುಂಬದ ಸದಸ್ಯರು ಎಂದು ಹೇಳುವಂತಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

9] ಆರೋಪ 9 ರಲ್ಲಿ ಪ್ರಾಧಿಕಾರದ ನೌಕರರಿಗೆ ಚಿಕ್ಕ ಚಿಕ್ಕ ನಿವೇಶನಗಳನ್ನು ಮತ್ತು ಸಾರ್ವಜನಿಕರಿಗೆ ದೊಡ್ಡ 30' X 40' ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂಬುವುದನ್ನು ನೋಡಬೇಕಾಗಿದೆ. ಈ ಆರೋಪಕ್ಕೆ ಸಂಬಂಧಿಸಿದಂತೆ ದೂರುದಾರರು ನಂಬಲು ಅರ್ಹವಾದ ದಾಖಲೆಗಳನ್ನು ಸಲ್ಲಿಸಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶ ಇಲ್ಲವೆಂದು ಅಭಿಪ್ರಾಯ ಪಟ್ಟಿದ್ದಾನೆ.

10] ಆರೋಪ 10 ರಲ್ಲಿ ಡಿ.ಟಿ. ಕೃಷ್ಣೇಗೌಡ ಇವರು ಉಚ್ಛ ನ್ಯಾಯಾಲಯದಲ್ಲಿ ಕ್ಷೇಮಾಭಿವೃದ್ಧಿ ಸಂಘದ ವಿರುದ್ಧ ಸಲ್ಲಿಸಿದ ರೀಟ್ ಅರ್ಜಿ ಸಂಖ್ಯೆ: 18658/2009 ಇದರಲ್ಲಿ ಉಚ್ಛ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ, ನ್ಯಾಯಾಲಯದ ನಿಂದನೆ ಮಾಡಲಾಗಿದೆಯೇ ಎಂಬುದನ್ನು ನೋಡಬೇಕಾಗಿದೆ. ನ್ಯಾಯಾಲಯದ ನಿಂಧನೆ ಆಗಿದೆಯೋ ಅಥವಾ ಇಲ್ಲವೋ ಎಂಬುದನ್ನು ಆ ನ್ಯಾಯಾಲಯವೇ ನಿರ್ಧರಿಸಬೇಕು ಇದನ್ನು ನಿರ್ಧರಿಸಲು ಬೇರೆಯವರಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶ ಇಲ್ಲವೆಂದು ಅಭಿಪ್ರಾಯಪಟ್ಟಿದ್ದೇನೆ.

22

12] ಆರೋಪ 12 ರಲ್ಲಿ ಕ್ಷೇಮಾಭಿವೃದ್ಧಿ ಸಂಘವು ದೊಡ್ಡ ಕಲ್ಲಸಂದ್ರ ಗ್ರಾಮದ ಪ್ರಾಧಿಕಾರದ ಅನುಮೋದಿತ ನಕ್ಷೆಯಲ್ಲಿ ಇಲ್ಲದ ನಿವೇಶನ ಸಂಖ್ಯೆ 5 ಡಿ-1 ಮತ್ತು 5-ವಾಯ್. ನಿವೇಶನಗಳನ್ನು ರಚಿಸಿ. ಹಂಚಿಕೆ ಮಾಡಲಾಗಿದೇಯೇ? ಎಂಬುದನ್ನು ನೋಡಬೇಕಾಗಿದ. ಅನುಮೋದಿತ ನಕ್ಷೆಯ ಪ್ರತಿಯನ್ನು ಹಾಜರು ಪಡಿಸಿಲ್ಲ. ಮತ್ತು ಆ ನಿವೇಶನಗಳ ಕ್ರಯ ಪತ್ರಗಳ ಪ್ರತಿಗಳನ್ನು ಹಾಜರುಪಡಿಸಿಲ್ಲ. ಕಾರಣ ಆರೋಪ 12 ರಲ್ಲಿ ಸತ್ಯಾಂಶ ಇಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

13] ಆರೋಪ 13 ರಲ್ಲಿ ದೊಡ್ಡಕಲ್ಲಸಂದ್ರ ಗ್ರಾಮದ ಪ್ರಾಧಿಕಾರದ ಅನುಮೋದಿತ ನಕ್ಷೆಯಲ್ಲಿ ನಿವೇಶನ ಸಂ: 334 ರಿಂದ ಪ್ರಾರಂಭವಾಗಿದ್ದು, 334 ಎ.ಬಿ.ಸಿ.ಡಿ.ಇ. ನಿವೇಶನಗಳನ್ನು ಆಕ್ರಮವಾಗಿ ರಚಿಸಲಾಗಿದೆಯೇ ಎಂಬುದನ್ನು ನೋಡಬೇಕಾಗಿದೆ. ಅನುಮೋದಿತ ನಕ್ಷೆಯ ಪ್ರತಿಯನ್ನು ಹಾಜರುಪಡಿಸಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶ ಇಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

14] ಆರೋಪ 14 ರಲ್ಲಿ, ಅಂಗಧೀರನಹಳ್ಳಿ ಗ್ರಾಮದ ಅನುಮೋದಿತ ನಕ್ಷೆಯಲ್ಲಿ ಸರ್ವೆ ನಂ:6(ಪಿ)ರಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನ ಸಂ: 1 (ಎ) 1 ಎಕರೆ ಇದನ್ನು ಪ್ರಾಧಿಕಾರಕ್ಕೆ ದಿನಾಂಕ: 10/01/2008ರಂದು ಕ್ಷೇಮಾಭಿವೃದ್ಧಿ ಸಂಘವು, ಹಕ್ಕು ಬಿಡುಗಡೆ ಪತ್ರವನ್ನು ಪ್ರಾಧಿಕಾರಕ್ಕೆ ಬರೆದುಕೊಟ್ಟಿದೆ. ನಂತರ ದಿ: 04/11/2015ರಂದು ಆ ನಿವೇಶನವನ್ನು ಶ್ರೀ. ಉದಯ ಸಾರ್ವಜನಿಕ ವ್ಯಕ್ತಿಗೆ ಕ್ರಯಪತ್ರ ಮಾಡಿಕೊಟ್ಟಿದೆಯೇ ಎಂಬುದನ್ನು ನೋಡಬೇಕಾಗಿದೆ. ಶ್ರೀ.ಬಿ.ಎಂ. ಚಿಕ್ಕಯ್ಯ ತಮ್ಮ ಹೇಳಿಕೆಯಲ್ಲಿ ಅಂಗಧೀರನಹಳ್ಳಿಯ ಬಡಾವಣೆಯ ಸಿ.ಎ. ನಿವೇಶನ ಸಂಖ್ಯೆ: 1(ಎ) ಇದನ್ನು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾಗಿದೆ. ಧೃಡೀಕೃತ ನಕ್ಷೆಯಲ್ಲಿ ಸಿ.ಎ. ನಿವೇಶನವೆಂದು ಗುರುತಿಸಲಾಗಿದೆ. ಆ ನಂತರ ಕ್ಷೇಮಾಭಿವೃದ್ಧಿ ಸಂಘವು ಅದನ್ನು ಪ್ರಾಧಿಕಾರಕ್ಕೆ ಹಕ್ಕು ಬಿಡುಗಡೆ ಪತ್ರದ ಮೂಲಕಲ ಕೊಟ್ಟಿದೆ. ಆ ಬಿಡುಗಡೆ ಪತ್ರದ ಪ್ರತಿ ಹಾಜರು ಪಡಿಸಿದ್ದು ಅದು ನಿಶಾನೆ ಪಿ-32 ರಂತೆ ಇದೆ. ಹೀಗೆ ಈ ನಾಗರೀಕ ನಿವೇಶನವನ್ನು ಪ್ರಾಧಿಕಾರಕ್ಕೆ ದಿ: 10/01/2008 ರಂದು ಮರಳಿಸಿದ ನಂತರ ದಿ: 04/11/2015 ರಂದು ಅದೇ ನಾಗರೀಕ ನಿವೇಶನ ಸಂಖ್ಯೆ : 1(ಎ) ಎಂದು ಗುರುತಿಸಿ ಅದನ್ನು ಸಾರ್ವಜನಿಕ ವ್ಯಕ್ತಿಯಾದ ಶ್ರೀ ಪಿ.ಉದಯ್ ಮತ್ತು ಅವರ ಹೆಂಡತಿಯಾದ ಸ್ಮಿತಾ ಇವರಿಗೆ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ/ ಕ್ರಯ ಪತ್ರದ ಪ್ರತಿ ನಿಶಾನೆ ಪಿ-33 ರಂತೆ ಇದೆ. ಎಂದು ಹೇಳಿದ್ದಾರೆ. ನಾನು ನಿಶಾನೆ ಪಿ-32ನ್ನು ಮತ್ತು ನಿಶಾನ ಪಿ-33ನ್ನು ಕುಲಂಕೂಷವಾಗಿ ಪರಿಶೀಲಿಸಿದೆ. ಇವುಗಳಿಂದ ನೌಕರರ ಕ್ಷೇಮಾಭಿವೃದ್ಧಿ ಸಂಘವು ಪ್ರಾಧಿಕಾರಕ್ಕೆ ಹಕ್ಕನ್ನು ಬಿಟ್ಟು ಕೊಟ್ಟ ನಂತರ ಆ ನಿವೇಶನವನ್ನು ಸಾರ್ವಜನಿಕರಾದ ಶ್ರೀ ಉದಯ ಇವರಿಗೆ ಮಾರಾಟ ಮಾಡಬಾರದಾಗಿತ್ತು

ಹೀಗೆ ಮಾರಾಟ ಮಾಡಿ ನಿಯಮ ಉಲ್ಲಂಘಿಸಿದ್ದು ಅಲ್ಲದೇ ನಾಗರೀಕ ಸೌಲಭ್ಯಕ್ಕೆ ಕಾಯ್ದಿರಿಸಿದ ನಿವೇಶನವನ್ನು ಮಾರಾಟ ಮಾಡಿದ್ದು ಕಂಡು ಬರುತ್ತದೆ. ಕಾರಣ ಆರೋಪ 14 ರಲ್ಲಿ ಸತ್ಯಾಂಶ ಇದೆ ಎಂದು ಅಭಿಪ್ರಾಯ ಪಟ್ಟಿದ್ದೇನೆ.

15] ಆರೋಪ 15:ಈ ಆರೋಪದಲ್ಲಿ ಕ್ಷೇಮಾಭಿವೃದ್ಧಿ ಸಂಘವು ಪ್ರಾಧಿಕಾರದ ಪರಿಷ್ಕೃತ ಮಾಸ್ಟರ್ ಪ್ಲಾನ್ 2015 ರಂತೆ ರಸ್ತೆ, ಆಟದ ಮೈದಾನ ಪಾರ್ಕ್ ಮತ್ತು ನಾಗರೀಕ ಸೌಲಭ್ಯಗಳಿಗೆ ಜಾಗೆಗಳನ್ನು ಮೀಸಲಿಟ್ಟಿಲ್ಲವೆಂದು ರುಜುವಾತು ಪಡಿಸಬೇಕಾಗಿದೆ. ಮಂಜೂರಾದ ನಕ್ಷೆಯ ಪ್ರತಿಯನ್ನು ಹಾಜರಪಡಿಸಿಲ್ಲ ಸದರೀ ಮಾಸ್ಟರ್ ಪ್ಲಾನ್‌ನ ನಿಯಮಗಳನ್ನು ಹೀಗೆ ಉಲ್ಲಂಘಿಸಲಾಗಿದೆ. ಇದಕ್ಕೆ ಹೇಳಿಕೆಯನ್ನು ನೀಡಿಲ್ಲ. ಕಾರಣ ಈ ಆರೋಪ 15 ರಲ್ಲಿ ಸತ್ಯಾಂಶವಿಲ್ಲವೆಂದು ನಿರ್ಧರಿಸಿದ್ದೇನೆ.

16] ಆರೋಪ 16 : ಈ ಆರೋಪದಲ್ಲಿ ಕ್ಷೇಮಾಭಿವೃದ್ಧಿ ಸಂಘವು ಅನುಮೋದಿತ ನಕ್ಷೆಯಲ್ಲಿ ನಮೂದಿಸಿದಂತಹ ವಿಸ್ತೀರ್ಣಕ್ಕಿಂತ ಹೆಚ್ಚಿನ ಕ್ಷೇತ್ರವನ್ನು ನಮೂದಿಸಿ ನಿವೇಶನಗಳನ್ನು ಮಾರಾಟ ಮಾಡಿ ನಿಯಮಗಳನ್ನು ಉಲ್ಲಂಘಿಸಿದೆಯೇ? ಎಂಬುವುದನ್ನು ನೋಡೋಣ. ಲಿಂಗಧೀರನಹಳ್ಳಿ ನಿವೇಶನ ಸಂಖ್ಯೆ 313 ಇದರ ಅಳತೆ 30 ಫೂಟ್ 20 ಫೂಟ ಇದೆ. —

— ಈ ನಿವೇಶನವನ್ನು ಶ್ರೀ. ಅಭಿಷೇಕ್ ಎಮ್ ಮಠಪತಿ ಸಾರ್ವಜನಿಕರಿಗೆ ಮಾರಾಟ ಮಾಡಿದ್ದು ಕ್ರಯ ಪತ್ರದಲ್ಲಿ ಅದರ ಅಳತೆಯನ್ನು 30 ಫೂಟ್ 40 ಫೂಟ್ ಎಂದು ನಮೂದಿಸಲಾಗಿದೆ. ಲಿಂಗಧೀರನಹಳ್ಳಿ ನಿವೇಶನ ಸಂಖ್ಯೆ 300 ಇದರ ಕ್ಷೇತ್ರ 20 ಫೂಟ್ 30 ಫೂಟ್ ಇದೆ. ಇದರ ದೃಢೀಕೃತ ನಕ್ಷೆಯ ಪ್ರತಿ ನಿ ಪಿ 35 ರಲ್ಲಿ ನಮೂದಿಸಲಾಗಿದೆ. ಕ್ಷೇಮಾಭಿವೃದ್ಧಿ ಸಂಘವು ಈ ನಿವೇಶನವನ್ನು ಶ್ರೀ. ಮಂಜುನಾಥ ಇವರಿಗೆ ಮಾರಾಟ ಮಾಡಿದೆ. ಅದರಲ್ಲಿ ಈ ನಿವೇಶನದ ಕ್ಷೇತ್ರ 20 ಫೂಟ್X40 ಫೂಟ್ ಎಂದು ನಮೂದಿಸಲಾಗಿದೆ. ಹೀಗೆ ರಸ್ತೆಯ ಪಕ್ಕದ ಜಾಗೆಯನ್ನು ಸೇರಿಸಿ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದು ಕಂಡು ಬರುತ್ತದೆ. ಕಾರಣ ಈ ಆರೋಪದಲ್ಲಿ ಸತ್ಯಾಂಶ ಇದೆ ಎಂದು ಅಭಿಪ್ರಾಯ ಪಟ್ಟಿದ್ದೇನೆ.

ಆರೋಪ 17:—

17] ಈ ಆರೋಪದಲ್ಲಿ ಕ್ಷೇಮಾಭಿವೃದ್ಧಿ ಸಂಘವು ರೈತರ ಜೊತೆಗೆ ನಿಯಮಗಳಿಗೆ ವಿರೋಧವಾಗಿ ಒಳ ಒಪ್ಪಂದವನ್ನು ಮಾಡಿಕೊಂಡಿದೇ ಎಂದು ರುಜುವಾತು ಪಡಿಸಬೇಕಾಗಿದ ಒಪ್ಪಂದದ ಪ್ರತಿಯನ್ನು ಹಾಜರ ಪಡಿಸಿಲ್ಲ. ಕಾರಣ ನಿಯಮಕ್ಕೆ

20

ವಿರೋಧವಾದ ಒಪ್ಪಂದವನ್ನು ಸಂಘವು ಮಾಡಿಕೊಂಡಿದೆ ಎಂದು ಹೇಳಲಿಕ್ಕಾಗದು. ಕಾರಣ ಈ ಆರೋಪದಲ್ಲಿ ಸತ್ಯಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

18] ಆರೋಪ ನಂ. 18 : ಈ ಆರೋಪದಲ್ಲಿ ಕ್ಷೇಮಾಭಿವೃದ್ಧಿ ಸಂಘದ ಪರವಾಗಿ ಉಪಾಧ್ಯಕ್ಷರು ಕಾರ್ಯಕಾರಿ ಸಮಿತಿಯ ಸದಸ್ಯರು ಕ್ರಯ ಪತ್ರದಲ್ಲಿ ಸಹಿ ಮಾಡಿರುತ್ತಾರೆಂದು ವಿವರಿಸಲಾಗಿದೆ. ಆದರೆ ಅಂತಹ ಕ್ರಯ ಪತ್ರಗಳ ಪ್ರತಿಗಳನ್ನು ಹಾಜರಪಡಿಸಿಲ್ಲ. ಹಾಜರಪಡಿಸಿದ ಕ್ರಯ ಪತ್ರದ ಪ್ರತಿಗಳಲ್ಲಿ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು ಸಹಿಗಳನ್ನು ಮಾಡಿದ್ದು ಕಂಡು ಬರುತ್ತದೆ. ಕಾರಣ ಈ ಆರೋಪದಲ್ಲಿ ಸತ್ಯಾಂಶ ಇಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

19] ಆರೋಪ ನಂ. 19:- ಈ ಆರೋಪದಲ್ಲಿ ಕ್ಷೇಮಾಭಿವೃದ್ಧಿ ಸಂಘವು ನೊಂದಣಿ ಆದಾಗಿನಿಂದ ಇಲ್ಲಿಯವರೆಗೆ ಚುನಾವಣೆಗೆ ಒಳಪಟ್ಟಿಲ್ಲ. ದಾಖಲೆಗಳನ್ನು ಸೃಷ್ಟಿಸಿದ್ದಾರೆ ಎಂದು ವಿವರಿಸಿದ್ದಾರೆ. ಆದರೆ ಸಂಘದ ಠರಾವು ಪುಸ್ತಕದ ಪ್ರತಿಯನ್ನು ಹಾಜರಪಡಿಸಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

20] ಆರೋಪ ನಂ. 20:- ಈ ಆರೋಪದಲ್ಲಿ ಶ್ರೀ. ಡಿ.ಎಸ್. ಬೆಟ್ಟೇಗೌಡರು ಯಾವ ಚುನಾವಣೆ ಎದುರಿಸಿ ಅಧ್ಯಕ್ಷರಾದರು ಎಂಬುವುದು ನಿಗೂಢವಾಗಿದೆ ಎಂದು ವಿವರಿಸಿದ್ದಾರೆ. ಚುನಾವಣೆ ನಡೆಯದೆ ಅಧ್ಯಕ್ಷರಾಗುವ ಸಾಧ್ಯತೆ ಇದೆ. ಯಾರೂ ಬೇರೆಯವರು ಅಧ್ಯಕ್ಷ ಪದಕ್ಕೆ ಸ್ಪರ್ಧಿಸದಿದ್ದರೆ ಚುನಾವಣೆ ಅವಶ್ಯವಿಲ್ಲ. ಹೇಗೆ ಬೆಟ್ಟೇಗೌಡರು ಅಧ್ಯಕ್ಷರಾದರು ಎಂಬುವುದು ನಿಗೂಢವಾದ ಮಾತ್ರಕ್ಕೆ ಅವರು ನಿಯಮಗಳಿಗೆ ವಿರೋಧವಾಗಿ ಅಧ್ಯಕ್ಷರಾದರೆಂದು ಹೇಳಲಿಕ್ಕಾಗದು. ಕಾರಣ ಈ ಆರೋಪದಲ್ಲಿ ಸತ್ಯಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

21] ಆರೋಪ ನಂ. 21:- ಈ ಆರೋಪದಲ್ಲಿ ಕ್ಷೇಮಾಭಿವೃದ್ಧಿ ಸಂಘವು ವಾರ್ಷಿಕ ಸಭೆಯನ್ನು ನಡೆಸದೆ ದಾಖಲಾತಿಗಳನ್ನು ಸೃಷ್ಟಿಸಿದೆ ಎಂದು ಆರೋಪಿಸಲಾಗಿದೆ. ಸೃಷ್ಟಿಸಿದ ದಾಖಲೆಗಳ ಪ್ರತಿಗಳನ್ನು ಹಾಜರಪಡಿಸಿಲ್ಲ. ಠರಾವು ಪುಸ್ತಕದ ಪ್ರತಿಯನ್ನು ಹಾಜರಪಡಿಸಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

22] ಆರೋಪ ನಂ. 22:- ಈ ಆರೋಪದಲ್ಲಿ ಕ್ಷೇಮಾಭಿವೃದ್ಧಿ ಸಂಘವು ದಾಖಲೆಗಳನ್ನು ಸೃಷ್ಟಿಸಿ ನೋಂದಣಾಧಿಕಾರಿಗಳ ಕಛೇರಿಗೆ ಸಲ್ಲಿಸಿದೆ. ಲೆಕ್ಕಪರಿಶೋಧನಾ ವರದಿ ಮತ್ತು ಸಭ ನಡುವಳಿಕೆಯ,ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂದು ಆರೋಪಿಸಲಾಗಿದೆ. ಈ

ಆರೋಪಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳ ಪ್ರತಿಗಳನ್ನು ಹಾಜರಪಡಿಸಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

23] ಆರೋಪ ನಂ. 23:- ಈ ಆರೋಪದಲ್ಲಿ ಕ್ಷೇಮಾಭಿವೃದ್ಧಿ ಸಂಘವು 31/03/2009 ರ ವರೆಗೆ ವಾರ್ಷಿಕ ಲೆಕ್ಕ ಪತ್ರ ಮತ್ತು ಕಾರ್ಯಕಾರಿ ಸಮಿತಿಯ ಪಟ್ಟಿಯನ್ನು ಸಲ್ಲಿಸಿದೆ. ನಂತರ ಲೆಕ್ಕ ಪತ್ರ ಮತ್ತು ಕಾರ್ಯಕಾರಿ ಸಮಿತಿಯ ಪಟ್ಟಿಯನ್ನು ಜಿಲ್ಲಾ ನೋಂದಾಣಿಕಾರಿಗಳಿಗೆ ಸಲ್ಲಿಸಿಲ್ಲವೆಂದು ಆರೋಪಿಸಲಾಗಿದೆ. ಈ ಆರೋಪಕ್ಕೆ ದಾಖಲೆಗಳನ್ನು ಪೂರಕಗಳನ್ನು ಹಾಜರಪಡಿಸಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

24] ಆರೋಪ ನಂ. 24:- ಈ ಆರೋಪದಲ್ಲಿ ಕ್ಷೇಮಾಭಿವೃದ್ಧಿ ಸಂಘವು ಪ್ರತಿ ವರ್ಷ ಲೆಕ್ಕ ಪರಿಶೋಧನಾ ವರಧಿ, ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಕೆಯ ಪ್ರತಿಯನ್ನು,ಸಂಘಗಳ ಜಿಲ್ಲಾ ನೋಂದನಾಧಿಕಾರಿಗಳಿಗೆ ಸಲ್ಲಿಸಿಲ್ಲವೆಂದು ಆರೋಪಿಸಲಾಗಿದೆ. ಈ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

25] ಆರೋಪ ನಂ. 25:- ಈ ಆರೋಪದಲ್ಲಿ ಕ್ಷೇಮಾಭಿವೃದ್ಧಿ ಸಂಘಕ್ಕೆ ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಲು ಅಧಿಕಾರವಿಲ್ಲವೆಂದು ವಿವರಿಸಲಾಗ್ಗಿದೆ. ಕರ್ನಾಟಕ ಸರ್ಕಾರವು ಜಮೀನನ್ನು ಸಗಟಾಗಿ ಹಂಚಿಕೆ ಮಾಡಲು ಕ್ಷೇಮಾಭಿವೃದ್ಧಿ ಸಂಘಕ್ಕೆ ಅನುಮತಿಯನ್ನು ಕೊಟ್ಟಿದ್ದು ನಿವೇಶಾನೆ ಪಿ 2 ಪತ್ರದಿಂದ ಕಂಡು ಬರುತ್ತದೆ. ಕಾರಣ ಈ ಆರೋಪದಲ್ಲಿ ಸತ್ಯಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

26] ಆರೋಪ ನಂ. 26 :- ಈ ಆರೋಪದಲ್ಲಿ ಕ್ಷೇಮಾಭಿವೃದ್ಧಿ ಸಂಘವು ಟೆಂಡರ್ ನಿಯಮಗಳನ್ನು ಪಾಲಿಸಿಲ್ಲ. ಹಣವನ್ನು ದುರುಪಯೋಗ ಮಾಡಿಕೊಂಡಿದೆ ಎಂದು ಆರೋಪಿಸಲಾಗಿದೆ. ಈ ಆರೋಪಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರಪಡಿಸಿಲ್ಲ. ಮತ್ತು ನಂಬಲು ಅರ್ಹವಾದ ಹೇಳಿಕೆಯನ್ನು ನೀಡಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

27] ಆರೋಪ ನಂ 27:- ಈ ಆರೋಪದಲ್ಲಿ ಕ್ಷೇಮಾಭಿವೃದ್ಧಿ ಸಂಘವು ನಿಯಮದಂತೆ ಸರ್ವ ಸದಸ್ಯರ ಸಭೆ ನಡೆಸಲು ನೋಟೀಸುಗಳನ್ನು ಕಳುಹಿಸಿಲ್ಲವೆಂದು ವಿವರಿಸಲಾಗಿದೆ. ಇದಕ್ಕೆ ಪೂರಕವಾದ ಹೇಳಿಕೆ ಮತ್ತು ದಾಖಲೆಗಳನ್ನು ಸಲ್ಲಿಸಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

18

28] ಆರೋಪ ನಂ. 28 :- ಈ ಆರೋಪದಲ್ಲಿ ಶ್ರೀ. ಡಿ.ಎನ್. ಬೆಟ್ಟೇಗೌಡ ಇವರು ನಿವೃತ್ತಿಯಾಗಿದ್ದರು ಸಹ ಸಂಘದ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ ಎಂದು ವಿವರಿಸಲಾಗಿದೆ. ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಲು ಉಪನಿಯಮದಂತೆ ಆ ಸಂಘದ ನೌಕರರಾಗಬೇಕಾಗಿರುತ್ತದೆ. ಶ್ರೀ. ಬಿ.ಎಮ್. ಚಿಕ್ಕಯ್ಯಾ ತಮ್ಮ ಹೇಳಿಕೆಯಲ್ಲಿ ಶ್ರೀ. ಡಿ.ಎನ್. ಬೆಟ್ಟೇಗೌಡ ನಿವೃತ್ತಿಯಾದ ನಂತರ ಸಂಘದ ಅಧ್ಯಕ್ಷರಾಗಿ ಮುಂದುವರೆದಿದ್ದಾರೆಂದು ವಿವರಿಸಿದ್ದಾರೆ. ಕಾರಣ ಈ ಆರೋಪದಲ್ಲಿ ಸತ್ಯಾಂಶ ಇದೆ, ಎಂದು ಅಭಿಪ್ರಾಯ ಪಟ್ಟಿದ್ದೇನೆ.

29] ಆರೋಪ ನಂ. 29 :- ಈ ಆರೋಪದಲ್ಲಿ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ಸಂಖ್ಯೆ 15ಪಿ, 16ಪಿ, 17ಪಿ ಇವುಗಳಲ್ಲಿ 33 ಎಕರೆ 2 ಗುಂಟೆ ಜಮೀನನನ್ನು ಪ್ರಾಧಿಕಾರದ ಆಯುಕ್ತರು ಸಂಘಕ್ಕೆ ಮಂಜೂರು ಮಾಡಿದ್ದಾರೆ. ನಂತರ ಅದರ ಕ್ಷೇತ್ರ 27 ಎಕರೆ 15 1/2 ಗುಂಟೆ ಎಂದು ತಿದ್ದುಪಡಿ ಪತ್ರವನ್ನು ನೋಂದಣಿ ಮಾಡಿಕೊಟ್ಟಿದ್ದಾರೆ. ಯಾವ ಕಾರಣದಿಂದ ಕ್ಷೇತ್ರದಲ್ಲಿ ವ್ಯತ್ಯಾಸ ಆಯಿತು ವಿವರಿಸಿಲ್ಲ ಎಂದು ವಿವರಿಸಿದ್ದಾರೆ. ಈ ಅಂಶವು ಪ್ರಾಧಿಕಾರಕ್ಕೂ ಮತ್ತು ಕ್ಷೇಮಾಭಿವೃದ್ಧಿ ಸಂಘಕ್ಕೆ ಬಿಟ್ಟ ವಿಷಯವಾಗಿದೆ ಅದನ್ನು ಸಂಘದ ನೌಕರರಿಗೆ ಪ್ರಾಧಿಕಾರವಾಗಲಿ ಸಂಘವಾಗಲಿ ವಿವರಿಸಿ ಹೇಳುವ ಅಗತ್ಯವಿಲ್ಲ. ಕಾರಣ ಈ ಆರೋಪದಲ್ಲಿ ಸತ್ಯಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದೇನೆ.

30] ಆರೋಪ ನಂ. 30 :- ಈ ಆರೋಪದಲ್ಲಿ ದೊಡ್ಡಕಲ್ಲಸಂದ್ರ ಸರ್ವೆ ಸಂಖ್ಯೆ 19ಪಿ, ಕ್ಷೇತ್ರ 1 ಎಕರೆ 28 ಗುಂಟೆ ಇದನ್ನು ಪ್ರಾಧಿಕಾರವು ಕ್ಷೇಮಾಭಿವೃದ್ಧಿ ಸಂಘಕ್ಕೆ ನೋಂದಣಿ ಮಾಡಿ ಕೊಟ್ಟಿರುವುದಿಲ್ಲ ಆದರೆ ಕ್ಷೇಮಾಭಿವೃದ್ಧಿ ಸಂಘವು ಈ ಕ್ಷೇತ್ರವನ್ನು ನಕ್ಷೆಯಲ್ಲಿ ಪಾರ್ಕ್ ಎಂದು ನಮೂದಿಸಿದೆ ಎಂದು ವಿವರಿಸಿದ್ದಾರೆ. ಶ್ರೀ. ಬಿ.ಎಮ್.ಚಿಕ್ಕಯ್ಯಾ ತನ್ನ ಹೇಳಿಕೆಯಲ್ಲಿ ದೊಡ್ಡಕಲ್ಲಸಂದ್ರ ಅನುಮೋದಿತ ನಕ್ಷೆ ನಿಶಾನೆ ಪಿ 34 ರಲ್ಲಿ ಆಟದ ಮೈದಾನ ಪಾರ್ಕ್ ಮತ್ತು ನಾಗರೀಕ ಸೌಲಭ್ಯಗಳಿಗೆ ಜಾಗವನ್ನು ಮೀಸಲು ಇಟ್ಟಿಲ್ಲ. ಸರ್ವೆ ನಂ. 19(ಪಿ) ಇದನ್ನು ಪ್ರಾಧಿಕಾರವು ಸಂಘಕ್ಕೆ ಹಸ್ತಾಂತರ ಮಾಡಿಲ್ಲ. ಆದರೆ ನಕ್ಷೆಯಲ್ಲಿ ಅದನ್ನು ಸೇರಿಸಿ ಪಾರ್ಕ್‌ಗೆ ಕಾಯ್ದಿರಿಸಿದ ಬಗ್ಗೆ ಬರೆಯಲಾಗಿದೆ, ಎಂದು ಹೇಳಿರುತ್ತಾರೆ. ನಾನು ನಿಶಾನೆ ಪಿ 34 ನ್ನು ಪರಿಶೀಲಿಸಿದೆ. ಅದರಲ್ಲಿ ಸರ್ವೆ ಸಂಖ್ಯೆ 19ಪಿ, 1 ಎಕರೆ 28 ಗುಂಟೆ ಇದನ್ನು ಪಾರ್ಕ್ ಸಂಖ್ಯೆ 4 ಎಂದು ಗುರ್ತಿಸಲಾಗಿದೆ. ಪ್ರಾಧಿಕಾರವು ದೊಡ್ಡಕಲ್ಲಸಂದ್ರ ಸರ್ವೆ ಸಂಖ್ಯೆ 19 ಪಿ ಇದರಲ್ಲಿ 1 ಎಕರೆ 28 ಗುಂಟೆ ಜಮೀನನ್ನು ಕ್ಷೇಮಾಬಿವೃದ್ಧಿ ಸಂಘಕ್ಕೆ ನಿವೇಶನ ಹಸ್ತಾಂತರ ಮಾಡದೆ ಇದ್ದರು ಸಹ ಅದನ್ನು ನಕ್ಷೆಯಲ್ಲಿ ತೋರಿಸಿ ಅಕ್ರಮ ಎಸಗಿದ್ದು ಕಂಡು ಬರುತ್ತದೆ. ಕಾರಣ ಈ ಆರೋಪದಲ್ಲಿ ಸತ್ಯಾಂಶ ಇದೆ ಎಂದು ಅಭಿಪ್ರಾಯ ಪಟ್ಟಿದ್ದೇನೆ.

31] ಆರೋಪ ನಂ. 31:- ಈ ಆರೋಪದಲ್ಲಿ ಪ್ರಾಧಿಕಾರವು ಕ್ಷೇಮಾಭಿವೃದ್ಧಿ ಸಂಘಕ್ಕೆ ಲಿಂಗಧೀರನಹಳ್ಳಿ ಸರ್ವೆ ನಂ. 1/4, 7/1, 7/5, 7/6, 7/8ಪಿ ಮತ್ತು 7/9 ರ ಮಂಜೂರು ಮಾಡಿಲ್ಲ ಆದರೆ ಕ್ಷೇಮಾಭಿವೃದ್ಧಿ ಸಂಘವು ಅವುಗಳಲ್ಲಿ ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಿದೆ ಎಂದು ಆರೋಪಿಸಲಾಗಿದೆ. ಶ್ರೀ. ಬಿ.ಎಮ್. ಚಿಕ್ಕಯ್ಯಾ ತನ್ನ ಹೇಳಿಕೆಯಲ್ಲಿ ಲಿಂಗಧೀರನಹಳ್ಳಿ ಸರ್ವೆ ಸಂಖ್ಯೆ 6(ಪಿ) ಮತ್ತು 7(ಪಿ) ಒಟ್ಟು ಕ್ಷೇತ್ರ 15 ಎಕರೆಯನ್ನು ಪ್ರಾಧಿಕಾರವು ಸಂಘಕ್ಕೆ ಮಂಜೂರು ಮಾಡಿಕೊಟ್ಟಿದೆ. ಆದರೆ, ನಿಶಾನೆ ಪಿ35 ಅನುಮೋದಿತ ನಕ್ಷೆಯಲ್ಲಿ ಲಿಂಗಧೀರನಹಳ್ಳಿ ಸರ್ವೆ ಸಂಖ್ಯೆ 1/4, 7/1, 7/5, 7/6, 7/8, 7/9 ಗಳನ್ನು ಸೇರಿಸಿ ನಿವೇಶನಗಳನ್ನು ರಚಿಸಿದ್ದು ಕಂಡು ಬರುತ್ತದೆ. ಆದರೆ, ಇವುಗಳನ್ನು ಪ್ರಾಧಿಕಾರವು ಸಂಘಕ್ಕೆ ಮಂಜೂರು ಮಾಡಿ ನೋಂದಣಿ ಮಾಡಿಕೊಟ್ಟಿಲ್ಲ, ಈಗ ಕ್ಷೇಮಾಭಿವೃದ್ಧಿ ಸಂಘ ಸರ್ಕಾರದ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಷರತ್ತುಗಳನ್ನು ಉಲ್ಲಂಘಿಸಿ ನಿವೇಶನ ಹಂಚಿಕೆಯಲ್ಲಿ ಅಕ್ರಮ, ಅವ್ಯವಹಾರಗಳನ್ನು ಎಸಗಿದೆ ಎಂದು ವಿವರಿಸಿದ್ದಾರೆ. ನಾನು ಅನುಮೋದಿತ ನಕ್ಷೆ ನಿಶಾನೆ ಪಿ 35 ನ್ನು ಪರಿಶೀಲಿಸಿದೆ ಅದರಲ್ಲಿ ಲಿಂಗಧೀರಹಳ್ಳಿ ಸರ್ವೆ ಸಂಖ್ಯೆ 1/4, 7/1, 7/5, 7/6, 7/8, 7/9 ಇವುಗಳನ್ನು ಸೇರಿಸಿ ನಿವೇಶನಗಳನ್ನು ರಚಿಸಲಾಗಿದೆ. ಪ್ರಾಧಿಕಾರವು ಲಿಂಗಧೀರನಹಳ್ಳಿ 6ಪಿ ಮತ್ತು 7ಪಿ ಇವುಗಳಲ್ಲಿ ಒಟ್ಟು ಕ್ಷೇತ್ರ 15 ಎಕರೆ ಮಾತ್ರ ಪ್ರಾಧಿಕಾರವು ಕ್ಷೇಮಾಭಿವೃದ್ಧಿ ಸಂಘಕ್ಕೆ ಮಂಜೂರು ಮಾಡಿಕೊಟ್ಟಿದ್ದು ಕಂಡು ಬರುತ್ತದೆ. ಕಾರಣ ಈ ಆರೋಪದಲ್ಲಿ ಸತ್ಯಾಂಶ ಇದೆ ಎಂದು ಅಭಿಪ್ರಾಯ ಪಟ್ಟಿದ್ದೇನೆ.

ಅಂತಿಮ ಅಭಿಪ್ರಾಯ :- ಆರೋಪ 1 ರಿಂದ 6, 11, 14, 16, 28, 30, 31 ಇವುಗಳಲ್ಲಿ ಸತ್ಯಾಂಶ ಇರುವುದು ಕಂಡು ಬಂದಿದೆ, ಆರೋಪ 7 ರಿಂದ 10, 12, 13, 15, 17 ರಿಂದ 27, 29 ಇವುಗಳಲ್ಲಿ ಸತ್ಯಾಂಶವಿಲ್ಲವೆಂದು ಕಂಡು ಬಂದಿದೆ.

ಬೆರಳಚ್ಚುಗಾರರಿಗೆ ಪುಟ 1, 23 ರಿಂದ 35 ಬೆರಳಚ್ಚು ಮಾಡಲು ಹೇಳಿದ್ದು ಅವರು ಬೆರಳಚ್ಚು ಮಾಡಿದ್ದನ್ನು ಪರಿಷ್ಕರಿ ಸಹಿ ಮಾಡಿದ್ದೇನೆ. ಪುಟ 2 ರಿಂದ 22 ಶ್ರೀ. ಬಿ.ಎಮ್. ಚಿಕ್ಕಯ್ಯಾ ಮತ್ತು ಇತರರು ಸಲ್ಲಿಸಿದ ದೂರಿನ ಝುರಾಕ್ಸ ಪ್ರತಿಯಾಗಿದೆ.

ಸ್ಥಳ: ಬೆಂಗಳೂರು
ದಿನಾಂಕ: 18/07/2017

18/07/2017
ವಿಚಾರಣಾಧಿಕಾರಿಗಳು

ದಿನಾಂಕ:18-03-2020

ಇಂದ,

ಮದಕರಿ ನಾಯಕ,
ಅಧೀಕ್ಷಕರು,
ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ,
4ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಇವರಿಗೆ,
ಠಾಣಾಧಿಕಾರಿಗಳು,
ಶೇಷಾದ್ರಿ ಪುರಂ ಆರಕ್ಷಕ ಠಾಣೆ,
ಬೆಂಗಳೂರು-20.

ಮಾನ್ಯರೆ,

ವಿಷಯ:- ಶ್ರೀ ಡಿ.ಎನ್. ಬೆಟ್ಟೇಗೌಡ, ಅಧ್ಯಕ್ಷರು, ಮತ್ತು ಶ್ರೀ ಎಂ. ಮಲ್ಲಣ್ಣ, ಪ್ರಧಾನ ಕಾರ್ಯದರ್ಶಿ, ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ಬೆಂಗಳೂರು ಇವರುಗಳ ವಿರುದ್ಧದ ಕ್ರೈಂ ಸಂಖ್ಯೆ:69/2016 ಸಂಬಂಧ ಮುಂದುವರೆದ ಅಂಶಗಳನ್ನು ತನಿಖೆಗೆ ಒಳಪಡಿಸುವ ಬಗ್ಗೆ.

ಉಲ್ಲೇಖ :-
1. ಮಾನ್ಯ ವಿಧಾನ ಪರಿಷತ್ತಿನ ಹಕ್ಕು ಬಾಧ್ಯತಾ ಸಮಿತಿಯ ಸಭಾ ನಡವಳಿ ದಿನಾಂಕ:10-01-2020 ಹಾಗೂ 10-02-2020
2. ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ನೋಂದಣಾಧಿಕಾರಿಗಳು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಇವರ ಆದೇಶ ಸಂಖ್ಯೆ: ಕ್ರ.ಸಂ:ಡಿಆರ್‌ಬಿ-/ಎಸ್‌ಒಆರ್/ದೂರು/90/2019-20 ದಿನಾಂಕ: 24-02-2020 ಮತ್ತು ದಿನಾಂಕ:16-03-2020
3. ತಮ್ಮ ಕಛೇರಿಯ ಹಿಂಬರಹ ದಿನಾಂಕ:09-03-2020.

******

ವಿಷಯಕ್ಕೆ ಸಂಬಂಧಿಸಿದಂತೆ, ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ಬಿ.ಡಿ.ಎ ಆವರಣ, ಕುಮಾರ ಪಾರ್ಕ್, ಬೆಂಗಳೂರು ಸಂಘದ ಅಧ್ಯಕ್ಷರಾದ ಶ್ರೀ ಡಿ.ಎನ್. ಬೆಟ್ಟೇಗೌಡ, ಮತ್ತು ಪ್ರಧಾನ ಕಾರ್ಯದರ್ಶಿಯಾದ ಶ್ರೀ ಎಂ. ಮಲ್ಲಣ್ಣ, ಇವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ನನಗೆ ಸೂಚಿಸಲಾಗಿತ್ತು.

ಉಲ್ಲೇಖ (2) ರ ಆದೇಶದಲ್ಲಿ ಕ್ರಿಮಿನಲ್ ದಾವೆ ಹೂಡಲು ಹೇಳಿರುವ ಅಂಶಗಳ ಜೊತೆಗೆ ಬಿಡಿಎ ಎಂಪ್ಲಾಯೀಸ್ ವೆಲ್‌ಪೇರ್ ಅಸೋಸಿಯೇಷನ್ ಈ ಸಂಘವು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರಡಿ ನೋಂದಣಿಯಾದ ಸಂಘವಾಗಿದ್ದು, ಆದರೆ ಸದರಿ ಸಂಘವು ತನ್ನ ಸದಸ್ಯರಿಗೆ ನಿವೇಶನಗಳನ್ನು

ಕ್ರಯಪತ್ರ ನೋಂದಣಿ ಮಾಡುವಾಗ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ 1959 ರಡಿ ರಚಿತವಾಗ ಸಂಘವಾಗಿದೆ. ಎಂದು ನಮೂದಿಸಿ ಸಹಕಾರ ಸಂಘಗಳ 1959 ಕಾಯ್ದೆಯ ಹೆಸರನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ (2)ರ ಈ ಕಛೇರಿ ಆದೇಶದಲ್ಲಿ ತಿಳಿಸಿರುವ ಆರೋಪಗಳ ಜೊತೆಗೆ ಈ ಸದರಿ ಅರೋಪವನ್ನು ಸೇರ್ಪಡೆಗೊಳಿಸಿ ಸದರಿ ಸಂಘದ ಅಧ್ಯಕ್ಷರಾದ ಶ್ರೀ ಡಿ.ಎನ್. ಬೆಟ್ಟೇಗೌಡ, ಪ್ರಧಾನ ಕಾರ್ಯದರ್ಶಿಯಾದ ಶ್ರೀ ಎಂ. ಮಲ್ಲಣ್ಣ, ಇವರುಗಳ ವಿರುದ್ಧ ಕ್ರಿಮಿನಲ್ ದಾವೆ ಹೂಡಲು ಆದೇಶಿಸಿರುತ್ತಾರೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಕ್ಷರಾದ ಶ್ರೀ ಡಿ.ಎನ್. ಬೆಟ್ಟೇಗೌಡ, ಪ್ರಧಾನ ಕಾರ್ಯದರ್ಶಿಯಾದ ಶ್ರೀ ಎಂ. ಮಲ್ಲಣ್ಣ, ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ಬೆಂಗಳೂರು ಇವರುಗಳ ವಂಚನೆಯ ಕೃತ್ಯಗಳಿಗಾಗಿ ಈಗಾಗಲೇ ಉಲ್ಲೇಖ (3) ರಂತೆ ದಾಖಲಾಗಿರುವ ಕ್ರೈಂ 69/2016 ರಲ್ಲಿ ಈ ಪತ್ರದಲ್ಲಿನ ಪ್ಯಾರಾ 2 ರಲ್ಲಿ ಅಂಶಗಳನ್ನು ಸೇರ್ಪಡೆಗೊಳಿಸಿ ಕೊಳ್ಳಲು ಕೋರಿದೆ.

ತಮ್ಮ ವಿಶ್ವಾಸಿ,
ಸಹಿ/-
(ಮದಕರಿ ನಾಯಕ)
ಅಧೀಕ್ಷಕರು,

**ಪ್ರತಿಯನ್ನು:-** 1. ಗೌರವಪೂರ್ವಕವಾಗಿ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.01, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52. ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಸಹಕಾರ ಸಂಘಗಳ ಉಪನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

R. Madakari Nayaka
(ಮದಕರಿ ನಾಯಕ)
ಅಧೀಕ್ಷಕರು,

14

ಶೇಷಾದ್ರಿಪುರಂ ಪೊಲೀಸ್ ಠಾಣೆ,
ಬೆಂಗಳೂರು ನಗರ,
ದಿನಾಂಕ:09-03-2020.

## -: ಹಿಂಬರಹ :-

ರವರಿಗೆ:-

ಮದಕರಿ ನಾಯಕ.
ಅಧೀಕ್ಷಕರು,
ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ,
4ನೇ ವಲಯ, ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು

ಮಾನ್ಯರೇ

ವಿಷಯ:- ಬಿ.ಡಿ.ಎ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಡಿ.ಎನ್.ಬೆಟ್ಟೇಗೌಡ ಮತ್ತು ಎಂ.ಮಲ್ಲಣ್ಣ, ಪ್ರಧಾನ ಕಾರ್ಯದರ್ಶಿ ರವರ ವಿರುದ್ಧ ಭಾರತ ದಂಡ ಸಂಹಿತೆ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲು ಕೋರಿರುವ ಬಗ್ಗೆ

ಉಲ್ಲೇಖ:- 1) ಶೇಷಾದ್ರಿಪುರಂ ಪೊಲೀಸ್ ಠಾಣೆ ಮೊ.ಸಂ.69/2016 ಕಲಂ.120(ಬಿ), 420 ರೆ/ವಿ 34 ಐ.ಪಿ.ಸಿ ಮತ್ತು ಮಾನ್ಯ ನ್ಯಾಯಾಲಯದ ಸಿ.ಸಿ.ನಂಬರ್ - 3681/2018
2) ಬಿ.ಎಂ.ಟಿ.ಎಫ್ ಪೊಲೀಸ್ ಠಾಣೆ ಮೊ.ಸಂ.15/2017 ಕಲಂ.33, 33(ಎ), 72 ಬಿ.ಡಿ.ಎ ಆಕ್ಟ್ 1976 ಮತ್ತು ಕಲಂ.120(ಬಿ), 409, 465, 468, 471, 420 ಐ.ಪಿ.ಸಿ ಹಾಗೂ ಮಾನ್ಯ ನ್ಯಾಯಾಲಯದ ಸಿ.ಸಿ.ನಂಬರ್ -1811/2019
3) ಬಿ.ಡಿ.ಎ ವಿಶೇಷ ಕಾರ್ಯನಿರತಪಡೆ ಮತ್ತು ಜಾಗೃತದಳದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರ ದೂರು ದಿನಾಂಕ:08-11-2019 ಮತ್ತು ದಿನಾಂಕ:31-12-2019
4) ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ನೋಂಧಣಾಧಿಕಾರಿಗಳು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ ರವರ ಆದೇಶ ಸಂಖ್ಯೆ:ಕ್ರ.ಸಂ:ಡಿಆರ್‌ಬಿ/ಎಸ್‌ಓಆರ್/ದೂರು/90/2019-20 ದಿನಾಂಕ:24-02-2020
5) ತಮ್ಮ ದೂರು ದಿನಾಂಕ:04-03-2020

- * - * - * - * - * -

ಮೇಲ್ಕಂಡ ವಿಷಯ ಮತ್ತು ಉಲ್ಲೇಖನಕ್ಕೆ ಸಂಬಂಧಿಸಿದಂತೆ ನಿಮಗೆ ತಿಳಿಯಪಡಿಸುವುದೇನೆಂದರೆ ಬಿ.ಡಿ.ಎ ನಿವೃತ್ತ ನೌಕರನಾದ ಶ್ರೀ.ಬಿ.ಎಂ.ಚಿಕ್ಕಯ್ಯ ಬಿನ್ ಲೇಟ್ ಮಾಯಿಗಯ್ಯ, 71ವರ್ಷ, ನಂ.114, 1ನೇ ಕ್ರಾಸ್, ಸೆಂಟ್ರಲ್ ಎಕ್ಸೈಜ್ ಲೇಔಟ್, ವಿಜಯನಗರ, ಬೆಂಗಳೂರು-40 ಎಂಬುವರು ದಿನಾಂಕ:17-05-2016 ರಂದು ಶೇಷಾದ್ರಿ ಮರಂ ಠಾಣೆಯಲ್ಲಿ ಹಾಜರಾಗಿ ಆರೋಪಿತರಾದ 1) ಡಿ.ಎನ್.ಬೆಟ್ಟೇಗೌಡ ಮತ್ತು ಇತರರ ವಿರುದ್ಧ ಪ್ರಾಧಿಕಾರ ದಿಂದ ಬಿ.ಡಿ.ಎ. ವೆಲ್‌ಫೇರ್ ಅಸೋಸಿಯೇಷನ್‌ಗೆ 04 ಹಂತದಲ್ಲಿ ದೊಡ್ಡಕಲ್ಲಸಂದ್ರ ಮತ್ತು ಲಿಂಗದೀರನಹಳ್ಳಿಯಲ್ಲಿ ಬಿಡುಗಡೆಯಾದ ಜಮೀನಿನಲ್ಲಿ ನಿವೇಶನಗಳನ್ನು ರಚಿಸಿ ಯಾರ ಅನುಮತಿಯನ್ನು ಪಡೆಯದೇ ಅಕ್ರಮವಾಗಿ ಮನಸೋ ಇಚ್ಛೆ ನಿವೃತ್ತ ನೌಕರರಿಗೆ ನೀಡಬೇಕಾಗಿದ್ದ ನಿವೇಶನಗಳನ್ನು ಸಾರ್ವಜನಿಕರು, ಇತರೆ ಇಲಾಖೆ ನೌಕರರು ಮತ್ತು ಎರವಲು ಸೇವಾ ನೌಕರರಿಗೆ ಹೆಚ್ಚಿನ ಹಣಕ್ಕೆ ಮಾರಾಟ ಮಾಡಿ ರಿಜಿಸ್ಟರ್ ಮಾಡಿಕೊಟ್ಟು ನಂಬಿಕೆದ್ರೋಹವೆಸಗಿ ಮೋಸ ಮಾಡಿರುತ್ತಾರೆಂದು ಕೊಟ್ಟ ದೂರಿನ ಮೇರೆಗೆ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಮೊ.ಸಂ.69/2016 ಕಲಂ.406, 420 ರೆ/ವಿ 34 ಐ.ಪಿ.ಸಿ ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

ತನಿಖಾಕಾಲದಲ್ಲಿ ಬಿ.ಡಿ.ಎ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಿದ್ದ ಡಿ.ಎನ್.ಬೆಟ್ಟೇಗೌಡ ಮತ್ತು ಮಲ್ಲಣ್ಣ ಎಂಬುವರು ತಮಗೆ ಅಕ್ರಮ ಲಾಭ ಮಾಡಿಕೊಳ್ಳುವ ಉದ್ದೇಶದಿಂದ ಒಳಸಂಚು ನಡೆಸಿ ಪ್ರಾಧಿಕಾರದ

ನೌಕರರನ್ನು ಹೊರತು ಪಡಿಸಿ ಪ್ರಾಧಿಕಾರದ ನೌಕರರಲ್ಲದ ಅನ್ಯ ಇಲಾಖೆಯ ನೌಕರರು ಮತ್ತು ಎರವಲು ಸೇವೆಯ ನೌಕರರು ಮತ್ತು ಸಾರ್ವಜನಿಕರಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ವಿಂಗಡಿಸಲಾಗಿದ್ದ ಎಂ.ಕೆ.ಎಸ್ ಬಡಾವಣೆಯಲ್ಲಿ ವಿಂಗಡಿಸಲಾಗಿದ್ದ ನಿವೇಶನಗಳನ್ನು ಹಂಚಿಕೆ ಮಾಡಿ ತನಗೆ ಅಕ್ರಮ ಲಾಭ ಮಾಡಿಕೊಂಡು ಪ್ರಾಧಿಕಾರದ ನಿವೃತ್ತ ನೌಕರರಿಗೆ ಮೋಸ ಮಾಡಿರುವುದು ತನಿಖೆಯಿಂದ ದೃಡಪಟ್ಟ ಮೇರೆಗೆ ಆರೋಪಿತರಾದ ಡಿ.ಎನ್.ಬೆಟ್ಟೇಗೌಡ ಮತ್ತು ಎಂ.ಮಲ್ಲಣ್ಣ ಎಂಬುವರ ವಿರುದ್ಧ ಕಲಂ.120(ಬಿ), 420 ರ/ವಿ 34 ಐ.ಪಿ.ಸಿ ಅಡಿಯಲ್ಲಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದ್ದು ಮಾನ್ಯ ನ್ಯಾಯಾಲಯವು ಸಿ.ಸಿ.ನಂಬರ್ - 3681/2018 ರಲ್ಲಿ ವಿಚಾರಣೆಯನ್ನು ಕೈಗೊಂಡಿದ್ದು ಮುಂದಿನ ವಿಚಾರಣಾ ದಿನಾಂಕ:-18-05-2020 ಆಗಿರುತ್ತದೆ.

ಈ ಮದ್ಯೆದಲ್ಲಿ ಬಿ.ಡಿ.ಎ ನಿವೃತ್ತ ನೌಕರನಾದ ಶ್ರೀ.ಬಿ.ಎಂ.ಚಿಕ್ಕಯ್ಯ ಬಿನ್ ಲೇಟ್ ಮಾಯಿಗಯ್ಯ, 71ವರ್ಷ, ನಂ.114, 1ನೇ ಕ್ರಾಸ್, ಸೆಂಟ್ರಲ್ ಎಕ್ಸೈಜ್ ಲೇಔಟ್, ವಿಜಯನಗರ, ಬೆಂಗಳೂರು-40 ಮತ್ತು ಇತರರು ದಿನಾಂಕ: 11-07-2017 ರಂದು ಬಿ.ಎಂ.ಟಿ.ಎಫ್ ಪೊಲೀಸ್ ಠಾಣೆಯಲ್ಲಿ ಸರ್ಕಾರಿ ಆದೇಶದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರಿಗೆ ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಬೇಕೆಂದು ಸಗಟು ಜಮೀನು ಹಂಚಿಕೆಗೆ ಸರ್ಕಾರವು ತಾತ್ವಿಕ ಅನುಮೋದನೆ ನೀಡಿದ್ದು, ಜೆ.ಪಿ.ನಗರ 9ನೇ ಹಂತದ ಬಡಾವಣೆ ನಿರ್ಮಾಣ ಮಾಡಲು ಸ್ವಾಧೀನ ಪಡಿಸಿಕೊಂಡಿದ್ದ ದೊಡ್ಡಕಲ್ಲಸಂದ್ರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ಒಟ್ಟು 33 ಎಕರೆ 02 ಗುಂಟೆ ಮತ್ತು ಬನಶಂಕರಿ 6ನೇ ಹಂತ ಬಡಾವಣೆ ನಿರ್ಮಾಣ ಮಾಡಲು ಭೂಸ್ವಾಧೀನಪಡಿಸಿಕೊಂಡಿದ್ದ ಲಿಂಗದೀರನಹಳ್ಳಿ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ 15 ಎಕರೆ ಜಮೀನನ್ನು ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್‌ಗೆ ಷರತ್ತು ವಿಧಿಸಿ ಬಿಡುಗಡೆ ಮಾಡಲಾಗಿರುತ್ತದೆ. ಆದರೆ ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಶಿಯೇಷನ್‌ರವರು ಈ ಜಮೀನುಗಳಲ್ಲದೇ ಪ್ರಾಧಿಕಾರದ ಅಧಿಕಾರಿ/ನೌಕರರೊಡನೆ ಒಳಸಂಚು ರೂಪಿಸಿ ಪ್ರಾಧಿಕಾರವು ಕ್ರಯಪತ್ರ ಮಾಡಿಕೊಡದೇ ಇರುವ ಜಮೀನುಗಳನ್ನು ಹಾಗೂ ಬಡಾವಣೆ ರಚಿಸಿ ಪ್ರಾಧಿಕಾರದ ಸುಪರ್ದಿಗೆ ಒಪ್ಪಿಸಿದ್ದ ಸಿ.ಎ ನಿವೇಶನವನ್ನು ಸಹ ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡಿರುತ್ತಾರೆಂದು ಹಾಗೂ ಇನ್ನೂ ಹಲವಾರು ಅಪಾದನೆಗಳನ್ನು ಮಾಡಿ ದೂರು ನೀಡಿದ್ದು, ಸದರಿ ದೂರಿನ ಮೇರೆಗೆ ಬಿ.ಎಂ.ಟಿ.ಎಫ್ ಅಧಿಕಾರಿಗಳು ನಂ.ಎಸ್.ಪಿ/ಬಿಎಂಟಿಎಫ್/ಪಿಟಿಷನ್/179/2017 ರಲ್ಲಿ ಪ್ರಾಥಮಿಕ ವಿಚಾರಣೆ ನಡೆಸಿ ತದನಂತರ ದಿನಾಂಕ:28-08-2017 ರಂದು ಮೊ.ಸಂ.15/2017 ಕಲಂ.33, 33(ಎ), 72 ಬಿ.ಡಿ.ಎ ಆಕ್ಟ್ 1976 ಮತ್ತು ಕಲಂ.120(ಬಿ), 409, 465, 468, 471, 420 ಐ.ಪಿ.ಸಿ ರಿತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ನಡೆಸಿ, ತನಿಖಾಕಾಲದಲ್ಲಿ ಸಂಗ್ರಹಿಸಿದ್ದ ಸಾಕ್ಷ್ಯಧಾರಗಳನ್ನು ಕ್ರೂಡೀಕರಿಸಿ ಬಿ.ಡಿ.ಎ ಅಧಿಕಾರಿಗಳ ವಿರುದ್ಧ ಆರೋಪ ಸಾಬೀತಾಗದ ಕಾರಣ ಸದರಿಯವರುಗಳನ್ನು ಆರೋಪಪಟ್ಟಿಯಿಂದ ಕೈಬಿಟ್ಟು ಆರೋಪಿತರಾದ 1)ಡಿ.ಎನ್.ಬೆಟ್ಟೇಗೌಡ 2) ಎಂ.ಮಲ್ಲಣ್ಣ 3) ಉದಯ್ ಮತ್ತು 4) ಶ್ರೀಮತಿ.ಸ್ಮಿತಾ ಎಂಬುವರ ವಿರುದ್ಧ ಕಲಂ.33, 33(ಎ), 72 ಬಿ.ಡಿ.ಎ ಆಕ್ಟ್ 1976 ಮತ್ತು ಕಲಂ.120(ಬಿ), 409, 465, 468, 471, 420 ಐ.ಪಿ.ಸಿ ಅಡಿಯಲ್ಲಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು ಮಾನ್ಯ ನ್ಯಾಯಾಲಯದ ಸಿ.ಸಿ.ನಂಬರ್ - 1811/2019 ರಲ್ಲಿ ವಿಚಾರಣೆಯಲ್ಲಿರುತ್ತದೆ.

ಹೀಗಿರುವಾಗ್ಗೆ ದಿನಾಂಕ:08-11-2019 ರಂದು ಯಶವಂತಕುಮಾರ್.ಎಂ.ಆರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತದಳ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನಗರ ರವರು ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಹಾಜರಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನ ಪಡಿಸಿಕೊಂಡು ಬಿ.ಡಿ.ಎ ನೌಕರರಿಗೆ ಹಂಚಿಕೆ ಮಾಡಲು ಬಿ.ಡಿ.ಎ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ನೋಂಧಾಯಿಸಿ ಕೊಟ್ಟಿದ್ದ ದೊಡ್ಡಕಲ್ಲಸಂದ್ರ ಮತ್ತು ಲಿಂಗದೀರನಹಳ್ಳಿ ಗ್ರಾಮದ ವಿವಿಧ ಸರ್ವೇ ನಂಬರಿನ ಜಮೀನುಗಳಲ್ಲಿ ನಿರ್ಮಾಣ ಮಾಡಿರುವ ಬಿ.ಡಿ.ಎ ಅನುಮೋದಿತ ಎಂ.ಕೆ.ಎಸ್ 1ನೇ ಮತ್ತು 2ನೇ ಹಂತ ಬಡಾವಣೆಗಳಲ್ಲಿನ ನಿವೇಶನಗಳನ್ನು ಬಿ.ಡಿ.ಎ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಡಿ.ಎನ್.ಬೆಟ್ಟೇಗೌಡ ಮತ್ತು ಪದಾಧಿಕಾರಿಗಳು ಸೇರಿಕೊಂಡು ಸಹಕಾರ ಸಂಘಗಳ ಬೈಲಾ ನಿಯಮ/ಸರ್ಕಾರದ ಆದೇಶಗಳು/ಪ್ರಾಧಿಕಾರದ ಶೀರ್ಮಾನಗಳಿಗೆ ವಿರುದ್ಧವಾಗಿ ಬಿ.ಡಿ.ಎ ನೌಕರರಲ್ಲದ ಹಾಗೂ ಸದಸ್ಯತ್ವ ಹೊಂದಿಲ್ಲದ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಿ ಅಕ್ರಮ ಲಾಭ

ಮಾಡಿಕೊಂಡು ಪ್ರಾಧಿಕಾರಕ್ಕೆ ಆರ್ಥಿಕ ನಷ್ಟ ವನ್ನುಂಟು ಮಾಡಿ ವಂಚನೆ ಮಾಡಿರುತ್ತಾರೆಂದು ಆರೋಪಿಸಿ ದೂರು ನೀಡಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ ದಿನಾಂಕ:08-11-2019 ರಂದು ಯಶವಂತಕುಮಾರ್.ಎಂ.ಆರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತದಳ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನಗರ ರವರಿಗೆ ತಾವು ದೂರಿನಲ್ಲಿ ತಿಳಿಸಿರುವ ಅಂಶಗಳು ಮತ್ತು ಈಗಾಗಲೇ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ (ಮೊ.ಸಂ.69/2016) ದಾಖಲಾಗಿ ಮಾನ್ಯ ನ್ಯಾಯಾಲಯದಲ್ಲಿ ಸಿ.ಸಿ.ನಂಬರ್ - 3681/2018 ರಲ್ಲಿ ವಿಚಾರಣೆಯಲ್ಲಿರುವ ಪ್ರಕರಣದಲ್ಲಿನ ಅಂಶಗಳು ಹಾಗೂ ಆರೋಪಿತರು ಒಬ್ಬರೇ ಆಗಿದ್ದು ಒಂದೇ ವಿಷಯ ಮತ್ತು ಎರಡು ಪ್ರಕರಣಗಳಿಗೆ ಒಬ್ಬರೇ ಆರೋಪಿತರಿರುವುದರಿಂದ ಮತ್ತೊಂದು ಎಫ್.ಐ.ಆರ್ ಅನ್ನು ದಾಖಲಿಸಲು ಕಾನೂನಿನಲ್ಲಿ ಅವಕಾಶ ಇಲ್ಲದೇ ಇರುವ ಪ್ರಯುಕ್ತ, ತಾವು ನೀಡುತ್ತಿರುವ ದೂರು ಮತ್ತು ದೂರಿನೊಂದಿಗೆ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಸ್ವೀಕರಿಸಿಕೊಂಡು ಈಗಾಗಲೇ ಶೇಷಾದ್ರಿಪುರಂ ಪೊಲೀಸ್ ಠಾಣೆ ಮೊ.ಸಂ.69/2016 ಪ್ರಕರಣಕ್ಕೆ ಅಡಕಗೊಳಿಸಿಕೊಂಡು ನಂತರ ಮಾನ್ಯ ನ್ಯಾಯಾಲಯದಲ್ಲಿ ಸಿ.ಸಿ.ನಂಬರ್ - 3681/2018 ರಲ್ಲಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಂ.173(8) ಸಿ.ಆರ್.ಪಿ.ಸಿ ಅಡಿಯಲ್ಲಿ ಹೆಚ್ಚುವರಿ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದೆಂದು ಅದೇ ದಿನ ಹಿಂಬರಹವನ್ನು ನೀಡಲಾಗಿರುತ್ತದೆ.

ಮುಂದುವರೆದು ದಿನಾಂಕ:31-12-2019 ರಂದು ಯಶವಂತಕುಮಾರ್.ಎಂ.ಆರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತದಳ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನಗರ ರವರು ಪುನಃ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಹಾಜರಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಿ.ಡಿ.ಎ ನೌಕರರ ವೆಲ್‌ಫೇರ್ ಅಸೋಶಿಯೇಷನ್ ಸಂಘಕ್ಕೆ ದೊಡ್ಡಕಲ್ಲಸಂದ್ರ ಮತ್ತು ಲಿಂಗದೀರನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿನ ಒಟ್ಟು 42 ಎಕರೆ ಹದಿನೈದುವರೆ ಗುಂಟೆ ಜಮೀನನ್ನು ಸಗಟು ಹಂಚಿಕೆ ಮಾಡಿ ಬಡಾವಣೆ ನಕ್ಷೆ ಮಂಜೂರು ಮಾಡಿದ ಸಂದರ್ಭದಲ್ಲಿ ಪ್ರಾಧಿಕಾರದ ಅಧಿಕಾರಿ/ನೌಕರರು ಸಂಘದ ಅಧ್ಯಕ್ಷರು/ ಕಾರ್ಯದರ್ಶಿ ಮತ್ತು ಪದಾಧಿಕಾರಿಗಳೊಂದಿಗೆ ಶಾಮೀಲಾಗಿ ಒಳಸಂಚು ನಡೆಸಿ ಅಧಿಕಾರವನ್ನು ದುರುಪಯೋಗ ಪಡಿಸಿ ಕೊಂಡು ಪ್ರಾಧಿಕಾರದ ನಿಯಮಾವಳಿಗಳಿಗೆ ವಿರುದ್ಧವಾಗಿ ಪ್ರಾಧಿಕಾರದ ಸ್ವತ್ತನ್ನು ಹಂಚಿಕೆ ಮಾಡಿ ಬಡಾವಣೆ ನಕ್ಷೆ ಮಂಜೂರಾತಿ ಮಾಡಿಕೊಟ್ಟು ಪರಿತ್ಯಾಜನಾ ಪತ್ರದ ಮೂಲಕ ನೋಂಧಾಯಿಸಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿದ್ದ ಲಿಂಗದೀರನಹಳ್ಳಿ ಗ್ರಾಮ (ಎಂ.ಕೆ.ಎಸ್.2ನೇ ಹಂತ ಬಡಾವಣೆ)ಯ ಸಿ.ಎ ನಿವೇಶನವನ್ನು ಪ್ರಾಧಿಕಾರದ ನಿಯಮಾವಳಿಗೆ ವ್ಯತಿರಿಕ್ತವಾಗಿ ಹಂಚಿಕೆ ಮಾಡಿ, ನಿಯಮಬಾಹಿತರವಾಗಿ ನಿವೇಶನಗಳಿಗೆ ಖಾತಾ ನೋಂಧಾಯಿಸಿಕೊಟ್ಟು ಪ್ರಾಧಿಕಾರಕ್ಕೆ ಅಪರಾಧಿಕ ನಂಬಿಕೆದ್ರೋಹವೆಸಗಿ ಮೋಸ ಮಾಡಿ ಆರ್ಥಿಕ ನಷ್ಟವನ್ನುಂಟು ಮಾಡಿರುವ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಉಪಕಾರ್ಯದರ್ಶಿ-1 ರವರ ವಿಭಾಗದಿಂದ ಪಡೆದುಕೊಂಡಿರುವ ಅನೌಪಚಾರಿಕ ಟಿಪ್ಪಣಿ ಮತ್ತು ಜಾಗೃತದಳದ ಆರಕ್ಷಕ ಉಪಾಧೀಕ್ಷರು ನೀಡಿರುವ ಜ್ಞಾಪನದೊಂದಿಗೆ ದೂರು ನೀಡಿದ್ದು, ಯಶವಂತಕುಮಾರ್.ಎಂ.ಆರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತದಳ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನಗರ ರವರು ದಿನಾಂಕ:31-12-2019 ರಂದು ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಬಿ.ಡಿ.ಎ ಉಪ ಕಾರ್ಯದರ್ಶಿ-1 ಮತ್ತು ಆರಕ್ಷಕರ ಉಪಾಧೀಕ್ಷಕರ ಜ್ಞಾಪನದ ಮೇರೆಗೆ ನೀಡಿರುವ ದೂರಿನಲ್ಲಿ ಆರೋಪಿಸಿರುವ ಅಂಶಗಳ ಬಗ್ಗೆ ಈಗಾಗಲೇ ಬಿ.ಡಿ.ಎ ನಿವೃತ್ತ ನೌಕರನಾದ ಬಿ.ಎಂ.ಚಿಕ್ಕಯ್ಯ ರವರು ಬಿ.ಎಂ.ಟಿ.ಎಫ್ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿರುವ ದೂರಿನಲ್ಲಿ ಉಲ್ಲೇಖಿಸಿದ್ದು, ಸದರಿ ವಿಷಯಗಳಿಗೆ ಸಂಬಂಧಿಸಿದಂತೆ ಬಿ.ಎಂ.ಟಿ.ಎಫ್ ಪೊಲೀಸ್ ಠಾಣೆಯಲ್ಲಿ ತನಿಖೆಯನ್ನು ಕೈಗೊಂಡು ಬಿ.ಡಿ.ಎ ಅಧಿಕಾರಿಗಳ ವಿರುದ್ಧ ಆರೋಪ ಸಾಬೀತಾಗದ ಪ್ರಯುಕ್ತ ಬಿ.ಡಿ.ಎ ಅಧಿಕಾರಿಗಳನ್ನು ಹೊರತುಪಡಿಸಿ ಉಳಿದ ಆರೋಪಿತರಾದ 1)ಡಿ.ಎನ್.ಬೆಟ್ಟೇಗೌಡ 2) ಎಂ.ಮಲ್ಲಣ್ಣ 3)ಉದಯ್ ಮತ್ತು 4) ಸ್ಮಿತಾ ಎಂಬುವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದರಿಂದ ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಮತ್ತೊಂದು ಎಫ್.ಐ.ಆರ್ ಅನ್ನು ದಾಖಲಿಸಲು ಕಾನೂನಿನಲ್ಲಿ ಅವಕಾಶ ಇಲ್ಲದೇ ಇದ್ದ ಪ್ರಯುಕ್ತ, ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆಯಲಾಗಿ ಕಾನೂನು ಅಧಿಕಾರಿಗಳು ಈಗಾಗಲೇ ಇದೇ ವಿಚಾರಕ್ಕೆ ಪ್ರಥಮ ವರ್ತಮಾನ ವರದಿ

ದಾಖಲಿಸಿ ತನಿಖೆ ಕೈಗೊಂಡಿರುವುದರಿಂದ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಮತ್ತೊಂದು ಪ್ರಥಮ ವರ್ತಮಾನ ವರದಿ ದಾಖಲಿಸುವುದು ಸೂಕ್ತವಾಗಿರುವುದಿಲ್ಲ ಮತ್ತು ಒಂದೆ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಪ್ರತ್ಯೇಕ ತನಿಖೆಗಳನ್ನು ಕೈಗೊಳ್ಳುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು **Surnder Kaushik & Ors vs State of U.P & ors** ಪ್ರಕರಣದಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ವ್ಯಕ್ತಪಡಿಸಿರುತ್ತದೆ.

In T.T.Antony (supra), it was canvassed on behalf of the accused that the registration of fresh information in respect of the very same incident as an FIR under section 154 of the code was not valid and therefore, all steps taken pursuant thereto including investigation were illegal and liable to be quashed. The Bench analyzing the scheme of the provisions of sections 154, 155, 156, 157, 162, 169, 170 and 173 of the code, came to hold that only the earliest or the first information in regard to the commission of a cognizable offence satisfies the requirements of section 154 of the code and therefore , there can be no second FIR and consequently, there can be no fresh investigation on receipt of every subsequent information in respect of the same cognizable offence or the same occurrence or incident giving rise to one or more cognizable offences. It was further observed that on receipt of information about a cognizable offence or an incident giving rise to a cognizable offence or offences and on entering the FIR in the Station house diary. the officer in charge of a police station has to investigate not merely the cognizable offence reported in the FIR but also other connected offences found to have been committed in the course of the same transaction or the same occurrence and file one or more reports as provided in section 173 of the code.

ಆದರೆ ಪ್ರಸ್ತುತ ದೂರು ಅರ್ಜಿಯಲ್ಲಿ ಕೆಲವು ಬಿ.ಡಿ.ಎ ಅಧಿಕಾರಿಗಳ ಹೆಸರುಗಳನ್ನು ನಮೂದಿಸಿರುವುದರಿಂದ ಮತ್ತು ಹೆಚ್ಚುವರಿ ಮಾಹಿತಿಯು ಬಹಿರಂಗವಾಗಿರುವುದರಿಂದ ಹಾಗೂ ಬಿ.ಎಂ.ಟಿ.ಎಫ್ ಪೊಲೀಸ್ ಠಾಣೆ ಮೊ.ಸಂ.15/2017 ರ ಪ್ರಕರಣದ ಭಾಗವಾದ್ದರಿಂದ ಕಲಂ.173(8) ಸಿ.ಆರ್.ಪಿ.ಸಿ ಅಡಿ ಕ್ರಮ ಕೈಗೊಳ್ಳಲು ದೂರು ಅರ್ಜಿಯನ್ನು ಈಗಾಗಲೇ ತನಿಖೆ ಕೈಗೊಂಡಿದ್ದ ಬಿ.ಎಂ.ಟಿ.ಎಫ್ ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ ರವಾನಿಸ ಬಹುದಾಗಿರುತ್ತದೆಂದು ಅಭಿಪ್ರಾಯ ನೀಡಿದ ಮೇರೆಗೆ ಯಶವಂತಕುಮಾರ್.ಎಂ.ಆರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತದಳ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನಗರ ರವರು ರವರಿಗೆ ಮುಂದಿನ ಕಾನೂನು ಕ್ರಮಕ್ಕಾಗಿ ತಾವು ದೂರನ್ನು ಬಿ.ಎಂ.ಟಿ.ಎಫ್ ಪೊಲೀಸ್ ಠಾಣೆಗೆ ಸಲ್ಲಿಸಬಹುದಾಗಿರುತ್ತದೆಂದು ಹಿಂಬರಹವನ್ನು ನೀಡಲಾಗಿರುತ್ತದೆ.

ಈ ಮಧ್ಯದಲ್ಲಿ ತಾವುಗಳು ದಿನಾಂಕ:-04-03-2020 ರವರು ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಹಾಜರಾಗಿ ಬಿ.ಡಿ.ಎ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಡಿ.ಎನ್.ಬೆಟ್ಟೇಗೌಡ ಮತ್ತು ಎಂ.ಮಲ್ಲಣ್ಣ, ಪ್ರದಾನ ಕಾರ್ಯದರ್ಶಿ ರವರು ದಿನಾಂಕ:30-05-2016 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿದ್ದು, ಅಧಿಕಾರದಲ್ಲಿ ಮುಂದುವರೆದಿರುತ್ತಾರೆ. ಅಲ್ಲದೇ ಜೇಷ್ಠತೆಯನ್ನು ಪಾಲನೆ ಮಾಡಿ ಲಾಟರಿ ಮೂಲಕ ನಿವೇಶನಗಳನ್ನು ಹಂಚಿಕೆ ಮಾಡದೇ ಸಂಘದ ಸದಸ್ಯರಲ್ಲದವರಿಗೆ/ಎರವಲು ಸೇವೆ ಮೇಲಿರುವ ನೌಕರರಿಗೆ ನಿವೇಶನಗಳನ್ನು ಹಂಚಿಕೆ ಮಾಡಿರುವುದಲ್ಲದೇ, ಸಂಘದ ಸದಸ್ಯರುಗಳಲ್ಲದ ಬಿ.ಡಿ.ಎ ನೌಕರರಲ್ಲದ ಇತರರಿಗೆ ನಿವೇಶನ ಹಂಚಿಕೆ ಮಾಡಿರುತ್ತಾರೆ ಮತ್ತು ಬಿ.ಡಿ.ಎ ಪ್ರಾಧಿಕಾರವು ಪಾರ್ಕ್ ಜಮೀನನ್ನು ಸಂಘಕ್ಕೆ ಹಸ್ತಾಂತರ ಮಾಡದೇ ಇದ್ದರೂ ಸಹ ನಕ್ಷೆಯಲ್ಲಿ ತೋರಿಸಿ ಸಿ.ಎ.ನಿವೇಶನ ಮಾರಾಟ ಮಾಡಿರುವುದಲ್ಲದೇ, ಕರ್ನಾಟಕ ಸಂಘಗಳ ನೋಂಧಣಿ ಕಾಯಿದೆ 1960 ರ

ಕಲಂ.11 ರಂತೆ 2010 ರಿಂದ ಸರ್ವ ಸದಸ್ಯರ ಸಭೆ ನಡೆಸಿರುವುದಿಲ್ಲ ಹಾಗೂ ಇತ್ಯಾದಿ ಅಂಶಗಳನ್ನೊಳಗೊಂಡ ದೂರನ್ನು ನೀಡಿ ಬಾರತ ದಂಡ ಸಂಹಿತೆಯ ಕಲಂನಡಿಯಲ್ಲಿ ಪ್ರಕರಣ ದಾಖಲಿಸುವಂತೆ ಕೋರಿರುವುದು ಸರಿಯಷ್ಟೇ.

ತಾವು ಈಗ ದೂರಿನಲ್ಲಿ ತಿಳಿಸಿರುವ ಅಂಶಗಳು ಮತ್ತು ಈಗಾಗಲೇ ಶೇಷಾದ್ರಿಪುರಂ ಪೊಲೀಸ್ ಠಾಣೆ ಯಲ್ಲಿ (ಮೊ.ಸಂ.69/2016) ದಾಖಲಾಗಿ ಮಾನ್ಯ ನ್ಯಾಯಾಲಯದಲ್ಲಿ ಸಿ.ಸಿ.ನಂಬರ್ – 3681/2018 ರಲ್ಲಿ ವಿಚಾರಣೆಯಲ್ಲಿರುವ ಪ್ರಕರಣದಲ್ಲಿನ ಅಂಶಗಳು ಹಾಗೂ ಆರೋಪಿತರು ಒಬ್ಬರೇ ಆಗಿದ್ದು, ಒಂದೇ ವಿಷಯ ಮತ್ತು ಎರಡು ಪ್ರಕರಣಗಳಿಗೆ ಒಬ್ಬರೇ ಆರೋಪಿತರಿರುವುದರಿಂದ ಮತ್ತೊಂದು ಎಫ್.ಐ.ಆರ್ ಅನ್ನು ದಾಖಲಿಸಲು ಕಾನೂನಿನಲ್ಲಿ ಅವಕಾಶ ಇಲ್ಲದೇ ಇರುವ ಪ್ರಯುಕ್ತ, ತಾವು ನೀಡುತ್ತಿರುವ ದೂರು ಮತ್ತು ದೂರಿನೊಂದಿಗೆ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಸ್ವೀಕರಿಸಿಕೊಂಡು ಈಗಾಗಲೇ ಶೇಷಾದ್ರಿಪುರಂ ಪೊಲೀಸ್ ಠಾಣೆ ಮೊ.ಸಂ. 69/2016 ಪ್ರಕರಣಕ್ಕೆ ಅಡಕಗೊಳಿಸಿಕೊಂಡು ( ಮಾನ್ಯ ನ್ಯಾಯಾಲಯದಲ್ಲಿ ಸಿ.ಸಿ.ನಂಬರ್ – 3681/2018 ) ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದ ಅನುಮತಿ ಪಡೆದು ತನಿಖೆಯನ್ನು ಮುಂದುವರೆಸಿ ಕಲಂ.173(8) ಸಿ.ಆರ್.ಪಿ.ಸಿ ಅಡಿಯಲ್ಲಿ ಹೆಚ್ಚುವರಿ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು.

ಇದರೊಂದಿಗೆ

1) ಶೇಷಾದ್ರಿಪುರಂ ಪೊಲೀಸ್ ಠಾಣೆ ಮೊ.ಸಂ.69/2016 ರ ಪ್ರಕರಣದ ಪ್ರಥಮ ವರ್ತಮಾನ ವರದಿ ಮತ್ತು ದೋಷಾರೋಪಣಾಪಟ್ಟಿಯ ನಕಲು
2) ಬಿ.ಎಂ.ಟಿ.ಎಫ್ ಪೊಲೀಸ್ ಠಾಣೆಯ ಮೊ.ಸಂ.15/2017 ರ ಪ್ರಕರಣದ ಪ್ರಥಮ ವರ್ತಮಾನ ವರದಿ ಮತ್ತು ದೋಷಾರೋಪಣಾ ಪಟ್ಟಿಯ ನಕಲು
3) ಬಿ.ಡಿ.ಎ ನಿವೃತ್ತ ನೌಕರನಾದ ಶ್ರೀ.ಬಿ.ಎಂ.ಚಿಕ್ಕಯ್ಯ ಬಿನ್ ಲೇಟ್ ಮಾಯಿಗಯ್ಯ, 71ವರ್ಷ, ನಂ.114, 1ನೇ ಕ್ರಾಸ್, ಸೆಂಟ್ರಲ್ ಎಕ್ಸೈಜ್ ಲೇಔಟ್, ವಿಜಯನಗರ, ಬೆಂಗಳೂರು–40 ಮತ್ತು ಇತರರು ದಿನಾಂಕ:17-06-2017 ರಂದು ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್ ಪೋರ್ಸ್, ಬೆಂಗಳೂರು ರವರಿಗೆ ಸಲ್ಲಿಸಿರುವ ದೂರಿನ ನಕಲು ಪ್ರತಿ
4) ಬಿ.ಡಿ.ಎ ವಿಶೇಷ ಕಾರ್ಯನಿರತಪಡೆ ಮತ್ತು ಜಾಗೃತದಳದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರು ದಿನಾಂಕ:08-11-2019 ಮತ್ತು ದಿನಾಂಕ:31-12-2019 ರಂದು ನೀಡಿರುವ ದೂರಿನ ಪ್ರತಿಗಳನ್ನು ಲಗತ್ತಿಸಿರುತ್ತದೆ.

ದಿನಾಂಕ:–09-03-2020
ಸ್ಥಳ:– ಬೆಂಗಳೂರು ನಗರ

ಪೊಲೀಸ್ ಇನ್ಸ್‌ಪೆಕ್ಟರ್
ಶೇಷಾದ್ರಿಪುರಂ ಪೊಲೀಸ್ ಠಾಣೆ
ಬೆಂಗಳೂರು ನಗರ.

ಕರ್ನಾಟಕ ರಾಜ್ಯ ಪೊಲೀಸ್

# ಪ್ರಥಮ ವರ್ತಮಾನ ವರದಿ

(ದಂಡಪ್ರಕ್ರಿಯ ಸಂಹಿತೆ ಕಲಂ 154 ರ ಕೆಳಗೆ)

ಘನ ನ್ಯಾಯಾಲಯ : 4th Addl.CMM Court,Nrupatunga Road, Bangalore City

1. ಜಿಲ್ಲೆ : Bengaluru city ವೃತ್ತ/ಉಪ ವಿಭಾಗ : Seshadripuram Sub-Divisi ಪೊಲೀಸ್ ಠಾಣೆ : Seshadripuram PS

ಅಪರಾಧ ಸಂಖ್ಯೆ : 0069/2016 ಪ್ರ.ವ.ವ.ದಿನಾಂಕ : 17/05/2016

2. ಕಾಯ್ದೆ ಮತ್ತು ಕಲಂಗಳು : IPC 1860 (U/s-406,420,34)

3. (a) ಕೃತ್ಯ ನಡೆದ ದಿನ : Sunday ದಿನಾಂಕ ದಿಂದ : 01/01/2006 ದಿನಾಂಕ ವರೆಗೆ : 16/05/2016

ವೇಳೆಯಿಂದ : 00:01:00 ವೇಳೆಯವರೆಗೆ : 00:00:00

(b) ಠಾಣೆಯಲ್ಲಿ ವರ್ತಮಾನ ಸ್ವೀಕರಿಸಿದ ದಿನಾಂಕ : 17/05/2016 18:15:00 ಬರವಣಿಗೆಯಲ್ಲಿ / ಹೇಳಿಕೆ : Written

(c) ಪಿರ್ಯಾದುದಾರ / ಬಾತ್ಮೀದಾರ ತಡವಾಗಿ ವರದಿ ಮಾಡಿದಕ್ಕೆ ಕಾರಣಗಳು :

(d) ಜನರಲ್ ಡೈರಿ ಉಲ್ಲೇಖ ಸಂಖ್ಯೆ ಮತ್ತು ಸಮಯ : 27 , 18:15:00

4. (a) ಕೃತ್ಯ ನಡೆದ ಸ್ಥಳ :

B.D.A Office, T.Chowdaiah Road, K.P.west, Shesadripuram, Bengaluru city, Karnataka, 560020

(b) ಪೊಲೀಸ್ ಠಾಣೆ ಯಿಂದ ಇರುವ ದಿಕ್ಕು ಮತ್ತು ದೂರ : 1 KM Towards North

(c) ಗ್ರಾಮ : B.D.A.OFFICE ಗಸ್ತಿನ ಹೆಸರು : BEAT 6

(d) ಸ್ಥಳವು ಬೇರೆ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವಂತಹದ್ದು ಆದರೆ ಆ ಪೊಲೀಸ್ ಠಾಣೆಯ ಹೆಸರು :

ಜಿಲ್ಲೆ :

5. ಪಿರ್ಯಾದುದಾರ/ಬಾತ್ಮೀದಾರ :

(a) ಹೆಸರು : B M Chikkaiah ತಂದೆ / ಗಂಡನ ಹೆಸರು : Late Mayigaiah

(b) ವಯಸ್ಸು : 71 (c) ವೃತ್ತಿ : Retired Person

(d) ಧರ್ಮ : (e) ಜಾತಿ :

(f) ಫ್ಯಾಕ್ಸ್ : (g) ಇ-ಮೇಲ್ :

(h) ದೂರವಾಣಿ : 9448270203 (i)ರಾಷ್ಟ್ರೀಯತೆ : India

(j) ಪಾಸ್ ಪೋರ್ಟ್ ಸಂಖ್ಯೆ : ನೀಡಿದ ದಿನಾಂಕ :

(6)

(k) ವಿಳಾಸ No 114, 1st cross, Central Excise Layout, Vijayanagara, Bengaluru city, Karnataka-560040

(l) ಲಿಂಗ Male

(m) ಪಿರ್ಯಾದುದಾರ ಖುದ್ದಾಗಿ ನೋಡಿದ್ದರೆ ಅಥವಾ ಕೇಳಿಸಿಕೊಂಡಿದ್
ಪಿರ್ಯಾದುದಾರರು ಕೃತ್ಯವನ್ನು ನೋಡಿದ್ದಾರೆ

---

6. ಗೊತ್ತಿರುವ / ಅನುಮಾನಿತ/ಅಪರಿಚಿತ ವ್ಯಕ್ತಿಯ ಪೂರ್ತಿ ವಿವರಗಳು

| Sl.No. | ಹೆಸರು / ತಂದೆಯ ಹೆಸರು / ಜಾತಿ / ವಿಳಾಸ | ವಿಧ | ವ್ಯಕ್ತಿಯ ವಿಧ | ಲಿಂಗ | ವಯಸ್ಸು | ವೃತ್ತಿ |
|---|---|---|---|---|---|---|
| 1 | Bettegowda D N(A1) ,President, BDA Employee Welfare Association,,T.Chowdaiah Road, K.P.West, ShesadripuramBengaluru city, Karnataka-560020 | Accused | Adult | Male | | |
| 2 | Mallanna M(A2) ,Principal Secretory, BDA Employees Welfare Associa,ShesadripuramBengaluru city, Karnataka-560020 | Accused | Adult | Male | | |

7. ನೊಂದವರ ವಿವರಗಳು

| Sl. No | ಹೆಸರು | ವಿಳಾಸ | ಗಾಯದ ವಿಧ | ಲಿಂಗ | ವಯಸ್ಸು | ವೃತ್ತಿ |
|---|---|---|---|---|---|---|
| 1 | | | | | | |

8. ಕಳುವಾಗಿರುವ / ಬಾಗಿಯಾಗಿರುವ ಸ್ವತ್ತುಗಳ ವಿವರಗಳು

| Sl.No | Property Type | Item description | Estimated Value (in Rs.) |
|---|---|---|---|
| 1 | | | |

ಕಳುವಾಗಿರುವ / ಬಾಗಿಯಾಗಿರುವ ಸ್ವತ್ತುಗಳು ಮೌಲ್ಯ :

9. ಪಂಚನಾಮ ವರದಿ / ಯು.ಡಿ. ಕೇಸ್. ಸಂಖ್ಯೆ :

10. ಪ್ರಥಮ ವರ್ತಮಾನ ವರದಿಯ ವಿವರಗಳು

ಇಲಾಖೆಯಲ್ಲಿ ಕರ್ನಾಟಕ ಸೊಸೈಟೀಸ್ ಆಕ್ಟ್ 1960 ರ ಅಡಿಯಲ್ಲಿ ನೋಂದಣಿಯಾಗಿ ಕಾಲಕಾಲಕ್ಕೆ ಪರಿಷ್ಕೃತಗೊಳ್ಳುವ ವೇತನದಲ್ಲಿ ಬಿ.ಡಿ.ಎ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರುಗಳಿಂದ ಹಣವನ್ನು ಕಟಾವು ಮಾಡಿಕೊಂಡಿದ್ದು ಬಿ.ಡಿ.ಎ ನೌಕರರ ಸಂಬಳದಲ್ಲಿ ಹಣ ಕಟಾವುಗೊಂಡಾಗಿನಿಂದಲೂ ಬಿ.ಡಿ.ಎ ನೌಕರರು ಬಿ.ಡಿ.ಎ ನೌಕರರ ಸಂಘದಿಂದ ನಿವೇಶನ ಪಡೆಯಲು ಹಕ್ಕುವುಳ್ಳವರಾಗಿರುತ್ತಾರೆ. ಬಿ.ಡಿ.ಎ ನೌಕರರ ಸಂಘವು ಹಿಂದಿನಿಂದಲೂ ಪ್ರಾಧಿಕಾರದ ನೌಕರರಿಗೆ ನಿವೇಶನ ಹಂಚಿಕೆ ಮಾಡಲು ಸಗಟು ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಪ್ರಾಧಿಕಾರಕ್ಕೆ ಮನವಿ ಮಾಡಿಕೊಳ್ಳುತ್ತಿತ್ತು. ಈ ಮಧ್ಯದಲ್ಲಿ 2001-02ನೇ ಇಸವಿಯಲ್ಲಿ ಬಿ.ಡಿ.ಎ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್ ಎಂಬ ಮತ್ತೊಂದು ಸಂಘ ಸ್ಥಾಪನೆಗೊಂಡು ಹಾಲಿ ಆರೋಪಿಯಾದ ಡಿ.ಎನ್.ಬೆಟ್ಟೇಗೌಡ ಎಂಬುವರು ಅಧ್ಯಕ್ಷರಾಗಿರುತ್ತಾರೆ.

ದಿನಾಂಕ:12-01-2006 ರಲ್ಲಿ ಪ್ರಾಧಿಕಾರದ ಸಿ & ಡಿ ಗುಂಪಿನ ನೌಕರರಿಗೆ ಮಾತ್ರ ನಿವೇಶನ ರಚಿಸಿ ಹಂಚಿಕೆ ಮಾಡಲು ಬಿ.ಡಿ.ಎ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್ ಪರವಾಗಿ ಸಗಟು ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಪ್ರಾಧಿಕಾರದ ನೌಕರರು ಮತ್ತು ಬಿ.ಡಿ.ಎ ನೌಕರರ ಸಂಘವು ಪ್ರಾಧಿಕಾರಕ್ಕೆ ಮನವಿ ಮಾಡಿದಾಗ ಪ್ರಾಧಿಕಾರವು ಬಿ.ಡಿ.ಎ ನೌಕರರ ಸಂಘಕ್ಕೆ ಸಗಟು ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಸದರಿ ಮನವಿಯನ್ನು ಪುರಸ್ಕರಿಸಿದ ಸರ್ಕಾರವು ದಿನಾಂಕ:19-04-2006 ರಂದು ಪ್ರಾಧಿಕಾರವು ತನ್ನ ನೌಕರರಿಗೆ ನಿವೇಶನ ಹಂಚಿಕೆ ಮಾಡಲು ತಾತ್ವಿಕ ಅನುಮತಿ ನೀಡಿದ ಆಧಾರದ ಮೇಲೆ ಪ್ರಾಧಿಕಾರವು ಒಟ್ಟು 45 ಎಕರೆ ಜಮೀನನ್ನು ಮಂಜೂರು ಮಾಡಲು ನಿರ್ಣಯ ಕೈಗೊಂಡು ಮೊದಲನೆ ಹಂತವಾಗಿ ದೊಡ್ಡಕಲ್ಲಸಂದ್ರ ಗ್ರಾಮದಲ್ಲಿ ಪ್ರಾಧಿಕಾರವು ಸ್ವಾಧೀನಪಡಿಸಿಕೊಂಡಿದ್ದ 33 ಎಕರೆ 02 ಗುಂಟೆ ಜಮೀನನ್ನು ಬಿ.ಡಿ.ಎ ನೌಕರರ ಸಂಘಕ್ಕೆ ಬಿಡುಗಡೆ ಮಾಡಿರುತ್ತದೆ. ಪ್ರಾಧಿಕಾರದಿಂದ ಜಮೀನು ಬಿಡುಗಡೆಯಾದ ನಂತರ ಬಿ.ಡಿ.ಎ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್ ರವರು ಸುತ್ತೋಲೆಯನ್ನು ಹೊರಡಿಸಿ ಪಿರ್ಯಾದುದಾರರು ಮತ್ತು ಇತರೆ ನಿವೃತ್ತ ಬಿ.ಡಿ.ಎ ನೌಕರರುಗಳಿಂದ ಸದಸ್ಯತ್ವ ಶುಲ್ಕ 1050/-ರೂ ಮತ್ತು ನಿವೇಶನದ ಮೌಲ್ಯ 2 ಕಂತುಗಳಲ್ಲಿ ಒಟ್ಟು 1,50,000/-ರೂಗಳನ್ನು ಪಡೆದುಕೊಂಡು, ಪ್ರಾಧಿಕಾರದ ಬೈಲಾದಲ್ಲಿ ಪ್ರಾಧಿಕಾರದ ನೌಕರರನ್ನು ಹೊರತು ಪಡಿಸಿ ಬೇರೆಯವರಿಗೆ ಅಸೋಸಿಯೇಷನ್ನಲ್ಲಿ ಸದಸ್ಯತ್ವ ಪಡೆಯಲು ಅವಕಾಶವಿಲ್ಲದೇ ಇದ್ದರೂ ಸಹ ಪ್ರಾಧಿಕಾರದಿಂದ ಬಿಡುಗಡೆಯಾದ ಜಮೀನಿನಲ್ಲಿ ನಿವೇಶನಗಳನ್ನು ರಚಿಸಿ ಪ್ರಾಧಿಕಾರದಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಮತ್ತು ನಿವೃತ್ತ ನೌಕರರಿಗೆ ಹಂಚಿಕೆ ಮಾಡಬೇಕಾದ ನಿವೇಶನಗಳನ್ನು ಯಾರ ಅನುಮತಿಯನ್ನು ಪಡೆಯದೇ ಕಾನೂನು ಬಾಹಿರವಾಗಿ ಇತರೆ ಇಲಾಖೆಯ ನೌಕರರಿಗೆ, ಎರವಲು ಸೇವಾ ನೌಕರರಿಗೆ ಮತ್ತು ಸಾರ್ವಜನಿಕರಿಗೆ ಹಂಚಿಕೆ ಮಾಡಿ ಪಿರ್ಯಾದುದಾರರಿಗೆ ಮತ್ತು ಇತರೆ ಕೆಲವು ನಿವೃತ್ತ ನೌಕರರಿಗೆ ನಂಬಿಸಿ ಮೋಸ ಮಾಡಿರುವುದಲ್ಲದೆ, ಪ್ರಾಧಿಕಾರದಿಂದ 2, 3 & 4ನೇ ಹಂತದಲ್ಲಿ ಲಿಂಗಧೀರನಹಳ್ಳಿ ಗ್ರಾಮದಲ್ಲಿ ನೀಡಿದ ಜಮೀನಿನಲ್ಲಿ ವಿಂಗಡಿಸಿದ ನಿವೇಶನಗಳನ್ನು ಸಹ ನೀಡದೇ ಮೋಸ ಮಾಡಿರುತ್ತಾರೆಂದು ಕೊಟ್ಟ ದೂರು ಇತ್ಯಾದಿ. ಕೃತ್ಯ ನಡೆದ ಸ್ಥಳದ ಅಕ್ಷಾಂಶ-12.996696 ರೇಖಾಂಶ-77.583530 ಆಗಿರುತ್ತ

11. (a) ತೆಗೆದುಕೊಂಡ ಕ್ರಮ:

Investigation

(b) ಪ್ರ.ವ.ವರದಿಯನ್ನು ಪಿರ್ಯಾದಿಯವರಿಗೆ ಅವರದೆ ಭಾಷೆಯಲ್ಲಿ ವಿವರಿಸಿ, ಓದಿ ಹೇಳಲಾಗಿದೆ

ಅದರ ಪ್ರತಿಯನ್ನು ಪುಕಟ್ಟೆಯಾಗಿ ಕೊಡಲಾಗಿದೆ? : Yes

(c) ಪೊಲೀಸ್ ಅಧಿಕಾರಿಯು ತನಿಖೆಗೆ ಸ್ಥಳಕ್ಕೆ ಧಾವಿಸದಿದ್ದಲ್ಲಿ ಅಥವಾ ತನಿಖೆ ಮಾಡಲು ನಿರಾಕರಿಸಿದಲ್ಲಿ ಕಲಂ 157 ಸಿ.ಆರ್.ಪಿ.ಸಿ ಯ ಕಲಂ (ಎ)ಅಥವಾ (ಬಿ)ಯಡಿ ಕಾರಣವನ್ನು ದಾಖಲಿಸಬೇಕು.

proceed

12. ಪಿರ್ಯಾದಿಯ ಸಹಿ/ ಹೆಬ್ಬೆರಳಿನ ಗುರುತು

13. ನ್ಯಾಯಾಲಯಕ್ಕೆ ಕಳುಹಿಸಿದ ದಿನಾಂಕ ಮತ್ತು ಸಮಯ : 17/05/2016 19:15:00

14. ನ್ಯಾಯಾಲಯಕ್ಕೆ ತೆಗೆದುಕೊಂಡು ಹೋದ ಪಿಸಿ/ ಹೆಚ್.ಸಿ . SRINIVASA A.P , PC 12949

ಓದಿ ಹೇಳಲಾಗಿ ಕೇಳಲಾಗಿ ಸರಿಯಿದೆ

ಠಾಣಾಧಿಕಾರಿಯ ಸಹಿ

ಪೊಲೀಸ್ ಸಬ್ ಇನ್ಸ್‌ಪೆಕ್ಟರ್
[illegible]
[illegible]

ಪ್ರತಿಗಳು : Superintendent of Police/Commissioner of Police
DCP Central, Bangalore City
ACP SSPuram Sub Division
Complainant Copy
Station Copy

5

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಸಹಕಾರ ಸೌಧ, 1ನೇ ಮಹಡಿ, 1ನೇ ಮುಖ್ಯ ರಸ್ತೆ 8ನೇ ಅಡ್ಡ ರಸ್ತೆ ಮಲ್ಲೇಶ್ವರಂ, ಬೆಂಗಳೂರು-03.

ಸಂಖ್ಯೆ: ಉನಿಬೆನ-4/ಎಸ್‌ಎಲ್‌ಆರ್/ದೂರು/[illegible]/2019-20 ದಿನಾಂಕ: 24-02-2020

ವಿಷಯ: ಶ್ರೀ ಡಿ.ಎನ್. ಬೆಟ್ಟೇಗೌಡ, ಅಧ್ಯಕ್ಷರು, ಮತ್ತು ಶ್ರೀ ಎಂ. [illegible] ಮಲ್ಲಿಕ್ಕ ಪ್ರಧಾನ ಕಾರ್ಯದರ್ಶಿ, ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಬೆಂಗಳೂರು ಇವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವ ಕುರಿತು.

ಉಲ್ಲೇಖ: ಮಾನ್ಯ ವಿಧಾನ ಪರಿಷತ್ತಿನ ಹಕ್ಕು ಬಾಧ್ಯತಾ ಸಮಿತಿಯ ಸಭಾ ನಡವಳಿ ದಿನಾಂಕ:10-01-2020 ಹಾಗೂ 10-02-2020

**********

ಪ್ರಸ್ತಾವನೆ:-

ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ಬಿ.ಡಿ.ಎ ಆವರಣ, ಕುಮಾರ ಪಾರ್ಕ್, ಬೆಂಗಳೂರು ನೋಂದಣಿ ಸಂಖ್ಯೆ:653/2001-02 ಈ ಸಂಘವು ಬಿ.ಡಿ.ಎ ನೌಕರರಲ್ಲದವರಿಗೆ ನಿವೇಶನ ಹಂಚಿಕೆ ಮಾಡಿದ ಸಂಬಂಧ ಸಂಘದ ಪದಾಧಿಕಾರಿಗಳ ವಿರುದ್ಧ ಶ್ರೀ ಡಿ.ಟಿ. ಕೃಷ್ಣೇಗೌಡ ಮತ್ತು ಇತರರು ಮಾನ್ಯ ಲೋಕಾಯುಕ್ತರಿಗೆ ದೂರು ಅರ್ಜಿ ಸಲ್ಲಿಸಿದ ಮೇರೆಗೆ ಸದರಿ ಕಛೇರಿ ನಿರ್ದೇಶನದಂತೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 25 ರಡಿ ವಿಚಾರಣೆ ನಡೆಸಿದ ಶ್ರೀ ಹೆಚ್.ಟಿ ಶಿವನಂಜಯ್ಯ, ಅಧಿಕ ಜಿಲ್ಲಾ ನೋಂದಣಾಧಿಕಾರಿ, ಬಿಡಿಎ ಬೆಂಗಳೂರು ಇವರು ಕೈಗೊಂಡ ವಿಚಾರಣೆಯಲ್ಲಿ ಆರೋಪಗಳು ಸಾಬೀತಗಿರುತ್ತವೆ. ಮುಂದುವರೆದು, ಇದೆ ಆರೋಪಗಳ ಸಂಬಂಧ ಇಲಾಖೆಗೆ/ಸರ್ಕಾರಕ್ಕೆ ಸಲ್ಲಿಸಲ್ಪಟ್ಟ ದೂರು ಅರ್ಜಿಗಳಲ್ಲಿ ಸದರಿ ಸಂಘದ ಪದಾಧಿಕಾರಿಗಳ ವಿರುದ್ಧ ಕ್ರಮಕ್ಕೆ ವಿನಂತಿಸಲಾಗಿದ್ದು, ಅದರಂತೆ ಶ್ರೀ ಜಿ.ನಾರಾಯಣಪ್ಪ ಉಪ ನೋಂದಣಾಧಿಕಾರಿ ಹೆಸರಘಟ್ಟ, ಬೆಂಗಳೂರು ಹಾಗೂ ಶ್ರೀ ರಂಗಳಗಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರುಗಳು ಕೈಗೊಂಡ ವಿಚಾರಣೆಯಲ್ಲಿಯೂ ಆರೋಪಗಳು ಸಾಬೀತಾಗಿರುತ್ತವೆ.

ನಿವೇಶನ ಹಂಚಿಕೆಯಲ್ಲಿ ವಿಧಿಸಿರುವ ಷರತ್ತಿನಂತೆ ಮತ್ತು ಬೈಲಾ ಅವಕಾಶಗಳಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸೇವೆಯಲ್ಲಿರುವ ನೌಕರರು/ಅಧಿಕಾರಿಗಳಿಗೆ ಮಾತ್ರ ನಿವೇಶನ ಹಂಚಿಕೆ ಮಾಡಬೇಕಾಗಿರುತ್ತದೆ. ಆದರೆ, ಈ ಷರತ್ತುಗಳು ಉಲ್ಲಂಘನೆಯಾಗಿರುವುದು ವಿಚಾರಣಾ ವರದಿಗಳಲ್ಲಿ ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

ಆದಾಗ್ಯೂ, ಬಿಡಿಎ ಪ್ರಾಧಿಕಾರದ ಸೇವೆಯಿಂದ ದಿನಾಂಕ:31-05-2016 ರಂದು ವಯೋನಿವೃತ್ತಿ ಹೊಂದಿದ್ದರೂ ಸಹ ಶ್ರೀ ಡಿ.ಎನ್. ಬೆಟ್ಟೇಗೌಡ, ಅಧ್ಯಕ್ಷರು ಮತ್ತು ಶ್ರೀ ಎಂ.ಎನ್. ಮಲ್ಲಣ್ಣ, ಪ್ರಧಾನ ಕಾರ್ಯದರ್ಶಿ ಇವರುಗಳು ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ಈ ಸಂಘದ ಪದಾಧಿಕಾರಿಗಳಾಗಿ ನಿಯಮ ಬಾಹಿರವಾಗಿ ಮುಂದುವರೆದು ಸಂಘವು ಹೊಂದಿರುವ ಬ್ಯಾಂಕ್ ಖಾತೆಗಳನ್ನು ವ್ಯವಹರಿಸುತ್ತಿರುವುದು ಹಾಗೂ ಸಂಘದ ಹೆಸರಿನಲ್ಲಿ ನಿವೇಶನ ಹಂಚಿಕೆ ಮತ್ತು ವಿಕ್ರಯ ನೋಂದಣಿ ಮಾಡುತ್ತಿರುವುದೂ ಸಹ ದಾಖಲೆಗಳಿಂದ ಧೃಢ ಪಟ್ಟಿರುತ್ತದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದಲ್ಲಿ ನಿಯಮ ಬಾಹಿರವಾಗಿ ಮುಂದುವರೆಯುತ್ತಿರುವ ಪದಾಧಿಕಾರಿಗಳಾದ ಶ್ರೀ ಡಿ.ಎನ್. ಬೆಟ್ಟೇಗೌಡ, ಹಾಗೂ ಶ್ರೀ ಮಲ್ಲಣ್ಣ ಪ್ರಧಾನ ಕಾರ್ಯದರ್ಶಿ ಇವರುಗಳು ಸಂಘದ ಹೆಸರಿನಲ್ಲಿ ಕೆನರಾ ಬ್ಯಾಂಕ್, ಬಿ.ಡಿ.ಎ.ಶಾಖೆ, ಬಿ.ಡಿ.ಎ ಆವರಣ ಬೆಂಗಳೂರು ಈ ಬ್ಯಾಂಕಿನಲ್ಲಿ ಹೊಂದಿರುವ ಉಳಿತಾಯ ಖಾತೆ ಸಂಖ್ಯೆ 2828101050381 ಮತ್ತು ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಬಿ.ಡಿ.ಎ ಆವರಣ ಬೆಂಗಳೂರು ಈ ಬ್ಯಾಂಕಿನಲ್ಲಿ ಹೊಂದಿರುವ ಉಳಿತಾಯ ಖಾತೆ ಸಂಖ್ಯೆ6619 ಈ ಖಾತೆಗಳ ವ್ಯವಹಾರವನ್ನು ನಿಯಮ ಬಾಹಿರವಾಗಿ ವ್ಯವಹರಿಸುತ್ತಿರುತ್ತಾರೆ. ಮುಂದುವರೆದು, ಈ ಸಂಘದ ಪದಾಧಿಕಾರಿಗಳಾಗಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 11 ರಂತೆ 2010 ರಿಂದ ಸರ್ವ ಸದಸ್ಯರ ಸಭೆ ನಡೆಸಿರುವುದಿಲ್ಲ, ಕಲಂ 12 ರಂತೆ ಸಂಘದ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿಸಿರುವುದಿಲ್ಲ ಹಾಗೂ ಕಲಂ 13 ರಂತೆ ಲೆಕ್ಕ ಪತ್ರ ದಾಖಲೆಗಳು, ಚುನಾಯಿತ ಕಾರ್ಯಕಾರಿ ಸಮಿತಿ ಪಟ್ಟಿ, ಸರ್ವ ಸದಸ್ಯರ ಸಭೆ ನೋಟೀಸ್ ಹಾಗೂ ನಡವಳಿಯನ್ನು ಸಕ್ಷಮ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳಿಗೆ ಸಲ್ಲಿಸಿ ಸ್ವೀಕೃತಿ ಪಡೆಯದೆ ಕಲಂ 11, 12 ಮತ್ತು 13 ರ ಉಪಬಂಧಗಳನ್ನು ಉಲ್ಲಂಘಿಸಿ ಕಾನೂನು ಬಾಹಿರವಾಗಿ ಅಧಿಕಾರದಲ್ಲಿ ಮುಂದುವರೆದಿರುತ್ತಾರೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಡಿ.ಎನ್. ಬೆಟ್ಟೇಗೌಡ, ಅಧ್ಯಕ್ಷರು ಮತ್ತು ಶ್ರೀ ಎಂ. ಮಲ್ಲಣ್ಣ, ಪ್ರಧಾನ ಕಾರ್ಯದರ್ಶಿ, ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ಬಿ.ಡಿ.ಎ ಆವರಣ, ಕುಮಾರ ಪಾರ್ಕ್, ಬೆಂಗಳೂರು ಇವರುಗಳ ವಿರುದ್ಧ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 28 ಮತ್ತು 29 ರಂತೆ ಮತ್ತು ಪದಾಧಿಕಾರಿಗಳಾಗಿ ಅನಧಿಕೃತವಾಗಿ ಮುಂದುವರೆದು ಅಧಿಕಾರ ದುರುಪಯೋಗ, ವಂಚನೆ ಪ್ರಕರಣ ಇತ್ಯಾದಿ ಕೃತ್ಯಗಳಿಗಾಗಿ ಕ್ರಿಮಿನಲ್ ದಾವೆ ಹೂಡುವ ಸಲುವಾಗಿ ಸಂಬಂಧಪಟ್ಟ ಕಾರ್ಯ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಅಧಿಕಾರ ನೀಡುತ್ತಾ ಈ ಕೆಳಕಂಡಂತೆ ಆದೇಶಿಸಿದೆ.

-: ಆದೇಶ :-

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಡಿ.ಎನ್. ಬೆಟ್ಟೇಗೌಡ, ಅಧ್ಯಕ್ಷರು, ಮಲ್ಲಣ್ಣ, ಪ್ರಧಾನ ಕಾರ್ಯದರ್ಶಿ, ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್

ಅಸೋಸಿಯೇಷನ್ (ರಿ) ಬಿ.ಡಿ.ಎ ಆವರಣ, ಕುಮಾರ ಪಾರ್ಕ್, ಬೆಂಗಳೂರು ಇವರುಗಳ ವಿರುದ್ಧ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 28 ಮತ್ತು 29 ರಡಿ ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಶ್ರೀ ಮದಕರಿ ನಾಯಕ, ಅಧೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ, ಕಛೇರಿ, 4ನೇ ವಲಯ, ಬೆಂಗಳೂರು ಇವರಿಗೆ ಅಧಿಕಾರ ನೀಡಿ ಆದೇಶಿಸಿದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ದಿನಾಂಕ: 24-02-2020 ರಂದು ಹೊರಡಿಸಿದೆ.

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು
4ನೇ ವಲಯ, ಬೆಂಗಳೂರು ನಗರ ಜಿಲ್ಲೆ

ಇವರಿಗೆ,

ಶ್ರೀ ಮದಕರಿ ನಾಯಕ,
ಅಧೀಕ್ಷಕರು,
ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ,
4ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

ಪ್ರತಿಯನ್ನು :- ಮಾಹಿತಿಗಾಗಿ ಮಾನ್ಯ ಸಹಕಾರ ಸಂಘಗಳ ನಿಬಂಧಕರು, ನಂ.01, ಆಲಿ ಅಸ್ಕರ್ ರಸ್ತೆ, ಬೆಂಗಳೂರು ಇವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ.